
ಗೌರಿ ಲಂಕೇಶರ

ಲಂಕೇಶ್

ಜೂನ್ 13, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಸಿನಿಮಾ ನಟಿಯರ ಲಿಂಕ್


ಯಡ್ಡಿಯ ಇನ್ನಿಬ್ಬರು ಶಿಷ್ಯರ

ರಾಸಲೀಲೆ!

ನೊಣಬ ಸ್ವಾಮಿ ಮತ್ತೆ ನಾಪತ್ತೆ!



ಕೊಲೆಯಾದ ಗಣೇಶ್ ಸಾರಾಯಿರಾಣಿಯ ತಮ್ಮ!



ಸಂದರ್ಶನ


'ಆವರಣ ಕಾದಂಬರಿಯೇ ಅಲ್ಲ'



ರಕ್ಷಣಾ ವೇದಿಕೆಗಳ ಬೀದಿ ರಂಪಾಟ



ಅದೃಶ್ಯ ದೇವರು, ಅಸ್ಪೃಶ್ಯ ಭಕ್ತರು ನಡುವೆ ಗಂಟೆ ಆಡಿಸುವ ಪೂಜಾರಿಗಳು



ಹಿಂದೂ ಧರ್ಮ ಜಗತ್ತಿನಲ್ಲೇ ಅತ್ಯಂತ ಉದಾರವಾದಿ ಪರಂಪರೆಯನ್ನು ಹೊಂದಿರುವ ಧರ್ಮ ಎಂದು ಹಿಂದೂತ್ವವಾದಿಗಳು ಬೊಬ್ಬೆ ಹೊಡೆಯುತ್ತಿರುವಾಗಲೇ ಕೇರಳದ ಗುರುವಾಯೂರು ದೇವಸ್ಥಾನದ ಒಳಗೆ ಹಿಂದೂಗಳಲ್ಲದವರಿಗೆ ಪ್ರವೇಶ ನಿಷಿದ್ಧವೆಂದು ಅಲ್ಲಿನ ಪೂಜಾರಿ ಗಣ ತೀರ್ಮಾನಿಸಿದೆ. ಸರಿ, ಹಿಂದೂಗಳಲ್ಲಾದರೂ ಎಲ್ಲರಿಗೂ ದೈವ ದರ್ಶನ ಉಂಟೇ? ಮೊನ್ನೆ ಶಬರಿ ಮಲೈ ದೇವಸ್ಥಾನದ ಠೇಕೇದಾರರು ಆ ದೇವಸ್ಥಾನದ ಮೂರ್ತಿಯನ್ನು ನಟಿ ಜಯಮಾಲಾ ಎಂಬ ಹೆಂಗಸು ಮುಟ್ಟಿ ಅಪವಿತ್ರ ಮಾಡಿದರೆಂದು ಖಟ್ಲೆಯನ್ನೇ ಹಾಕುವವರೆಗೆ ಹೋದರು. ಹಾಗಿದ್ದಲ್ಲಿ ಹಿಂದೂ ಧರ್ಮದಲ್ಲಿ ದೇವರು ಸಂಪೂರ್ಣವಾಗಿ ಬ್ರಾಹ್ಮಣ ಪುರುಷರ ಸ್ವತ್ತೇ ಎಂದಾಯಿತು. ಉಳಿದ ಧರ್ಮಗಳಲ್ಲಿ ಕನಿಷ್ಟ ಪಕ್ಷ ಆಚಾರದಲ್ಲಿ ಏನೇ ಇದ್ದರೂ ವಿಚಾರದಲ್ಲಾದರೂ ದೇವರು ಎಲ್ಲರಿಗೂ ಸೇರಿದವನು ಎಂದು ಹೇಳುತ್ತಾರೆ.

ದೈವೋಪಾಸನೆಗೆ ಎಲ್ಲ ಧರ್ಮದಲ್ಲೂ ಪುರೋಹಿತ ಶಾಹಿ ವರ್ಗವೊಂದಿದ್ದರೂ ಆ ಧರ್ಮಗಳು ದೈವವನ್ನೇ ಅಸ್ಪೃಷ್ಟಗೊಳಿಸಿಲ್ಲ. ಅಂದರೆ ಭಕ್ತರು ಮುಟ್ಟಬಾರದೆಂದು ಭಕ್ತರಿಂದ ದೂರವಿರಿಸಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಬೇರೇ ಧರ್ಮಾನುಯಾಯಿಗಳು ತಮ್ಮ ಪ್ರಾರ್ಥನಾ ಮಂದಿರಕ್ಕೆ ಬರಬಾರದೆಂಬ ಕಟ್ಟಳೆ ವಿಧಿಸಿಲ್ಲ. ಅದರಲ್ಲಿ ಆದರ್ಶಮಯ ಆಧ್ಯಾತ್ಮ ಇಲ್ಲದಿದ್ದರೂ ಕನಿಷ್ಟ ಪಕ್ಷ ತಮ್ಮ ಧರ್ಮಪ್ರಚಾರ ಮಾಡುವ ಉದ್ದೇಶದಿಂದ ಲಾದರೂ ಆ ಬಗೆಯ ಕಟ್ಟಳೆ ಇಲ್ಲ.

ಆದರೆ ಗುರುವಾಯೂರು ದೇವಸ್ಥಾನದ ಪೂಜಾರಿಗಳು ವಯಲಾರ್ ರವಿ ಎಂಬ ಹಿಂದೂ ಪ್ರಭಾವಿ ರಾಜಕಾರಣಿಯ ಹೆಂಡತಿ ಕ್ರಿಶ್ಚಿಯನ್ ಧರ್ಮಿಷ್ಠಳಾದ್ದರಿಂದ ಅವರ ಮಗ ರವಿ ಕೃಷ್ಣ ತನ್ನ ಕೂಸನ್ನು ಕರೆದುಕೊಂಡು ದೇವಸ್ಥಾನಕ್ಕೆ ಪ್ರವೇಶ ಮಾಡಿದ್ದಕ್ಕೆ ಇಡೀ ದೇವಸ್ಥಾನವನ್ನು ತೊಳೆದು ಶುದ್ಧಿ ಮಾಡಿದ್ದಾರೆ. ಅದರ ಬಗ್ಗೆ ವಯಲಾರ್ ರವಿ ದೂರು ದಾಖಲಿಸು ವುದಾಗಿ ಎಚ್ಚರಿಸಿದ್ದಕ್ಕೆ ಪ್ರತಿಯಾಗಿ ಮೊನ್ನೆ ಇದೇ ಗುರುವಾಯೂರು ದೇವಸ್ಥಾನದ ಅರ್ಚಕ ಗಣದಲ್ಲಿ ಶೇ.70ಕ್ಕಿಂತ ಹೆಚ್ಚಿನ ಪೂಜಾರಿಗಳು ಇತರ ಧರ್ಮೀಯರಿಗೆ ಪ್ರವೇಶ ರದ್ದುಗೊಳಿಸಬೇಕೆಂದು ತೀರ್ಮಾನ ಮಾಡಿದ್ದಾರೆ.



ಈ ತೀರ್ಮಾನ ಸಂದರ್ಭದಲ್ಲಿ ಈ ದೇಶದ ಸರ್ವಧರ್ಮ ಸಹಿಷ್ಣು ಸೆಕ್ಯುಲರಿಸಮ್ಮಿಗೂ ಈ ದೇಶದ ಅಬ್ರಾಹ್ಮಣ ಪರಂಪರೆಯ ಆಧ್ಯಾತ್ಮ ದರ್ಶನಕ್ಕೂ ಮಾಡಿರುವ ಅಪಮಾನವೇ ಆಗಿದೆ. ಮೊದಲನೆಯದಾಗಿ ಗುರುವಾಯೂರು ದೇವಸ್ಥಾನಕ್ಕೆ ಸರ್ಕಾರದಿಂದ ಹಲವಾರು ಬಗೆಯ ಸೌಲಭ್ಯಗಳು ಮತ್ತು ಅನುದಾನಗಳು ದೊರೆಯುತ್ತವೆ. ಯಾವುದೇ ಸಂಸ್ಥೆ ಸರ್ಕಾರದಿಂದ ಅನುದಾನ ಪಡೆದಾಗ ಅಲ್ಲಿ ಈ ಬಗೆಯ ತಾರತಮ್ಯಗಳು ನಡೆಯಬಾರದು ಮತ್ತು ಕೆಲವು ಸಂಪ್ರದಾಯಗಳು ಆಯಾ ಸಮುದಾಯಗಳ ಪಾರಂಪರಿಕ ನಂಬಿಕೆಗಳೇ ಆಗಿದ್ದರೂ ಒಂದೊಮ್ಮೆ ಅವು ಸಮಾಜದ ಪುರೋಗಮನಕ್ಕೆ ಅಡ್ಡಿಯುಂಟು ಮಾಡುತ್ತಿದ್ದರೆ ಅದನ್ನು ನಿಷೇಧಿಸುವ ಹಕ್ಕು ಪ್ರಭುತ್ವಕ್ಕಿರುತ್ತದೆ. ಆದ್ದರಿಂದಲೇ ಅಲ್ಲವೆ ಈ ರಾಜ್ಯದಲ್ಲಿ ಬೆತ್ತಲೆ ಸೇವೆಯನ್ನು ನಿಷೇಧಿಸಿದ್ದು? ಅದರ ಹಿಂದಿರುವ ಮೌಢ್ಯಕ್ಕಿಂತ ಗುರುವಾಯೂರು ಬ್ರಾಹ್ಮಣ ಅರ್ಚಕರ ಹಿಂದಿನ ಕ್ರೌರ್ಯ ಸಮಾಜದ ಪುರೋಗಮನಕ್ಕೆ ಹೆಚ್ಚು ಗಂಡಾಂತರಕಾರಿ. ಆದರೂ ಕೇರಳದ ಎಡರಂಗ ಸರ್ಕಾರ ಸುಮ್ಮನೇ ಕೂತಿದೆ.

ಅದೇರೀತಿ ಈ ಪ್ರಕ್ರಿಯೆಯಲ್ಲಿ ಆಗಿರುವ ಶೂದ್ರ ಪರಂಪರೆಯ ಬ್ರಾಹ್ಮಣೀಕರಣ. ಗುರುವಾಯೂರಿನಲ್ಲಾಗಲೀ, ಉಡುಪಿಯಲ್ಲಾಗಲೀ ಇರುವ ದೈವ ಕೃಷ್ಣ ಶೂದ್ರ ಯಾದವರ, ಗೊಲ್ಲರ ದೈವ. ಆದರೆ ಬ್ರಾಹ್ಮಣರನ್ನು ಹೊರತುಪಡಿಸಿ ಯಾರೂ ಹತ್ತಿರ ಹೋಗುವಂತಿಲ್ಲ. ಅಷ್ಟು ಮಾತ್ರವಲ್ಲ, ಕರ್ನಾಟಕದಲ್ಲಿ ಧಾರ್ಮಿಕ ದತ್ತಿ ಇಲಾಖೆಯನ್ನು ಸ್ಥಾಪಿಸಿದ ಮೇಲೆ ಎಲ್ಲಾ ಬಗೆಯ ಶೂದ್ರ ದೈವೋಪಾಸನೆಯನ್ನೂ ಬ್ರಾಹ್ಮಣೀಕರಿಸಲಾಗಿದೆ. ಈಗ ಸರ್ಕಾರದ ಪ್ರಕಾರ ಎಲ್ಲಾ ಬಗೆಯ ಹಿಂದೂ ದೇವಸ್ಥಾನಗಳಲ್ಲೂ ಒಂದಲ್ಲ ಒಂದು ಬಗೆಯ ಆಗಮಿಕ ಪೂಜಾ ಪದ್ಧತಿಗಳೇ ನಡೆಯಬೇಕು. ಈ ಆಗಮಿಕ ಪೂಜಾ ಪದ್ಧತಿಯೇ ಮಧ್ಯವರ್ತಿ ಇರಬೇಕಾದ ಪುರೋಹಿತಶಾಹಿ ಬ್ರಾಹ್ಮಣಿಯವಾದದ್ದು. ಅದಕ್ಕೂ ಶೂದ್ರ ಮತ್ತು ದಲಿತ ಸಮುದಾಯದ ಮಧ್ಯವರ್ತಿ ಇಲ್ಲದ ಆದರ್ಶ ಆಧ್ಯಾತ್ಮಕ್ಕೂ ಸಂಬಂಧವೇ ಇಲ್ಲ. ಆದರೂ ಈಗ ಕಾನೂನುಬದ್ಧವಾಗಿ ಎಲಾ ಅಬ್ರಾಹ್ಮಣರನ್ನು ಸರ್ಕಾರ ಜನರಿಗೇ ತಿಳಿಯದಂತೆ ಹಿಂದೂ ವೀಕರಿಸಿ ಬ್ರಾಹ್ಮಣ್ಯದ ಅಧಿಪತ್ಯಕ್ಕೆ ತಂದಿಟ್ಟಿದೆ.

ಗುರುವಾಯೂರಿನಲ್ಲಿ ನಡೆಯುತ್ತಿರುವುದು ಈ ಎರಡು ದ್ರೋಹದ ಅಭಿವ್ಯಕ್ತಿ. ಸೆಕ್ಯುಲರ್ ಸರ್ಕಾರದಡಿಯಲ್ಲೂ ಬ್ರಾಹ್ಮಣವಾದ ಮುಂದುವರೆಯುವ ಪರಿ. ಹೀಗಿರುವಾಗ ಹಿಂದೂಗಳು ಒಂದು ಸಮುದಾಯವಾಗಿಯಾಗಲೀ, ಈ ದೇಶ ಒಂದು ಸಮಾನ ನಾಗರಿಕ ಹಕ್ಕುಗಳುಳ್ಳ ರಾಷ್ಟ್ರವಾಗಲೀ ಹೇಗೆ ಆಗಲು ಸಾಧ್ಯ?

ಚಾರ್ವಾಕ
ಶಿವಸುಂದರ್

ಟ್ರಿಲಿಯನ್ ಡಾಲರ್ ದೇಶ ಅಂದ್ರೆ ಏನು ಸ್ವಾಮಿ?



ಭಾರತದ್ದು ಈಗ ಟ್ರಿಲಿಯನ್ ಡಾಲರ್ ಆರ್ಥಿಕತೆಯಂತೆ! ಹಂಗಂದ್ರೇನು? ಇದಿ ಪ್ರಪಂಚದಲ್ಲಿ ಟ್ರಿಲಿಯನ್ ಡಾಲರ್ ಅಷ್ಟು ದೊಡ್ಡ ಆರ್ಥಿಕತೆವುಳ್ಳ ದೇಶಗಳು ಕೇವಲ ಹನ್ನೆರಡು ಮಾತ್ರವಂತೆ. ಅಂದರೆ ಅಮೆರಿಕ, ಕೆನಡ, ರಷ್ಯ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಬೆಲ್ಜಿಯಮ್, ಜಪಾನ್, ನಾರ್ವೆ, ಸ್ವೀಡನ್, ಚೀನಾ ದಂತಹ ದೇಶಗಳನ್ನು ಬಿಟ್ಟರೆ ನಮ್ಮ ದೇಶವೇ ಶ್ರೀಮಂತ ದೇಶ ಎಂದಾಯ್ತು. ಅಂದರೆ ಈಗ ನಮ್ಮ ದೇಶದಲ್ಲಿ 41 ಲಕ್ಷ ಕೋಟಿ ರೂಪಾಯಿಗಳಷ್ಟು ಉತ್ಪಾದನೆ ಆಗುತ್ತಿದೆ ಎಂದರ್ಥ. 106 ಕೋಟಿ ಜನಕ್ಕೆ 41 ಲಕ್ಷ ಕೋಟಿ ರೂಪಾಯಿಗಳ ಉತ್ಪಾದನೆ ಅಂದರೆ ತಲಾವಾರು ಎಷ್ಟು? ಅಂದರೆ ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಕನಿಷ್ಠ ವಾರ್ಷಿಕ 50000 ರೂ. ಮೌಲ್ಯದ ಉತ್ಪಾದನೆ ಮಾಡುತ್ತಿದ್ದಾನೆ ಎಂದರ್ಥ. ಆದರೆ ಅದರ ವಿತರಣೆ ಎಷ್ಟು ಪ್ರಜಾತಾಂತ್ರಿಕವಾಗಿ ಆಗುತ್ತಿದೆ. ಮೊನ್ನೆ ತಾನೆ ವರದಿಯಾದಂತೆ ಈ 41 ಲಕ್ಷದಲ್ಲಿ 1 ಲಕ್ಷ ಕೋಟಿ ಕೇವಲ ಅಂಬಾನಿಗಳ ಬಳಿ ಕಾಲು ಮುರಿದುಕೊಂಡು ಬಿದ್ದಿದೆ. ಈ ದೇಶದ 27 ಕುಟುಂಬಗಳ ಬಳಿ 20 ಲಕ್ಷ ಕೋಟಿಗೂ ಹೆಚ್ಚಿನ ಆಸ್ತಿ ಇದೆ. ಉಳಿದವರ ಬಳಿ ಏನಿದೆ?

ರೈತರ ಬಳಿ ವಿಷ ಇದೆ ಆತ್ಮಹತ್ಯೆ ಮಾಡಿಕೊಳ್ಳಲು? ಮಹಿಳೆಯರ ಬಳಿ ಇದೆ ಸೀಮೆ ಎಣ್ಣೆ ಸುಟ್ಟುಕೊಳ್ಳಲು? ಕಾರ್ಮಿಕರ ಬಳಿ ಇದ್ದ ಉದ್ಯೋಗವೂ ಕಂಪ್ಯೂಟರ್ ಪಾಲು. ವಿದ್ಯಾರ್ಥಿಗಳ ಬಳಿ ಕನಸುಗಳೂ ಇಲ್ಲ, ಆದರೂ ನಮ್ಮ ದೇಶ ಟ್ರಿಲಿಯನ್ ಡಾಲರ್ ಎಕಾನಮಿ. ಅದಕ್ಕೆ ಏನೋ ಕನ್ನಡದಲ್ಲಿ ಟ್ರಿಲಿಯನ್ ಡಾಲರ್‌ಗೆ ಸಮಾನಾರ್ಥಕವಾಗಿ ಒಂದು ಶಬ್ದವೂ ಇಲ್ಲ!

ವಿಜಯ ಕರ್ನಾಟಕ
ವಿಕ ಎಂಬ ವಿಕೃತಿ

ವಿಜಯ ಕರ್ನಾಟಕ ಎಂಬ ಪತ್ರಿಕೆಗೂ ಆವರಣ ಎಂಬ ಕಾದಂಬರಿಗೂ ಸಾಮ್ಯತೆಯೇನು? ಆವರಣ ಕಾದಂಬರಿ ಈಗ ಜಗಜ್ಜಾಹೀರಾಗಿರುವಂತೆ ಆರೆಸ್ಸೆಸ್‌ನ ಮತೀಯ ದ್ವೇಷದ ಪ್ರಚಾರವನ್ನು ಕಾದಂಬರಿ ರೂಪದಲ್ಲಿ ಮುಂದಿಟ್ಟಿದೆ. ವಿಜಯ ಕರನಾಟಕ ಎಂಬ ಪತ್ರಿಕೆ ಆರೆಸ್ಸೆಸಿನ ಸಿದ್ಧಾಂತದ ಪ್ರಚಾರವನ್ನೇ ದೈನಂದಿನ ಸುದ್ದಿಯ ರೂಪದಲ್ಲಿ ಕೊಡುತ್ತದೆ. ಆವರಣ ಕಾದಂಬರಿಯಲ್ಲಿ ಶ್ರೀಮಾನ್ ಭೈರಪ್ಪನವರು ತಮ್ಮ ಮೂಗಿನ ನೇರಕ್ಕೆ ಇಡೀ ಇತಿಹಾಸವನು ಬರೆದರೆ ಈ ವಿಜಯ ಕರ್ನಾಟಕ ಪತ್ರಿಕೆ ವರ್ತಮಾನವನ್ನು ಆರೆಸ್ಸೆಸ್ಸಿನ ಮೂಗಿನ ನೇರಕ್ಕೆ ತಿದ್ದಲು ದಿನನಿತ್ಯ ಪ್ರಯತ್ನಿಸುತ್ತದೆ.

ಇಲ್ಲದಿದ್ದರೆ ಬೇಕೆಂತಲೇ ಅನಂತಮೂರ್ತಿಯವರ ಹೇಳಿಕೆಯ ವಾಚ್ಯಾರ್ಥವನ್ನು ಮಾತ್ರ ಪೊಲೀಸಿನ ತರ ಹಿಡಿದುಕೊಂಡು, ಅದನ್ನು ಮುಖಪುಟದಲ್ಲಿ ಪ್ರಕಟಿಸಿ ಅದರ ಬಗ್ಗೆ ಇಡೀ ರಾಜ್ಯಾದ್ಯಂತ ಅಭಿಪ್ರಾಯ ಕೇಳಿದ ಶಾಸ್ತ್ರ ಮಾಡಿ ತಾನೇ ನ್ಯಾಯಾಧೀಶನೂ ಆಗಿ ಅವರನ್ನು ತಪ್ಪಿತಸ್ಥರೆಂದು ಘೋಷಿಸುತ್ತಿತ್ತೇ? ಎನ್ಕೌಂಟರ್‌ಗಳಲ್ಲಿ ವಿಚಾರಣೆಗೆ ಮುನ್ನವೇ ತೀರ್ಪು ಶಿಕ್ಷೆ ಎರಡನ್ನು ಪೊಲೀಸರೇ ನೀಡುವಂತೆ? ನರೇಂದ್ರ ಮೋದಿ ಗುಜರಾತಿನಲ್ಲಿ ಮುಸ್ಲಿಮರ ಎನ್ಕೌಂಟರ್ ಮಾಡುತ್ತಿದ್ದರೆ ಭೈರಪ್ಪ ಮತ್ತು ವಿಕದ ಭಟ್ಟರು ಸತ್ಯದ ಮತ್ತು ಇತಿಹಾಸದ ಎನ್‌ಕೌಂಟರ್ ಮಾಡುತ್ತಿದ್ದಾರೆ..

ಪ್ರತಿ ದಿನ.. ಸತ್ಯಪಾತ.. ಸುದ್ದಿ ವಿಕೃತಿ.



ವಾರದ ಅವಿವೇಕ

"ಕನ್ನಡದ ಹಿರಿಯ ಸಾಹಿತಿ ಎಸ್ಸೆಲ್ ಭೈರಪ್ಪನವರು ಹಿರಿಯ ಮಾರ್ಗದರ್ಶಿಗಳು ಮತ್ತು ಶ್ರೇಷ್ಠ ಕಾದಂಬರಿಕಾರರು. 'ಆವರಣ' ಕಾದಂಬರಿಯಲ್ಲಿ ಸಮಾಜಕ್ಕೆ ಪೂರಕವಲ್ಲದ ವಿಷಯವಿರುವುದು ಸ್ವಾಗತಾರ್ಹವಲ್ಲ..ಅಷ್ಟೆ"

- ಸಿದ್ಧಲಿಂಗಯ್ಯ, ಕವಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು

ವಾರದ ವಿವೇಕ

"ನಿಮ್ಮ ಯೋಗ ನಮಗೆ ಬೇಡ. ಸಾಧ್ಯವಿದ್ದರೆ ನಮಗೆ ಟೈಲರಿಂಗ್ ಮತ್ತು ಕಂಪ್ಯೂಟರ್ ತರಗತಿ ನಡೆಸಿ. ಆರ್ಥಿಕ ನೆರವು ನೀಡಿ."

- ಬಷೀರ್ ಹುಸೇನ್ ಅಲ್ ನದಫಿ, ಇರಾಕ್‌ನ ಪ್ರಮುಖ ಶಿಯಾ ನಾಯಕ

No Comments

"ನಾನು ಯಾರಿಗೂ ರ್‍ಯಾಗಿಂಗ್ ಮಾಡಿಲ್ಲ, ಆದ್ದರಿಂದ ಹಾಗೆಂದರೇನು ಎಂದು ನನಗೆ ಗೊತ್ತಿಲ್ಲ, ಅದರ ಉದ್ದೇಶ ಏನೇ ಇದ್ದರೂ ಬೇರೆಯವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಲ್ಲೆ ಮಾಡಬಾರದು."

- ರಂಗನಾಥ್, ಬೆಂಗಳೂರು ವಿವಿ ಕುಲಪತಿ

"ನಮ್ಮ ರಾಜ್ಯಕ್ಕೆ ಎಸ್‌ಇ ಜೆಡ್‌ಗಳು ಬೇಕು"

-ಬುದ್ಧದೇವ್ ಭಟ್ಟಾಚಾರ್ಯ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

"ಕೆಲವರು ಬರೆಯುವ ಮೊದಲೇ ಪೂರ್ವ ನಿರ್ಧಾರ ಮಾಡಿಕೊಂಡು ಬರೆಯುತ್ತಾರೆ. ಅವರ ಸಾಹಿತ್ಯ ಸರಕು ಸಾಗಾಣಿಕೆಯಲ್ಲಿ ಮಾತ್ರ ನಿಸ್ಸೀಮವಾಗಿರುತ್ತದೆ."

- ದೇವನೂರು ಮಹಾದೇವ

"ಚಾಮರಾಜನಗರಕ್ಕೆ ಭೇಟಿ ಮಾಡಿದ ಮುಖ್ಯಮಂತ್ರಿ ಒಂದು ಗಂಟೆ ಜನರ ಜೊತೆಗೂ ನಾಲ್ಕು ಗಂಟೆ ದೇವಸ್ಥಾನದಲ್ಲೂ ಕಳೆದರಂತೆ."

- ಪತ್ರಿಕಾ ವರದಿ

"ಅನಂತಮೂರ್ತಿ ಮತ್ತು ಭೈರಪ್ಪನವರ ನಡುವೆ ನಾನು ಅನಂತಮೂರ್ತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತೇನೆ."

-ಬರಗೂರು ರಾಮಚಂದ್ರಪ್ಪ

"ಸಿಂಗೂರ್‌ನಲ್ಲಿ ನಡೆದ ಪ್ರತಿಭಟನೆಗಳಿಗೆ ಕುಮ್ಮಕ್ಕು ಕೊಟ್ಟವರು ಟಾಟಾ ವಿರೋಧಿಗಳು."

-ಸೀತಾರಾಂ ಯೆಚೂರಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ಬೆಂಗಳೂರಿನಲ್ಲಿ ದಿನೇದಿನೇ ಜನಸಂಖ್ಯೆ ಹೆಚ್ಚುತ್ತಿದ್ದರೂ ಯಾವುದೇ ಅಪಾಯಕಾರಿ ರೀತಿಯಲ್ಲಿ ಸಮಾಜಕ್ಕೆ ಕಂಟಕಪ್ರಾಯವಾಗುವಂತಹ ಅಪರಾಧಗಳು ನಡೆಯುತ್ತಿಲ್ಲ."

-ಸುಭಾಷ್ ಭರಣಿ, ಹಿರಿಯ ಪೊಲೀಸ್ ಅಧಿಕಾರಿ

"ನನ್ನ ಆಫೀಸಿನಲ್ಲಿ ವಿಲೇವಾರಿಯಾಗದ ಕಡತಗಳಿರುವುದು ಕೇವಲ 128 ಮಾತ್ರ."

- ಮುಖ್ಯಮಂತ್ರಿ ಕುಮಾರಸ್ವಾಮಿ



"ಮಾಧ್ಯಮಗಳಲ್ಲಿ ವರದಿಯಾಗುತ್ತಿರುವಂತೆ ಸಿಂಗೂರ್ ಮತ್ತು ನಂದಿಗ್ರಾಮಗಳಲ್ಲಿ ಸಿಪಿಎಂ ಪಕ್ಷ ದೌರ್ಜನ್ಯವನ್ನು ಎಸಗಿಲ್ಲ."

- ಸೀತಾರಾಂ ಯೆಚೂರಿ

"ಅಕ್ಟೋಬರ್ ಮೂರರಂದು ಅಧಿಕಾರ ಹಸ್ತಾಂತರ ಮಾಡಿದ ನಂತರ ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುವೆ."


- ಎಚ್. ಡಿ. ಕುಮಾರಸ್ವಾಮಿ

ನಾಚಿಕೆಗೇಡು!

"ಮುಂದಿನ ದಿನಗಳಲ್ಲಿ ಇನ್ನು ಯಾವ ಕಾರಣಕ್ಕೂ ಸಾಲಮನ್ನಾ ಮಾಡುವುದಿಲ್ಲ"

-ಜಿಟಿ ದೇವೇಗೌಡ, ಸಹಕಾರಿ ಸಚಿವ

ಇದರರ್ಥವೇನು?



"ನಾನು ಉದ್ದೇಶಪೂರ್ವಕವಾಗಿ ರಾಷ್ಟ್ರಗೀತೆಗೆ ಅವಮಾನ ಮಾಡಲಿಲ್ಲ."

- ಇನ್ಫಿ ನಾರಾಯಣಮೂರ್ತಿ

ವಾರದ ಅವಮಾನ

"ಸಂವಿಧಾನದಲ್ಲಿ ಕೂಡಾ ರಾಷ್ಟ್ರಧ್ವಜಕ್ಕೆ ಅಗೌರವ ಸೂಚಿಸಬಾರದೆಂದಿದೆಯೇ ವಿನಃ ರಾಷ್ಟ್ರಗೀತೆ ಹಾಡದಿರುವುದು ಅವಮಾನವೆಂದಿಲ್ಲ."

- ಇನ್ಫಿ ನಾರಾಯಣಮೂರ್ತಿಯ ವಕೀಲ ಕೆಕೆ ವೇಣುಗೋಪಾಲ್

ವಾರದ ಲೇವಡಿ



"ಯಡಿಯೂರಪ್ಪನವರು ತಾತ್ಕಾಲಿಕ ದಿನಗೂಲಿ ನೌಕರ. ತಮ್ಮ ನೌಕರಿ ಕಾಯಂ ಮಾಡಿಕೊಳ್ಳಲು ತೀವ್ರ ಪ್ರಯತ್ನ ಮಾಡಿದ್ದಾರೆ. ಆದರೆ ಜನ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಾರೆ."

- ರಮಾನಾಥ ರೈ, ಮಾಜಿ ಮಂತ್ರಿ


ಕಾಸ್ಟ್ರೋನನ್ನು ಕೊಲ್ಲಲಾಗದು, ರಾಮದಾಸರನ್ನು ಮಣಿಸಲಾಗದು



ಕಂಡಹಾಗೆ

ಇದೆಂತಹ ವೈರುಧ್ಯ ನೋಡಿ. ಸಾವಿನ ಹೊಸ್ತಿಲಿನಲ್ಲಿ ನಿಂತಿರುವ ಕ್ಯೂಬಾದ ಅಧ್ಯಕ್ಷ ಫೀಡೆಲ್ ಕಾಸ್ಟ್ರೊ ಇವತ್ತಿಗೂ ನವವಸಾಹತುಶಾಹಿಯ ವಿರುದ್ಧ ತಮ್ಮ ದನಿಯನ್ನು ಎತ್ತುತ್ತಲೇ ಇದ್ದಾರೆ. ಆದರೆ ದಕ್ಷಿಣ ಅಮೆರಿಕಾದಲ್ಲಿ ಎಂದೂ ಕ್ರಾಂತಿಯೇ ನಡೆದಿಲ್ಲ; ಕ್ರಾಂತಿ ಎಂಬುದು ನಡೆದದ್ದು ರಷ್ಯಾದಲ್ಲಿ ಮಾತ್ರ ಎಂದು ವಾದಿಸುತ್ತಲೇ ಬಂದಿರುವ ನಮ್ಮ ದೇಶದ ಎಡಪಂಥೀಯ ಪಕ್ಷಗಳು ಇವತ್ತು "ನಮಗೆ ಆಧುನಿಕ ಕಾರ್ಖಾನೆಗಳು ಬೇಕು. SEZಗಳು ಬೇಕು" ಎಂದು ಯಾವ ಮುಜುಗರವೂ ಇಲ್ಲದೆ ವಾದಿಸುತ್ತಿದ್ದಾವೆ. ಇದೇ ನಿಲುವನ್ನು ಚೆಡ್ಡಿಗಳು ಮತ್ತು ಅರೆ ಚೆಡ್ಡಿಗಳಾದ ಜೆಡಿಎಸ್‌ನವರು, ಕೇಸರಿ ಲೇಪಿತ ಕಾಂಗ್ರೆಸ್‌ನವರೂ ಹೊಂದಿರುವುದಂತೂ ಇನ್ನೂ ಮಜ ಬೂತಾಗಿದೆ. ಕೇಸರಿಗೂ, ಕೆಂಪಿಗೂ ವ್ಯತ್ಯಾಸವೇ ಕಾಣದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇನ್ನೊಂದು ವಿಶೇಷ ಸಂಗತಿ ಯಾವುದೆಂದರೆ ಇಲ್ಲಿ ನರೇಂದ್ರ ಮೋದಿ ಮತ್ತು ಬುದ್ಧದೇವ ಭಟ್ಟಾಚಾರ್ಯಗಳು ತಮ್ಮ ರಾಜ್ಯಗಳಲ್ಲಿ ಬಡವರಿಂದ ಭೂಮಿ ಕಸಿದು ದೇಶಿ ಮತ್ತು ವಿದೇಶಿ ಕಂಪನಿಗಳ ಮಾಲೀಕರಿಗೆ ಕಡಿಮೆ ದರಕ್ಕೆ ಮಾರಲು ತುದಿ ಗಾಲ ಮೇಲೆ ನಿಂತಿದ್ದಾರೆ. ಆದರೆ ಇದೇ ಹೊತ್ತಿಗೆ ಫೀಡೆಲ್ ಕಾಸ್ಟ್ರೋ ರವರಿಂದ ಸ್ಫೂರ್ತಿ ಪಡೆದಿರುವ, ವೆನುಜುವೆಲ್ಲಾದ ಅಧ್ಯಕ್ಷ ಹ್ಯೂಗೊ ಚಾವೆಜ್‌ರವರು ಮೊನ್ನೆ ತಮ್ಮ ದೇಶದ ತೈಲ ಸಂಪತ್ತನ್ನು ಲೂಟಿ ಮಾಡುತ್ತಿರುವ ವಿದೇಶಿ ಕಂಪನಿ ಗಳಿಂದ ಎಲ್ಲಾ ತೈಲ ತಯಾರಿಕಾ ಘಟಕಗಳನ್ನು ವಶಪಡಿಸಿ ಕೊಂಡಿದ್ದಾರೆ. ಅಷ್ಟೇ ಅಲ್ಲದೆ, "ನೀವು ಈ ದೇಶದ ಸಂಪತ್ತನ್ನು ಸುಲಿಗೆ ಮಾಡಿದ್ದೀರಿ, ಆದ್ದರಿಂದ ನೀವು ಈ ಘಟಕಗಳಿಗೆ ಹೂಡಿದ್ದ ಬಂಡವಾಳವನ್ನು ಹಿಂತಿರುಗಿಸುವುದಿಲ್ಲ" ಎಂದು ಘೋಷಿಸಿದ್ದಾರೆ. ಚಾವೆಜ್‌ರವರ ಈ ನಿರ್ಧಾರವನ್ನು ವಿಧಿ ಇಲ್ಲದೆ ಆ ಕಂಪನಿಗಳು ಒಪ್ಪಿಕೊಂಡಿವೆ.



ಮತ್ತೊಂದು ಮೋಜಿನ ಸಂಗತಿ ಯಾವುದು ಗೊತ್ತಾ? ಇವತ್ತು ನಮ್ಮ ದೇಶದ ಎಲ್ಲಾ ರಾಜ್ಯಗಳು ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಸಂಸ್ಥೆಗಳಿಂದ ಅಭಿವೃದ್ಧಿ ಕಾರ್ಯಗಳಿಗೆಂದು ಆದಷ್ಟು ಹೆಚ್ಚು ಸಾಲ ಪಡೆಯಲು ಪೈಪೋಟಿ ನಡೆಸುತ್ತಿದ್ದರೆ, ಚಾವೆಜ್‌ರವರು "ಅಮೆರಿಕದ ಆಕ್ರಮಣಕಾರಿ ಆರ್ಥಿಕ ನೀತಿಯನ್ನೇ ಮುಂದುವರೆಸುತ್ತಿರುವ ಈ ಸಂಸ್ಥೆಗಳು ಬಡ ದೇಶಗಳನ್ನು ವಸಾಹತುಶಾಹಿಗಳ ಸುಲಿಗೆಗೆ ದೂಡುತ್ತಿವೆ. ಆದ್ದರಿಂದ ನಾವು ಈ ಸಂಸ್ಥೆಗಳ ಹಂಗಿನಿಂದ ಹೊರಬರು ತ್ತಿದ್ದೇವೆ" ಎಂದು ಘೋಷಿಸಿದ್ದಾರೆ.

ಇವತ್ತು ಯುರೋಪಿನಲ್ಲಿ ಬಲಪಂಥೀಯ ನಾಯಕರೇ ಚುನಾವಣೆಗಳಲ್ಲಿ ಗೆಲ್ಲುತ್ತಿದ್ದಾರೆ (ಉದಾಹರಣೆಗೆ ಫ್ರಾನ್ಸ್‌ನಲ್ಲಿ ಸರ್ಕೋಜ್ಜಿ, ಜರ್ಮನಿಯಲ್ಲಿ ಮರ್ಕೆಲ್). ಆದರೆ ಇದಕ್ಕೆ ತದ್ವಿರುದ್ಧ ಎಂಬಂತೆ ದಕ್ಷಿಣ ಅಮೆರಿಕ ಖಂಡದಲ್ಲಿ ಎಡಪಂಥೀಯರೇ ಕಳೆದ ಎರಡು ವರ್ಷಗಳಿಂದ ಚುನಾವಣೆಗಳನ್ನು ಗೆಲ್ಲುತ್ತಾ ಬಂದಿದ್ದಾರೆ (ಉದಾಹರಣೆ ಚಿಲಿಯ ಸಾಲ್ವೆಡೋರ್ ಅಲ್ಲೆಂಡೆ ಸರ್ಕಾರದ ಪರ ಸಶಸ್ತ್ರ ಹೋರಾಟ ನಡೆಸಿದ್ದ ಮಿಶೆಲ್ ಬಾಚೆಲ್, ಬೊಲಿವಿಯಾದ ಬುಡಕಟ್ಟು ಜನಾಂಗದಿಂದ ಪ್ರಥಮ ಅಧ್ಯಕ್ಷನಾಗಿ ಆಯ್ಕೆಯಾಗಿರುವ ಇವೊ ಮೊರಾಲೆಸ್). ಇವರೆಲ್ಲರೂ ತಮ್ಮ ದೇಶದ ಜನರ ಹಿತಾಸಕ್ತಿಯನ್ನು ಮತ್ತು ಅವರ ಅಭಿವೃದ್ಧಿಗೆ ಪ್ರಥಮ ಸ್ಥಾನವನ್ನು ಕೊಡುತ್ತಿರುವುದರಿಂದಲೇ ಅವರು ಇವತ್ತು ಪ್ರಮುಖ ಸ್ಥಾನಗಳನ್ನು ಅಲಂಕರಿಸಿದ್ದಾರೆ.

ನಮ್ಮ ನಾಯಕರಿಗೂ, ಅಲ್ಲಿನ ನಾಯಕರಿಗೂ ಎಷ್ಟು ವ್ಯತ್ಯಾಸವಿದೆಯಲ್ಲದೆ?

ಇತ್ತೀಚೆಗೆ ಫೀಡೆಲ್ ಕಾಸ್ಟ್ರೊರವರು 'ಆಲೋಚನೆಗಳನ್ನು ಕೊಲ್ಲಲಾಗದು' ಎಂಬ ಲೇಖನದಲ್ಲಿ ಹೀಗೆ ಬರೆದಿದ್ದಾರೆ: "ಇತ್ತೀಚೆಗೆ ಪ್ರಮುಖ ವ್ಯಕ್ತಿಯೊಬ್ಬರು ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್‌ರವರನ್ನು 'ಕ್ಯೂಬಾ ಕುರಿತಂತೆ ನಿಮ್ಮ ನೀತಿ ಯಾವುದು?' ಎಂದು ಪ್ರಶ್ನಿಸಿದಾಗ, ಬುಷ್ 'ನಾನು ಬಿಗಿ ನೀತಿಯನ್ನು ಅನುಸರಿಸುವವನಾಗಿದ್ದರಿಂದ ಕಾಸ್ಟ್ರೊ ಸಾವಿಗಾಗಿ ಕಾಯುತ್ತಿದ್ದೇನೆ' ಎಂದರಂತೆ. ಇಂತಹ ಬಲಿಷ್ಟ ವ್ಯಕ್ತಿಯ ಆಶಯಗಳು ಆತನ ಹಕ್ಕೇನಲ್ಲ, ತನ್ನ ಇಚ್ಛೆಯಂತೆ ಸಾಮೂಹಿಕವಾಗಿ ಅಥವಾ ಒಬ್ಬರನ್ನೊಬ್ಬರಾದ ಮೇಲೆ ಬುಷ್ ಸಾಯಿಸಲು ಇಚ್ಛಿಸಿರುವು ದರಲ್ಲಿ ನಾನು ಮೊದಲನೆಯವನೂ ಅಲ್ಲ, ಕೊನೆಯವನೂ ಅಲ್ಲ. ಬಟಿಸ್ಟಾನ ಸೈನ್ಯದ ವಿರುದ್ಧ ನಾವು ದಂಗೆ ಎದ್ದು ಮಾನ್ಕಾಡ ಗ್ಯಾರಿಸನ್ ಮೇಲೆ ದಾಳಿ ಇಟ್ಟಾಗ ನನ್ನನ್ನು ಮತ್ತು ನನ್ನ ಸಂಗಾತಿಗಳನ್ನು ಸೈನ್ಯಾಧಿಕಾರಿ ಸರಯ್ಯ ರವರ ತಂಡ ಬಂಧಿಸಿತ್ತು. ಸರಯ್ಯರವರ ಸೈನಿಕರೆಲ್ಲರೂ ದ್ವೇಷ ಕಾರುತ್ತಾ, ಗೆಲುವಿನಿಂದ ಉತ್ತೇಜಿತರಾಗಿ ನಮ್ಮ ಮೇಲೆ ತಮ್ಮ ಬಂದೂಕುಗಳನ್ನು ತಿರುಗಿಸಿ ಕೊಲ್ಲಲು ಸಿದ್ಧರಾಗಿದ್ದರು. ಆಗ ಸರಯ್ಯರವರು "ಆಲೋಚನೆ ಗಳನ್ನು ಕೊಲ್ಲಲಾಗುವುದಿಲ್ಲ" ಎಂದು ಮೆಲುದನಿಯಲ್ಲಿ ಮತ್ತೆ ಮತ್ತೆ ಪುನರುಚ್ಚಿಸುತ್ತಲೇ ಇದ್ದರು.

ಅವರ ಈ ಅತ್ಯುನ್ನತ ಮಾತುಗಳನ್ನು ನಾನು ಇವತ್ತು ಬುಷ್‌ರವರಿಗೆ ಅರ್ಪಿಸುತ್ತಿದ್ದೇನೆ".


ಫೀಡೆಲ್ ಕಾಸ್ಟ್ರೊರವರ ಸ್ವಾಭಿಮಾನದ ಒಂದು ತುಣುಕಾದರೂ ನಮ್ಮ ನಾಯಕರಲ್ಲಿ ನಾವು ಕಾಣುವುದು ಎಂದು?

* * * * * * * * * *

ರಾಜ್ಯದಲ್ಲಿ ಇಂದು ಶಾಶ್ವತ ವಿರೋಧಿ ದನಿಯಾಗಿರುವ ಏಕೈಕ ವ್ಯಕ್ತಿ ಎಂದರೆ ಅದು ನಮ್ಮೆಲ್ಲರ ಪ್ರೀತಿಯ ರಾಮದಾಸ್‌ರವರು. ರಾಜಕೀಯ, ಸಾಹಿತ್ಯ ಸಾಂಸ್ಕೃತಿಕ– ಹೀಗೆ ಎಲ್ಲಾ ವಲಯಗಳಲ್ಲಾಗುವ ಎಲ್ಲಾ ರೀತಿಯ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ನೈತಿಕಶಕ್ತಿ ಹೊಂದಿರುವ ಮತ್ತು ಅ ಸನ್ನು ಜಾಗೃತವಾಗಿ ಕಾಪಾಡಿಕೊಂಡಿರುವ ರಾಮದಾಸ್ ಎಂತಹ ನಿಷ್ಠುರ ಜೀವಿ ಎಂದರೆ, ತಪ್ಪು ಮಾಡಿದ ತಮ್ಮ ಸ್ನೇಹಿತರನ್ನೂ, ಹಿತೈಷಿಗಳನ್ನೂ, ಆಪ್ತರನ್ನೂ ಯಾವ ಮುಲಾಜೂ ಇಲ್ಲದೆ ಟೀಕಿಸುವವರು.

ನಿಮಗೆ ನೆನಪಿರಬೇಕು. ಹಿಂದೊಮ್ಮೆ ರಾಮದಾಸ್‌ರ ಗುರುವಾಗಿದ್ದ ದೇ.ಜವರೇಗೌಡರು ಕಳೆದ ವರ್ಷ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಬೇಕೆಂದು ಕರೆ ನೀಡಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ದೇಜಗೌರವರ ನಿಲುವಿನೊಂದಿಗೆ ರಾಮದಾಸರಿಗೆ ಸಹಮತ ಇಲ್ಲದಿದ್ದರೂ ಆ ಸಂದರ್ಭದಲ್ಲಿ ಗೌಡರ ಆರೋಗ್ಯ ಹದಗೆಟ್ಟಿದ್ದರಿಂದ ಅವರನ್ನು ನೋಡಲು ಹೋಗಿದ್ದರು. ಆಗ ಅಲ್ಲೇ ಇದ್ದ ಹಲವು ಜನ ರಾಮದಾಸ್‌ರವರು ಮಾತನಾಡುವಂತೆ ಒತ್ತಾಯ ಮಾಡಿದರು. ಸಹಜವಾಗಿಯೇ ರಾಮದಾಸ್ ರವರು ಕನ್ನಡ ಶಾಸ್ತ್ರೀಯ ಭಾಷೆ ಆಗುವುದಕ್ಕಿಂತ ಇವತ್ತು ತುರ್ತಾಗಿ ಜನರ ಭಾಷೆ ಆಗಬೇಕೆಂಬ ತಮ್ಮ ನಿಲುವನ್ನು ವ್ಯಕ್ತಪಡಿಸಿದರು. ತಮ್ಮ ಗುರುಗಳಾಗಿದ್ದ ದೇಜಗೌಡರ ನಿಲುವಿನ ವಿರುದ್ಧವೇ ಅವರು ಯಾವ ಹಿಂಜರಿಕೆಯೂ ಇಲ್ಲದೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅದನ್ನು ಕೇಳಿ ಅಲ್ಲಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡರ ಗುಂಪು ರಾಮದಾಸ್‌ರವರ ಮೇಲೆ ಮುಗಿ ಬಿದ್ದಾಗಲೂ ಕೇರ್ ಮಾಡಿರಲಿಲ್ಲ.

ರಾಮದಾಸ್ ಎಂಥವರೆಂದರೆ ಒಮ್ಮೆ ಮೈಸೂರಿನಲ್ಲಿ ಲಂಕೇಶರಿಗೆ ಸನ್ಮಾನ ಮಾಡಲಿದ್ದಾರೆ, ಹಾಗೆ ಸನ್ಮಾನ ಮಾಡಿಸಿಕೊಳ್ಳಲು ಲಂಕೇಶರು ಬರುತ್ತಿದ್ದಾರೆ ಎಂದು ಯಾರೋ ಹೇಳಿದ್ದನ್ನು ಕೇಳಿ ಕೆಂಡಾಮಂಡಲವಾಗಿದ್ದರು. ಅಷ್ಟೇ ಅಲ್ಲ, ಅವರಿಗೆ ಹಿಂದೊಮ್ಮೆ ಗುರುಗಳಾಗಿದ್ದ, ಆಗ ಮಿತ್ರರೂ ಆಗಿದ್ದ ಅಪ್ಪನ ವಿರುದ್ಧವೇ ಪ್ರತಿಭಟಿಸಲು ಸಜ್ಜಾಗಿದ್ದರು. ಅದಕ್ಕೆ ಕಾರಣ, 'ಪತ್ರಕರ್ತರಾಗಿ, ಸಾಹಿತಿಯಾಗಿ ಲಂಕೇಶ್ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಆದರೆ ಅದಕ್ಕೆಂದು ಸನ್ಮಾನ ಮಾಡಿಸಿಕೊಳ್ಳುವ ಅಗತ್ಯವೇನು? ಕರ್ತವ್ಯ ನಿರ್ವಹಿಸುವುದೂ ಸನ್ಮಾನಗಳಿಗಾಗಿಯೇ?' ಎಂದು ರಾಮದಾಸ್ ಪ್ರಶ್ನಿಸಿದ್ದರು. ಎಲ್ಲರಿಗೂ ಗೊತ್ತಿರುವಂತೆ ಅಪ್ಪ ಎಂದೂ ತಮ್ಮನ್ನು ಸನ್ಮಾನಿ ಸುವ ಸಮಾರಂಭಗಳಲ್ಲಿ ಭಾಗ ವಹಿಸಲಿಲ್ಲ.



ಹೀಗೆ ತಮ್ಮ ಗುರುಗಳನ್ನು ತರಾಟೆಗೆ ತೆಗೆದುಕೊಳ್ಳುವುದಿರಲಿ, ತಮ್ಮ ಶಿಷ್ಯರಿಗೂ ರಾಮದಾಸ್ ತಮ್ಮ ಮಾತಿನ ಚಾಟಿ ಏಟನ್ನೂ ನೀಡಿದ್ದಾರೆ.


ಅಂತಹ ಏಟಿನಿಂದ ತತ್ತರಿಸಿದ ವರಲ್ಲಿ ಅವರ ಮಾಜಿ ಶಿಷ್ಯ ಎಚ್. ವಿಶ್ವನಾಥರವರೂ ಒಬ್ಬರು. ಅವತ್ತು ಆಂದೋಲನ ಪತ್ರಿಕೆಯಲ್ಲಿ ಶಿಕ್ಷಣ ಸಚಿವ ವಿಶ್ವನಾಥರು ಭಾಗವಹಿಸಿದ್ದ ಧಾರ್ಮಿಕ ಸಮಾರಂಭವೊಂದರಲ್ಲಿ ಕುರಿಗಳನ್ನು ಬಲಿ ಕೊಡಲಾಗಿತ್ತು ಎಂಬ ವರದಿ ಪ್ರಕಟವಾಗಿತ್ತು. ಅಂದೇ ಬೆಳಿಗ್ಗೆ 10.30ಕ್ಕೆ ವಿಶ್ವನಾಥರು ಮೈಸೂರಿನ ಒಂದು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದರು. ಪತ್ರಿಕೆಯಲ್ಲಿನ ವರದಿ ನೋಡಿ ಕೆಂಡಾಮಂಡಲವಾದ ರಾಮದಾಸ್‌ರಿಗೆ ವಿಶ್ವನಾಥ್ ವಿರುದ್ಧ ಪ್ರತಿಭಟನೆಯನ್ನು ಕರೆಯಲು ಸಮಯವಿಲ್ಲದೆ ತಾವೇ ಏಕಾಂಗಿಯಾಗಿ ಪ್ರತಿಭಟಿಸಿದರಾಯ್ತು ಎಂದು ಹೊರಟರು. ಆದರೆ ಬಿಸಿಲು ಮತ್ತು ಅವರ ಅನಾರೋಗ್ಯದಿಂದಾಗಿ ದಾರಿ ಮಧ್ಯದಲ್ಲೇ ಸುಸ್ತಾಗಿ ಕಟ್ಟೆಯೊಂದರ ಮೇಲೆ ಕೂತರು. ಅಕಸ್ಮಾತ್ತಾಗಿ ಅದೇ ದಾರಿಯಲ್ಲಿ ಹೋಗುತ್ತಿದ್ದ ಸ್ವಾಮಿಆನಂದ್ ರಾಮದಾಸ್‌ರನ್ನು ನೋಡಿ, ಅವರನ್ನು ತಮ್ಮ ಸ್ಕೂಟರ್ ಮೇಲೆ ಹತ್ತಿಸಿಕೊಂಡು ಹೋದರು. ಅಂದಿನ ಸಭೆಯಲ್ಲಿ ರಾಮದಾಸ್ ವಿಶ್ವನಾಥರ ವಿರುದ್ಧ ಘೋಷಣೆ ಕೂಗಿ ಮೂಢನಂಬಿಕೆಯ ವಿರುದ್ಧ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು.

ಇಂತಹ ರಾಮದಾಸ್‌ರವನ್ನು ಒಮ್ಮೆ ಕೀಟಲೆ ಮಾಡಲು ಅವರ ಮನೆಗೆ ಫೋನ್ ಮಾಡಿದ್ದೆ. ಅವರು ಆಗ ಮನೆಯಲ್ಲಿ ಇರಲಿಲ್ಲವಾದ್ದರಿಂದ "ಏನಿಲ್ಲ, ಅವರ ಹೆಸರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಶಿಫಾರಸ್ಸು ಮಾಡಬೇಕೆಂದಿದ್ದೇನೆ. ಇದರ ಬಗ್ಗೆ ಅವರ ಅಭಿಪ್ರಾಯ ಪಡೆಯೋಣ ಎಂದು ಫೋನ್ ಮಾಡಿದ್ದೆ" ಅಂತ ಸ್ನೇಹಾಳೊಂದಿಗೆ ಸಂದೇಶ ಬಿಟ್ಟಿದ್ದೆ. ಅದೇ ಸಂಜೆ ಫೋನ್ ಮಾಡಿದ ರಾಮದಾಸ್ ಗುಡುಗಲಾರಂಭಿಸಿದರು. "ಈ ರಾಜ್ಯದಲ್ಲಿ ಶಾಶ್ವತ ವಿರೋಧ ಪಕ್ಷ ನಮ್ಮದು. ಅಂತಹದರಲ್ಲಿ ನಾನು ಆ ವಿಧಾನಸೌಧದ ಮೆಟ್ಟಲನ್ನು ಏರುವುದೇ?"ಎಂದೆಲ್ಲ ಅಬ್ಬರಿಸಿ ದರು. ಸುಮ್ಮನೆ ಕೀಟಲೆ ಮಾಡಲು ಹೇಳಿದ್ದು ಎಂದು ನಾನು ವಿವರಿಸಿದ ನಂತರವೇ ಅವರು ಸುಮ್ಮನಾಗಿದ್ದು.

ರಾಮದಾಸ್‌ರವರ ಈ ಗುಣ ಗಳಿಂದಾಗಿಯೇ ಅಪ್ಪ ತಮ್ಮ "ಕಲ್ಲು ಕರಗುವ ಸಮಯ" ಎಂಬ ಕಥಾ ಸಂಕಲನವನ್ನು "ಶಿಷ್ಯ, ಗೆಳೆಯ, ಮಾರ್ಗದರ್ಶಿ ರಾಮ್"ಗೆ ಅರ್ಪಿಸಿ ರುವುದು.

ದುಃಖದ ಸಂಗತಿ ಯಾವು ದೆಂದರೆ ಇವತ್ತು ರಾಮದಾಸರಿಗೆ ಶ್ವಾಸಕೋಶದ ಕ್ಯಾನ್ಸರ್ ಇದೆ ಎಂದು ಪತ್ತೆ ಆಗಿರುವುದು. ಆದರೆ ಅದು ಯಾವ ಹಂತದಲ್ಲಿದೆ, ಎಂತಹ ಚಿಕಿತ್ಸೆಯ ಅಗತ್ಯವಿದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಅವರನ್ನು ನಿನ್ನೆ ಮಾತನಾಡಿಸಿ, ಹೇಗಿದ್ದೀರಿ ಎಂದು ಕೇಳಿದೆ. "I am tired, I am weak, I am retiring" ಎಂದಷ್ಟೇ ಹೇಳಿದರು. ತಮ್ಮ ಆಪ್ತಮಿತ್ರ ಲಂಕೇಶರನ್ನು ಕಳೆದುಕೊಂಡಾಗಲೇ ರಾಮದಾಸ್ ಜರ್ಜರಿತ ರಾಗಿದ್ದರು. ಅವರ ಇನ್ನೋರ್ವ ಮಿತ್ರ ತೇಜಸ್ವಿಯವರು ಹೋದಾಗ ಮತ್ತಷ್ಟು ಕುಗ್ಗಿದ್ದರು.

(7ನೇ ಪುಟಕ್ಕೆ)



'ಆವರಣ' ಬಲು ಕೆಟ್ಟ ಕಾದಂಬರಿ. ಹಾಗೆ ನೋಡಿದರೆ ಅದೊಂದು ಕಾದಂಬರಿಯೇ ಅಲ್ಲ. ಯಾವುದೇ ಒಂದು ಸಾಹಿತ್ಯ ಕೃತಿ ತೆರೆದುಕೊಳ್ಳಬೇಕು, ಮುಚ್ಚಿಕೊಳ್ಳಬಾರದು. ಇದು ಅತ್ಯಂತ ಆಕ್ರಮಣಕಾರಿಯಾಗಿ ಮುಸ್ಲಿಂ ದ್ವೇಷವನ್ನು ಬಿತ್ತುವ ಕಾದಂಬರಿ. ಕಥೆ ಹೇಳುವ ಶಕ್ತಿ ಇದ್ದ ಮಾತ್ರಕ್ಕೆ ಒಂದು ಒಳ್ಳೆಯ ಕಾದಂಬರಿಯ ಸೃಷ್ಟಿ ಸಾಧ್ಯವಿಲ್ಲ. ಕಾದಂಬರಿಗೆ ಒಂದು ವಿಶಿಷ್ಟತೆ ಮತ್ತು ಅರ್ಥಪೂರ್ಣತೆ ಇರುತ್ತದೆ.

'ಆವರಣ' ಒಂದು ಕಾದಂಬರಿಯೇ ಅಲ್ಲ

–ಅನಂತಮೂರ್ತಿ

ಸಂದರ್ಶನ

ಶಿವಸುಂದರ್

◆ ಭೈರಪ್ಪನವರು ಕಾದಂಬರಿಕಾರರೇ ಅಲ್ಲ ಎಂದು ಹೇಳಿದ್ದೀರಿ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ಪತ್ರಿಕೆಯೊಂದು ಸಾಕಷ್ಟು ವಿವಾದಕ್ಕೆ ಗುರಿ ಮಾಡಿ ರಾಜ್ಯದ ಜನತೆಯ ಮತ್ತು ಸಾಹಿತಿಗಳ ಒಪಿನಿಯನ್ ಪೋಲ್ ಮಾಡಿ ತಾನೇ ಪೊಲೀಸು ವಕೀಲ ಮತ್ತು ನ್ಯಾಯಾಧೀಶನ ಪಾತ್ರವನ್ನೂ ವಹಿಸಿ ನೀವು ಹೇಳಿದ್ದು ತಪ್ಪು ಎಂದು ತೀರ್ಪನ್ನೂ ನೀಡಿದೆ. ಈಗ ಹೇಳಿ, ಭೈರಪ್ಪನವರು ಕಾದಂಬರಿಕಾರರಲ್ಲವೇ?

ನನ್ನ ಮಾತುಗಳನ್ನು ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳದೆ ಬೇಕೆಂತಲೇ ಕುಬ್ಜೀಕರಿಸಿದ ಮಾತದು. ನಿಜಕ್ಕೂ ನನ್ನ ಪ್ರತೀ ಮಾತಿನ ಹಿಂದೆ ಒಂದು ಪ್ಯಾರಾನೇ ಇರುತ್ತದೆ. ಅದರೊಳಗಡೆ ನನ್ನ ಮಾತಿರುತ್ತದೆ. ನಾನು ಹಾಗೆ ಲಹರಿಯಲ್ಲಿ ಮಾತನಾಡಿದಾಗಲೇ ನಾನು ಖುಷಿಯಿಂದ ಹಾಗೂ ಒಳಗಿಂದ ಮಾತನಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅತೀ ಎಚ್ಚರದಲ್ಲಿ ಮಾತನಾಡಬೇಕಾಗಿಬರುತ್ತದೆ.

ನಾನು ಯಾವುದನ್ನು ಕಾದಂಬರಿ ಎಂದು ಭಾವಿಸುತ್ತೇನೋ, ಯಾವ ಗುಣಗಳಿದ್ದರೆ ಕಾದಂಬರಿ ಬರವಣಿಗೆ ಎಂದು ಕರೆಯುತ್ತೇನೋ ಅಂತಹ ಬರವಣಿಗೆ ಭೈರಪ್ಪನವರದಲ್ಲ, ಇದಕ್ಕೆ ಅಪವಾದ ಅವರ 'ಗೃಹಭಂಗ' ಕಾದಂಬರಿ ಮಾತ್ರ. ಆ ಕಾದಂಬರಿಯಲ್ಲಿ ಅವರು ಓದುಗನ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ, ತಮ್ಮ ಖಾಸಗೀ ಜೀವನದಲ್ಲಿ ತಾವು ಎದುರಿಸಿದ ಅಪಾರ ದುಃಖ ದುಮ್ಮಾನಗಳನ್ನು ಅಲ್ಲಿ ದಾಖಲಿಸಿದ್ದಾರೆ.

ನಾನು ನ್ಯಾಷನಲ್ ಬುಕ್ ಟ್ರಸ್ಟ್‌ನ ಸದಸ್ಯನಾಗಿದ್ದಾಗ-ಗೋಕಾಕ್ ಮತ್ತು ಹರಿದಾಸಭಟ್ಟರೂ ಸದಸ್ಯರಾಗಿದ್ದರು-ಕೆಲವು ಕೃತಿಗಳನ್ನು ಭಾರತದ ಎಲ್ಲಾ ಹದಿನಾಲ್ಕು ಭಾಷೆಗಳಿಗೂ ಅನುವಾದಿಸಬೇಕೆಂದು ತೀರ್ಮಾನಿಸಿದಾಗ ಹರಿದಾಸಭಟ್ಟರು ನನ್ನ ಪುಸ್ತಕದ ಹೆಸರು ಹೇಳಿದರು. ನಾವೇ ಸದಸ್ಯರಾಗಿದ್ದು ನಮ್ಮ ನಮ್ಮ ಪುಸ್ತಗಳನ್ನು ನಾವು ನ್ಯಾಷನಲ್ ಬುಕ್ ಟ್ರಸ್ಟ್‌ಗೆ ಕೊಡಬಾರದು. ಬೇರೆ ಪುಸ್ತಗಳನ್ನು ಕೊಡಬೇಕು ಎಂದುಕೊಂಡು ಭೈರಪ್ಪನವರ 'ಗೃಹಭಂಗ'ವನ್ನು ನಾನು ಸೂಚಿಸಿದೆ. ಹಾಗೆಯೇ ಮೊಕಾಶಿಯವರ 'ಗಂಗವ್ವ ಗಂಗಾಮಾಯಿ'ಯನ್ನೂ, ಶಾಂತಿ ನಾಥರ 'ಮುಕ್ತಿ'ಯನ್ನೂ ಆರಿಸಿದೆವು. ಹೀಗಿರುವಾಗ ಅವರು ಕಾದಂಬರಿಕಾರರೇ ಅಲ್ಲ ಎಂಬ ಮಾತನ್ನು ಅದರ ವಾಚ್ಯಾರ್ಥದಲ್ಲಿ ಅರ್ಥಮಾಡಿಕೊಂಡರೆ ಅದೊಂದು ಅಸಂಗತ ಹೇಳಿಕೆಯಾಗುತ್ತದೆ. ಈ ಹಿಂದೆಯೂ ನವ್ಯ [illegible]ನಲ್ಲಿ ಅಡಿಗರು ಗೋಕಾಕರ ಕಾವ್ಯವು ನವ್ಯ ಕಾವ್ಯವೇ ಅಲ್ಲ ಎಂದು ಹೇಳಿದ್ದರು. ಅದರರ್ಥ ಗೋಕಾಕರು ಕವಿಗಳೇ ಅಲ್ಲ ಎಂದೇನಾಗಿರಲಿಲ್ಲ.

ನನ್ನ ಸಿಟ್ಟೇನಪ್ಪ ಅಂದರೆ, ನನ್ನ ಹೇಳಿಕೆಯನ್ನು ಈ ಬಗೆಯಲ್ಲಿ ತಪ್ಪಾಗಿ ಅರ್ಥ ಬರುವಂತೆ ಮುದ್ರಿಸಿ ನನ್ನನ್ನು ಅವಹೇಳನ ಮಾಡುವಂತಹ ಉದ್ದೇಶದಿಂದಲೇ ಅದರ ಬಗ್ಗೆ ರಾಜ್ಯಾದ್ಯಂತ ಎಸ್ಸೆಮ್ಮೆಸ್‌ಗಳನ್ನು ತರಿಸಿಕೊಂಡು ಪ್ರಕಟಿಸುವುದಿದೆಯಲ್ಲ ಅದೊಂದು ಪತ್ರಿಕಾ ಅಪರಾಧ ಎಂದು ನನಗನ್ನಿಸುತ್ತದೆ. ಆದರೆ ಆ ಪತ್ರಿಕೆ ಕೇಳಿದ ಪ್ರಶ್ನೆಗಳಿಗೆ ನನ್ನ ಸ್ನೇಹಿತರೂ ಅನುಮಾನ ವ್ಯಕ್ತಪಡಿಸಿದ್ದನ್ನು ಕೇಳಿ ನನಗೆ ಖೇದವೆನಿಸುತ್ತದೆ. ನನ್ನ ಬಗ್ಗೆ ನಂಬಿಕೆಯಿದ್ದವರಿಗೆ ಈ ಅನುಮಾನಗಳು ಬರುತ್ತಿರಲಿಲ್ಲ.

◆ 'ಆವರಣ'ದ ಬಗ್ಗೆ ನಿಮ್ಮ ನಿರ್ದಿಷ್ಟ ಆಕ್ಷೇಪಣೆಗಳೇನು?

ಅದೊಂದು ಬಲು ಕೆಟ್ಟ ಕಾದಂಬರಿ. ಹಾಗೆ ನೋಡಿದರೆ ಅದೊಂದು ಕಾದಂಬರಿಯೇ ಅಲ್ಲ, ಯಾವುದೇ ಒಂದು ಸಾಹಿತ್ಯ ಕೃತಿ ತೆರೆದುಕೊಳ್ಳಬೇಕು,. ಮುಚ್ಚಿಕೊಳ್ಳಬಾರದು. ಇದು ಅತ್ಯಂತ ಆಕ್ರಮಣಕಾರಿಯಾಗಿ ಮುಸ್ಲಿಂ ದ್ವೇಷವನ್ನು ಬಿತ್ತುವ ಕಾದಂಬರಿ. ಕಥೆ ಹೇಳುವ ಶಕ್ತಿ ಇದ್ದ ಮಾತ್ರಕ್ಕೆ ಒಂದು ಒಳ್ಳೆಯ ಕಾದಂಬರಿಯ ಸೃಷ್ಟಿ ಸಾಧ್ಯವಿಲ್ಲ, ಕಾದಂಬರಿಗೆ ಒಂದು ವಿಶಿಷ್ಟತೆ ಮತ್ತು ಅರ್ಥಪೂರ್ಣತೆ ಇರುತ್ತದೆ. ಅದು ತನ್ನನ್ನು ತಾನು ಸತ್ಯಕ್ಕೆ ತೆರೆದುಕೊಳ್ಳುವ ಶಕ್ತಿಯನ್ನು ಹೊಂದಿರಬೇಕು. ಪ್ರತಿಯೊಬ್ಬರಿಗೂ ತಮ್ಮದೇ ಆದ ಅಭಿಪ್ರಾಯಗಳಿರುತ್ತವೆ. ಆದರೆ ಅಭಿಪ್ರಾಯ ಬೇರೆ, ಸತ್ಯ ಬೇರೆ. ಸತ್ಯದ ಅನ್ವೇಷಣೆ ಕಾದಂಬರಿಯಲ್ಲಿ ನಡೆಯಬೇಕು. ಕಾದಂಬರಿ ಬರೆಯುವ ಪ್ರಕ್ರಿಯೆಯಲ್ಲಿ ಕಾದಂಬರಿಕಾರನ ಕಲಿಯುವ ಪ್ರಕ್ರಿಯೆಯೂ ಸೇರಿಕೊಂಡಿರುತ್ತದೆ. ಹೀಗಾಗಿ ಕಾದಂಬರಿಕಾರನಿಗೆ ಬರಹದ ಪ್ರಕ್ರಿಯೆಯಲ್ಲಿ ಕಲಿಯುವ ಮನೋಭಾವವೂ ಇರಬೇಕು. ಆಗ ಮಾತ್ರ ಓದುಗನೂ ಕಲಿಯುವಂತಾಗುತ್ತದೆ. ಕಲಿತ ಪ್ರಜ್ಞೆಯಿಂದ ಬರೆದರೆ ಓದುಗ ಕೇವಲ ತಿಳಿದುಕೊಳ್ಳಬೇಕಾಗುತ್ತದೆ.

'ಆವರಣ'ದಲ್ಲಿ ಭೈರಪ್ಪನವರು ಆ ಬಗೆಯ ಯಾವುದೇ ಕಲಿಕೆಯ ಪ್ರಕ್ರಿಯೆಗೆ ತಮ್ಮನ್ನು ತೆರೆದುಕೊಂಡಿಲ್ಲ, ಪೂರ್ವ ನಿರ್ಧಾರಿತವಾದ ಮತೀಯ ದ್ವೇಷವನ್ನು ಮತ್ಸರದಿಂದ ಬಿತ್ತುವ ಕೃತಿ ಅದು.

ಹಾಗೆ ನೋಡಿದರೆ ಜಗತ್ತಿನ ಹಲವಾರು ಶ್ರೇಷ್ಠ ಕಾದಂಬರಿಕಾರರು ಸಂಪ್ರದಾಯನಿಷ್ಠ ಮನುಷ್ಯರೂ ಆಗಿದ್ದರು. ಉದಾಹರಣೆಗೆ ದೋಸ್ತವೆಸ್ಕಿ. ಈತ ಎಷ್ಟೇ ಸಂಪ್ರದಾಯ ನಿಷ್ಠವಾಗಿದ್ದರೂ ತನ್ನ ವಿರುದ್ಧ ಶಕ್ತಿಗಳ ಬಗ್ಗೆ ದಿಗಿಲಿನಿಂದ ಕೂಡಿದ ಎಚ್ಚರವನ್ನು ಹೊಂದಿದ್ದ. ಇಲ್ಲಿ ಇನ್ನೊಂದು ವಿಷಯವೂ ಇದೆ. ಬಾಲ್ಜಾಕ್ ಎಂಬ ಕಾದಂಬರಿಕಾರ ದೊಡ್ಡ ರಾಜಶಾಹೀವಾದಿ. ಆದರೆ ಅವನ ಬರಹಗಳು ಮಾರ್ಕ್ಸ್‌ಗೆ ಬಹಳ ಇಷ್ಟವಾಗುತ್ತಿತ್ತು, ಏಕೆಂದರೆ ಬಾಲ್ಜಾಕನನ್ನು ಓದಿದರೆ ಫ್ರಾನ್ಸ್‌ನಲ್ಲಿ ಕ್ರಾಂತಿ ಏಕೆ ಅಗತ್ಯ ಮತ್ತು ಅನಿವಾರ್ಯವಾಗಿತ್ತು ಎಂಬುದು ಅರ್ಥವಾಗುತ್ತದೆ ಎಂದು ಮಾರ್ಕ್ಸ್ ಹೇಳುತ್ತಾರೆ. ಆದರೆ ಜೋಲ ಮಾರ್ಕ್ಸ್‌ಗೆ ಇಷ್ಟವಾಗುವ ತಾತ್ವಿಕತೆಯನ್ನು ಹೊಂದಿದ್ದರೂ ಮಾರ್ಕ್ಸ್ ತನಗೆ ಜೋಲಾಗಿಂತ ಬಾಲ್ಜಾಕನ ಕಾದಂಬರಿಯೇ ಇಷ್ಟ ಎಂದು ಹೇಳುತ್ತಿದ್ದರು. ಅದಕ್ಕಾಗಿಯೇ ಲಾರೆನ್ಸ್ 'ಕಾದಂಬರಿಕಾರರನ್ನು ನಂಬಬೇಡ, ಕಾದಂಬರಿಯನ್ನು ನಂಬು' ಎಂದು ಹೇಳುತ್ತಿದ್ದರು. ಒಬ್ಬ ಕಾದಂಬರಿಕಾರ ತನ್ನ ಕಾದಂಬರಿಯಲ್ಲಿ ತನ್ನ ನಂಬಿಕೆಗಳನ್ನೂ ಮೀರಿಬಿಡುವುದು ಶ್ರೇಷ್ಠ ಬಗೆಯ ಬರವಣಿಗೆ. ಇದು ಕೇವಲ ಆಸ್ತೆಟಿಕ್ ಗುಣವಲ್ಲ ಬದಲಿಗೆ ಇದೊಂದು ತಾತ್ವಿಕತೆ ಎಂದು ನಾನು ಅಭಿಪ್ರಾಯಪಡುತ್ತೇನೆ.

◆ 'ಗೃಹಭಂಗ', ಪ್ರಾಯಶಃ 'ಮತದಾನ'ವನ್ನೂ ಈ ಸಾಲಿನಲ್ಲಿ ಸೇರಿಸಬಹುದೇನೋ, ಭೈರಪ್ಪನವರು ನಂಬುವ ಸಿದ್ಧಾಂತವನ್ನು ಮೀರುವ ಕಾದಂಬರಿ. ಇದು ಭೈರಪ್ಪನವರ ಕಾದಂಬರಿಯೇ ಎಂಬ ಪ್ರಶ್ನೆ ಹುಟ್ಟಿಸುವ ಕಾದಂಬರಿ. ಉಳಿದ ಕಾದಂಬರಿಗಳಿಗೂ ಇವಕ್ಕೂ ಈ ವ್ಯತ್ಯಾಸವಿರಲು ಕಾರಣವೇನಿರಬಹುದು?

'ಮತದಾನ' ಕೂಡ ಅಂತ ಒಳ್ಳೆ ಕಾದಂಬರಿಯೇನಲ್ಲ. ನೂರಾರು ಕಾಳನ್ನು ಚೆಲ್ಲಿದಾಗ ಯಾವುದೋ ಒಂದು ಕಾಳು ಮೊಳಕೆಯೊಡೆಯುವ ರೀತಿ 'ಮತದಾನ'ವೂ ಸಹ. ಏನಾಗುತ್ತಪ್ಪ ಅಂದ್ರೆ, ಈ ಟಿ.ಎನ್. ಸೀತಾರಾಮ್, ಕಾಸರವಳ್ಳಿ, ಈ ಹಿಂದೆ ಕಾರ್ನಾಡ್ ಇಂಥವರು ಯಾರ್‍ಯಾರಿಗೆ ನವ್ಯ ಕಾಲದ ಸೌಂದರ್ಯ ಕಲ್ಪನೆ ಮತ್ತು ಕಲಾಕೃತಿ ರಚನೆಯ ಬಗ್ಗೆ ಪ್ರಜ್ಞೆ ಇರುತ್ತದೋ ಅವರುಗಳು ನಮಗೆ ಸಹ್ಯವಾಗುವ ರೀತಿಯಲ್ಲಿ ಅವನ್ನು ಚಿತ್ರಿಸಿಕೊಟ್ಟಿರುತ್ತಾರೆ.

ಆದರೆ 'ಗೃಹಭಂಗ' ಹಾಗಲ್ಲ, ಅದು ಅವರ ಸ್ವಂತ ಜೀವನದ ನಿಷ್ಠ ಚಿತ್ರಣ. ಅವರಿಗೆ ಬಹಳ ವಿಶಿಷ್ಟವಾದಂತಹ ಹಾಗೂ ಕಠಿಣವಾದಂತಹ ಬಾಲ್ಯದ ಅನುಭವಗಳಿವೆ. **We respect him for that.** ಒಂದು ಬಡ ಬ್ರಾಹ್ಮಣ ಕುಟುಂಬದ ಜೀವನ ಕಠೋರತೆ, ಪರಮಶೂದ್ರರ ಜೀವನದ ಪಡಿಪಾಟಲುಗಳಿಗೆ ಸರಿಸಮನಾಗಿರಬಹುದಲ್ಲ? ಗೃಹಭಂಗ ಅಂತಹ ಒಂದು ಚಿತ್ರಣವನ್ನು ಕಟ್ಟಿಕೊಡುತ್ತದೆ. ಆದ್ದರಿಂದಲೇ ಅದು ಭಿನ್ನವಾಗಿದೆ.

◆ ಒಂದು ಕಾದಂಬರಿಯ ಸತ್ವದ ನಿಷ್ಕರ್ಷೆಗೆ ಪ್ರಮಾಣ ರೂಪ (form) ಪರಿಣಾಮಕಾರಿ ಬಳಕೆಯೋ ಅಥವಾ ಅದರ ವಸ್ತುವೋ (content)?

ಹಾಗೆ ಫಾರ್ಮ್ ಮತ್ತು ಕಂಟೆಂಟ್ ಬೇರೆಯಾಗಿರಲು ಸಾಧ್ಯವಿಲ್ಲ, ಆ ಥರ ಬೇರೆ ಎಂದು ತಿಳಿದುಕೊಳ್ಳುವವರು ಒಳ್ಳೆಯ ಕಾದಂಬರಿಕಾರರಾಗಲು ಸಾಧ್ಯವೇ ಇಲ್ಲ. ಬರೀ ಕಂಟೆಂಟ್ ಪ್ರಮುಖ ಎಂದುಕೊಳ್ಳುವವರು ಒಳ್ಳೆಯ ಪ್ರೊಪಗೆಂಡಾ ಸಾಹಿತ್ಯ ಕೊಡಲು ಸಾಧ್ಯ. ಫಾರ್ಮ್ ಪ್ರಮುಖ ಎಂದುಕೊಳ್ಳುವವರು ಸೌಂದರ್ಯ ಶೋಭೆಯುಳ್ಳ ಸಾಹಿತ್ಯವನ್ನು ಮಾತ್ರ ಕೊಡಲು ಸಾಧ್ಯ. ಎರಡೂ ಸುಳ್ಳೇ. ಹಾಗೆಯೇ ಜನಪ್ರಿಯತೆ ಮತ್ತು ಜನಪರತೆಯೂ ಕೂಡ ಬೇರೆಬೇರೆಯಾಗಿರಬೇಕಾಗಿಲ್ಲ, ಉದಾಹರಣೆಗೆ ಸ್ವಾತಂತ್ರ ಸಂಗ್ರಾಮದ ಕಾಲದಲ್ಲಿ ಗಾಂಧಿ ಮತ್ತು ನೆಹರೂ ನಮಗೆ ಎರಡು ಮಾದರಿಗಳಾಗಿ ಮುಂದೆ ನಿಲ್ಲುತ್ತಾರೆ. ಗಾಂಧಿ ಮನುಷ್ಯನ ಅಂತರಾಳದ ಸತ್ಯ ಮತ್ತು ಅಹಿಂಸೆ ಇವುಗಳನ್ನು ಮುಂದುವರೆಸುತ್ತಾ ಒಂದು ರೀತಿಯಲ್ಲಿ ಭಕ್ತಿ ಪರಂಪರೆಯ ಮುಂದುವರಿಕೆಯಾಗಿ ಕಂಡರೆ, ನೆಹರೂ ಆಧುನಿಕತೆಯ ಪ್ರತಿನಿಧಿಯಾಗಿ ಯೂರೋಪಿನ ಒಳ್ಳೆಯದೆಲ್ಲವನ್ನೂ ಒಳಗೊಳ್ಳುವ ಆಶಯ ಹೊಂದಿದ್ದವರು. ಇಬ್ಬರೂ ಜನಪ್ರಿಯರೂ ಆಗಿದ್ದರು, ಜನಪರರೂ ಆಗಿದ್ದರು. ಹಾಗೆ ನೋಡಿದರೆ 1947ಕ್ಕೆ ಹಿಂದೆ ಇವೆರಡರ ನಡುವೆ ಅಂತಹ ದೊಡ್ಡ ವೈರುಧ್ಯ ಸೃಷ್ಟಿಯಾಗಿರಲಿಲ್ಲ, ಆದರೆ, 47ರ ನಂತರ ಭಾರತವನ್ನು ಬಲಿಷ್ಠ ರಾಷ್ಟ್ರ ಮಾಡುವ ವ್ಯಸನ ಆಟಂಬಾಂಬ್‌ಗಳನ್ನು, ಭಿನ್ನತೆಯನ್ನು ಹತ್ತಿಕ್ಕುವ ರಾಜಕೀಯವನ್ನೂ ಮತ್ತು ಅದರ ಜೊತೆಜೊತೆಗೆ ಹಿಂದೂತ್ವವನ್ನೂ ಹುಟ್ಟುಹಾಕಿತು. ಹಾಗೆ ನೋಡಿದರೆ ನನ್ನ ತಾಯಿಗೆ ಹಿಂದೂ ಎಂಬ ಪದದ ಪರಿಚಯವೇ ಇರಲಿಲ್ಲ, ಅತಿ ಹೆಚ್ಚೆಂದರೆ ತನ್ನನ್ನು ಒಬ್ಬ ಮಾಧ್ವ ಬ್ರಾಹ್ಮಣಳೆಂದೋ, ಶಿವಳ್ಳಿ ಬ್ರಾಹ್ಮಣಳೆಂದೋ ಗುರುತಿಸಿಕೊಳ್ಳುತ್ತಿದ್ದರು. ಅಲ್ಲಿ ಒಂದು ಬಗೆಯ ಧರ್ಮದೃಷ್ಟಿಗಿಂತ ಸಮುದಾಯದ ದೃಷ್ಟಿ ಕೆಲಸ ಮಾಡುತ್ತದೆ. ಅದೇರೀತಿ ಲಿಂಗಾಯತರೂ ಸಹ ತಮ್ಮನ್ನು ತಾವು ಸಾದರು, ಪಂಚಮಸಾಲಿಗಳು ಎಂದೇ ಗುರುತಿಸಿಕೊಳ್ಳುತ್ತಾರೆಯೇ ಹೊರತು ಹಿಂದೂಗಳೆಂದಲ್ಲ, ಹಿಂದೂತ್ವ ರಾಜಕೀಯವು ಹಿಂದೂಗಳಲ್ಲದವರನ್ನು ಹಿಂದೂಗಳೆಂದೂ, ಮುಸ್ಲಿಮರಲ್ಲದವರನ್ನು ಮುಸ್ಲಿಮರೆಂದೂ ಏಕರೂಪಿಗೊಳಿಸಿಬಿಟ್ಟಿತು. ಹಿಂದೂತ್ವ ರಾಜಕೀಯ ಬರುವ ಮುನ್ನ ಮುಸ್ಲಿಮರನ್ನು ತುರುಕರೆಂದೊ, ಮೊಗಲರೆಂದೊ ಪ್ರಾದೇಶಿಕವಾಗಿ ಗುರುತಿಸಲಾಗುತ್ತಿತ್ತು, ಅವರವರ ನಡುವೆ ಹಲವಾರು ಕಿತ್ತಾಟಗಳು, ಭಿನ್ನತೆಗಳು ಇರುತ್ತಿದ್ದವು ಮತ್ತು ಇವೆ. ಆದರೆ ಹಿಂದೂತ್ವ ರಾಜಕೀಯ ಹಾಗೆಯೇ 'ಆವರಣ' ಕಾದಂಬರಿ ಕೂಡ ಮುಸ್ಲಿಮರ ಇಸ್ಲಾಮೀಕರಣ ಮಾಡಿಬಿಟ್ಟಿದೆ.

ಈ ಬಗೆಯ ಏಕರೂಪೀಕರಣ ಒಂದು ಬಲಿಷ್ಠ ರಾಷ್ಟ್ರದ ಕಲ್ಪನೆಗೆ ಅತ್ಯಗತ್ಯ. ಆದ್ದರಿಂದ **I suspect state.** ಹಾಗಂತ ಪ್ರಭುತ್ವದ ನಿರಾಕರಣೆ ಮಾಡಲು ಸಾಧ್ಯವಿಲ್ಲ, ಅದು ಅಗತ್ಯ ಮತ್ತು ಅನಿವಾರ್ಯ. ಅದು ರೋಗಗ್ರಸ್ತವಾಗದಂತೆ ಮಾಡಲು ಡೆಮಾಕ್ರಸಿಯ ಅಗತ್ಯ ಏದೆ. ಆದರೆ ಅಧಿಕಾರಕ್ಕೆ ಬರುವ ಎಲ್ಲಾ ಸಿದ್ಧಾಂತಗಳು ಲೋಭಿಯಾಗಿಬಿಡುತ್ತವೆ.

ಮಧ್ಯಮ ವರ್ಗಕ್ಕೆ ಈ ಬಗೆಯ ಪ್ರಭುತ್ವ ಅತ್ಯಂತ ಆಕರ್ಷಣೀಯವಾಗಿರುತ್ತದೆ. ಈ ಬಗೆಯ ಪ್ರಭುತ್ವ ಹೆಚ್ಚು ಉಪಯೋಗವಾಗುವುದು ಈ ಮಧ್ಯಮವರ್ಗಕ್ಕೆ. ಈ ಮಧ್ಯಮ ವರ್ಗದಲ್ಲಿ ಎಲ್ಲಾ ಜಾತಿಯ ಮಧ್ಯಮವರ್ಗದವರೂ ಸೇರಿಕೊಳ್ಳುತ್ತಾರೆ. ಆದರೆ ಗಾಂಧಿ ಮತ್ತು ಠಾಗೂರ್ ಇವರಿಬ್ಬರಿಗೂ ಭಾರತ ಒಂದು ರಾಷ್ಟ್ರ ಎಂಬುದಕ್ಕಿಂತ ಒಂದು ನಾಗರಿಕತೆಯಾಗಿತ್ತು, ಇಲ್ಲಿನ ಎಲ್ಲಾ ಬಗೆಯ ವಿಭಿನ್ನ ಧಾರೆಗಳನ್ನು ಒಳಗೊಂಡ ನಾಗರಿಕತೆಯಾಗಿತ್ತು.

ಸಮಸ್ಯೆಯೆಂದರೆ ಭೈರಪ್ಪನವರಿಗೆ ಭಾರತ ಒಂದು ನಾಗರಿಕತೆಯಲ್ಲ, ಎಂತೆಂಥಾ ವೈವಿಧ್ಯತೆಗಳಿವೆ ಈ ದೇಶದಲ್ಲಿ; ಹಲವು ಬಗೆಯ ಆದಿವಾಸಿಗಳು, ಹಲವು ಬಗೆಯ ಎಣ್ಣೆ ಬಳಕೆಯ ಸಂಸ್ಕೃತಿಗಳು ಅಂದರೆ, ತೆಂಗಿನೆಣ್ಣೆ ಬಳಸುವ ಕೇರಳದಿಂದ ಹಿಡಿದು ಸಾಸಿವೆ ಎಣ್ಣೆ ಬಳಸುವ ಉತ್ತರ ಭಾರತದವರೆಗೂ ಹಲವು ಬಗೆಯ ವಿಶಿಷ್ಟ ನಾಗರಿಕತೆ ಹೊಂದಿರುವ ದೇಶ ನಮ್ಮದು.

ಆದರೆ ಒಂದು ಬಲಿಷ್ಠ ರಾಷ್ಟ್ರಕ್ಕೆ ಒಂದು ಮಾರುಕಟ್ಟೆ ಆರ್ಥಿಕತೆಗೆ ಈ ವೈವಿಧ್ಯತೆಗಳು ಒಂದು ದೊಡ್ಡ ಸಮಸ್ಯೆಯನ್ನುಂಟುಮಾಡುತ್ತವೆ. ಆದ್ದರಿಂದಲೇ ಅಂತಹ ಮಾರುಕಟ್ಟೆ ಶಕ್ತಿಗಳನ್ನು, ಬಲಿಷ್ಠ ರಾಷ್ಟ್ರ ಕಲ್ಪನೆಯನ್ನು ವಿಮರ್ಶಿಸುವವನೇ ಲೇಖಕನಾಗಲು ಸಾಧ್ಯ. ಆದ್ದರಿಂದಲೇ ನನಗೆ ಅರುಂಧತಿ ರಾಯ್, ಲಂಕೇಶ್, ತೇಜಸ್ವಿ ಉತ್ತಮ ಮತ್ತು ಆಪ್ತ ಲೇಖಕರೆನಿಸುತ್ತಾರೆ.

ಹೀಗಾಗಿ ನನಗೆ ಜನಪ್ರಿಯ ಎಂದು ಹೇಳಿದಾಗ ಯಾವ ಜನರ ಪ್ರಿಯ ಎಂಬ ಪ್ರಶ್ನೆ ಬರುತ್ತದೆ. ಓದಲಿಕ್ಕೆ ಬರುವ ಮಧ್ಯಮವರ್ಗದ ಮಾನದಂಡವೇ ಈ ದೇಶದಲ್ಲಿ ಜನಪ್ರಿಯತೆಯ ಮಾನದಂಡವಾಗಲಾರದು. ಅದು ಈ ದೇಶದ ಚುನಾವಣೆಗಳ ಥರ. ಗೆದ್ದು ಬಂದ ರಾಜಕೀಯ ಪಕ್ಷವನ್ನು ಬಹುಮತ ಪಡೆದ ಪಕ್ಷ ಎಂದು ನಾವು ಕರೆದರೂ ಅದು ಆ ಪಕ್ಷ ಬಹುಸಂಖ್ಯಾತ ಜನತೆಯ ಮತವನ್ನೇನೂ ಪಡೆದಿರುವುದಿಲ್ಲ, ಶೇ. 2 ಓಟು ಶೇರು ಜಾಸ್ತಿಯಾದರೂ ಅಧಿಕಾರ ಪಡೆದುಬಿಡಬಹುದು. ಹೀಗೆ ಜನಪರತೆಯ ಪ್ರಶ್ನೆ ಗೆದ್ದುಬಂದ ರಾಜಕೀಯ ಪಕ್ಷದ ಗೆಲುವಿನ ತರಹದ್ದು ಎನಿಸುತ್ತದೆ.

◆ ಕೆಟ್ಟ ಕಾದಂಬರಿ ಮತ್ತು ಒಳ್ಳೆ ಕಾದಂಬರಿ ಎಂಬ ಮೌಲ್ಯ ನಿರ್ಣಯಗಳು ಯಾವತ್ತಿಗೂ ವ್ಯಕ್ತಿನಿಷ್ಠವಾದದ್ದೇ? ಅದಕ್ಕೊಂದು ಸಾರ್ವತ್ರಿಕ ಮಾನದಂಡಗಳನ್ನು ಹಾಕಿಕೊಳ್ಳಲು ಸಾಧ್ಯವಿಲ್ಲವೇ?

ನನ್ನ ಸಬ್ಜೆಕ್ಟಿವಿಟಿ (ವ್ಯಕ್ತಿ ಪ್ರಮಾಣ) ಇಲ್ಲದೆ ನಾನು ಹೇಗೆ ಪ್ರವೇಶ ಮಾಡಲು ಸಾಧ್ಯ. ಆದರೆ ನನ್ನ ಸಬ್ಜೆಕ್ಟಿವಿಟಿಯನ್ನು ಸತತವಾಗಿ ನಾನು ಸತ್ಯ ದರ್ಶನದ ಸಿದ್ಧಿಯಲ್ಲಿ ಕರೆಕ್ಟ್ ಮಾಡಿಕೊಳ್ಳು ತ್ತಿರಬೇಕು. ನನ್ನ ಸಬ್ಜೆಕ್ಟಿವಿಟಿ ಹೊರ ಪ್ರಪಂಚದಿಂದ ತಿದ್ದುಪಡಿಗೆ ತೆರೆದುಕೊಂಡಿರಬೇಕು. ನನ್ನ ಆಂತರಿಕ ಲೋಕ ಬಾಹ್ಯ ಲೋಕದಿಂದ ಪ್ರತ್ಯೇಕವಾಗಿರಲು ಹೇಗೆ ಸಾಧ್ಯ? ಉದಾಹರಣೆಗೆ ಶೇಕ್ಸ್‌ಪಿಯರ್‌ನ ಅಂತರಂಗದ ಲೋಕದಲ್ಲಿ ಬಾಹ್ಯ ಲೋಕದ ವಿದ್ಯಮಾನಗಳೆಲ್ಲ ಪಿಸುಮಾತಾಗಿ ಕೇಳಿಸುತ್ತಿದ್ದವು. ಬಾಹ್ಯಲೋಕದ ಒಳಿತು-ಕೆಡುಕುಗಳೆಲ್ಲವೂ ಶೇಕ್ಸ್‌ಪಿಯರ್‌ನ ಅಂತರಂಗದ ಪಿಸುಮಾತುಗಳಾಗುತ್ತಿದ್ದವು.


ಅದನ್ನೇ ವಿಸ್ತರಿಸಿ ಹೇಳುವುದಾದರೆ ದೇಶವಿಭಜನೆಯ ಅನುಭವ ಇರುವ ಯಾರೂ ಕೋಮುವಾದವನ್ನು ಬೆಂಬಲಿಸಲು ಸಾಧ್ಯವೇ ಇಲ್ಲ, ಉದಾಹರಣೆಗೆ ಜೈಪಾಲ್ ರೆಡ್ಡಿಯವರು ನನ್ನ ಸ್ನೇಹಿತರಾಗಿದ್ದಾಗ ಒಂದು ಮಾತನ್ನು ಹೇಳುತ್ತಿದ್ದರು. ಪಾಕಿಸ್ತಾನದಿಂದ ಇಬ್ಬರು ಬಂದರು. ಒಬ್ಬರು ಅದ್ವಾನಿ ಮತ್ತೊಬ್ಬರು ಗುಜರಾಲ್. ಅದ್ವಾನಿ ಆಗೀಗ ಜೆಂಟಲ್ ಆಗಿ ವರ್ತಿಸುತ್ತಾರೆ. ಆದರೆ ಪಾರ್ಟಿಷನ್‌ನ ಅನುಭವ ಅವರಲ್ಲಿ ಸಿಟ್ಟನ್ನು ಮೂಡಿಸುತ್ತದೆ. ಆದರೆ ಗುಜರಾಲ್ ಕೂಡ ಅಂತಹದ್ದೇ ಅನುಭವಗಳಿಗೆ ಗುರಿಯಾಗಿದ್ದರೂ ಅವರಿಗೆ ಮಾರ್ಕ್ಸ್‌ವಾದದ ಹಿನ್ನೆಲೆ ಇದ್ದುದರಿಂದ ಅವೆಲ್ಲವನ್ನೂ ತಾತ್ವಿಕ ನೆಲೆಗಟ್ಟಿನಲ್ಲಿ ಅರ್ಥ

ಮಾಡಿಕೊಳ್ಳಲು ಸಾಧ್ಯವಾಯಿತು ಎಂದು ಹೇಳುತ್ತಿದ್ದರು. ತಾತ್ವಿಕ ನೆಲೆಗಟ್ಟಿದ್ದರೆ, ತಾಳಿಕೊಳ್ಳಲು, ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಭೈರಪ್ಪನಂಥವರಿಗೆ ಆ ಬಗೆಯ ತಾತ್ವಿಕತೆ ಸಾಧ್ಯವೇ ಇಲ್ಲ. ಆದ್ದರಿಂದಲೇ ಅಲ್ಲಿ ಕೇವಲ ಸಿಟ್ಟಿರುತ್ತದೆ. ಆಗ ಅದು ಒಳ್ಳೆಯ ಸಾಹಿತ್ಯವಾಗುವುದಿಲ್ಲ.

◆ *ಆದರೆ ಎಸ್ಸೆಲ್ ಭೈರಪ್ಪನವರ ಸಾಹಿತ್ಯ ಕೃಷಿಯೆಲ್ಲಾ 'ಗೃಹಭಂಗ'ವೊಂದನ್ನು ಹೊರತುಪಡಿಸಿ, 'ಆವರಣ'ದಂತ ಕಾದಂಬರಿಗಳೇ.. 'ಆವರಣ' ಅವರ ಕಲಾತ್ಮಕ ವಿಕೃತಿಯ ಉತ್ತುಂಗ ಅಷ್ಟೆ. ಹಾಗಿರುವಾಗ ಕಲಾ ವಿಮರ್ಶೆಯಲ್ಲಿ ಕೃತಿಯೊಂದರ ಜನಪರತೆಯ ಅಂಶ ಕೂಡ ಚರ್ಚೆಗೊಳ್ಳ ಬೇಕಾದ ಸಂದರ್ಭ ಇದಲ್ಲವೇ?*

ಜನಪ್ರಿಯ ಆಗೋದು ಸಂತೋಷದ ವಿಷಯ. ಆದರೆ ಜನಪರ ಎನ್ನುವುದು ಎಲ್ಲಾ ಬಗೆಯ ನೆಮ್ಮದಿ, ಸಂತೋಷ ಹಾಗೂ ಭಾವನೆಗಳನ್ನು ಅರ್ಥ ಮಾಡಿಕೊಂಡು ವ್ಯಕ್ತಗೊಳಿಸುವ ಶಕ್ತಿಯೊಂದನ್ನು ಹೊಂದಿರುತ್ತದೆ. ದೊಡ್ಡದೊಂದು ಕಲಾಕೃತಿಗೆ ಎಲ್ಲವನ್ನೂ ಒಳಗೊಳ್ಳುವ ಶಕ್ತಿಯಿರುತ್ತದೆ. ಎಷ್ಟೊಂದನ್ನು ಒಳಗೊಳ್ಳುತ್ತದೆ ಎಂದರೆ, ತನಗೆ ವಿರುದ್ಧವಾದದ್ದನ್ನೂ ಕೂಡ ಒಳಗೊಳ್ಳುತ್ತದೆ. ಆಗಲೇ ಅದು ಪೂರ್ಣದರ್ಶನವಾಗುತ್ತದೆ. ಕುವೆಂಪು ಅವರು ಹೇಳುತ್ತಿದ್ದ ಪೂರ್ಣ ದೃಷ್ಟಿ ಇದೇ ಆಗಿತ್ತು, ಅಂತಹ ಪೂರ್ಣದೃಷ್ಟಿ ಜನಪರವೇ ಆಗಿರುತ್ತದೆ. ಇಲ್ಲದಿದ್ದರೆ ಅದು ಪೂರ್ಣ ದೃಷ್ಟಿ ಆಗುವುದೇ ಇಲ್ಲ, ನಾವಿಲ್ಲದಿದ್ದರೂ ಪ್ರಪಂಚ ಮುಂದುವರೆಯುತ್ತದೆಂಬ ಜೀವನದ ಸಾತತ್ಯದ ಬಗ್ಗೆ ಅದು ಅರಿವನ್ನು ಹೊಂದಿರುತ್ತದೆ.

◆ *'ಆವರಣ'ವು ಈವರೆಗೆ ಎಂಟು ಮರುಮುದ್ರಣ ಗಳನ್ನು ಕಂಡಿದೆ, ಹತ್ತಾರು ಸಾವಿರ ಪ್ರತಿಗಳು ಮಾರಾಟ ವಾಗಿದೆ ಎಂದು ಹೇಳಲಾಗುತ್ತಿದೆ. ಇದರ ಸಂಪೂರ್ಣ ಸತ್ಯಾಸತ್ಯತೆ ಏನೇ ಇದ್ದರೂ ಕನ್ನಡ ದಲ್ಲಿ ಭೈರಪ್ಪನವರ ಕಾದಂಬರಿ ಯೊಂದು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮಾರಾಟವಾಗಿ ರುವುದು ಇದೇ ಪ್ರಥಮ. ಭೈರಪ್ಪನವರ ಕಾದಂಬರಿ ಮತ್ತು ಭೈರಪ್ಪನವರಿಗೆ ಸಮಾಜದಲ್ಲಿ ಈ ಬಗೆಯ ಸ್ವೀಕೃತಿ ಸಿಗುತ್ತಿರು ವುದು ಕನ್ನಡದ ಸಾಂಸ್ಕೃತಿಕ ಲೋಕ ಮತ್ತು ಸಮಾಜ ಕ್ರಮೇಣ ಬಲಕ್ಕೆ ವಾಲುತ್ತಿರುವುದರ ಸಂಕೇತವೇ?*



ಈ ಮಾರಾಟದ ಹಿಂದೆ ಸಹ ನಾನು ಮಾಡಿದ ಭಾಷಣದ ತಪ್ಪಾಗಿ ವರದಿ ಮಾಡಿ ಎಸ್ಸೆಮ್ಮೆಸ್ ತರಿಸಿಕೊಂಡು ಅವಹೇಳನ ಮಾಡಿದ ಪ್ರಚಾರಕ ಶಕ್ತಿಗಳೇ ಇವೆ. ಹೆಚ್ಚು ಮಾರಾಟವಾದದ್ದೆಲ್ಲಾ ಶ್ರೇಷ್ಠವಾಗಿರಬೇಕಿಲ್ಲ, ಒಂದು ಪ್ರತಿಯೂ ಖರ್ಚಾಗದೇ ಇರುವ ಪುಸ್ತಕವೂ ಸಹ ಶ್ರೇಷ್ಠವಾಗಿರುವುದು ಸಾಧ್ಯ. ಭೈರಪ್ಪನವರಿಗೆ ಸಂಘಪರಿವಾರ ಒಂದು ಮಾರ್ಕೆಟ್.

ಆದರೆ ಜನರೇ ಹಾಗಾಗಿಬಿಟ್ಟಿದ್ದಾರೆ ಎಂದು ನನಗನ್ನಿಸು ವುದಿಲ್ಲ, ಒಂದು ಕ್ಯಾಡರ್ ಬೇಸ್ಡ್ ಪಕ್ಷ ಒಂದು ಲಕ್ಷ ಜನರನ್ನು ಸಂಘಟಿಸಿದರೂ ಅವರ ಶಕ್ತಿ ಒಂದು ಲಕ್ಷವೇ. ಏಕೆಂದರೆ ಅವರ ರಾಜಕೀಯ ಕೇಡರ್‌ಗಳ ಆಚೆಗೆ ದಾಟುವುದಿಲ್ಲ, ಆದರೆ ಒಂದು ಮಾಸ್ ಬೇಸ್ಡ್ ಪಕ್ಷ ಪ್ರಾರಂಭದಲ್ಲಿ ಹತ್ತು ಜನ ಇದ್ದರೂ ಬಹಳ ಬೇಗ ಅಲೆಯ ರೀತಿಯಲ್ಲಿ ಕೋಟಿ ಜನರನ್ನು ತಲುಪಿಬಿಡುತ್ತದೆ. ಜೆಪಿ ಪ್ರಾರಂಭದಲ್ಲಿ ಬಂದದ್ದು ಒಂಟಿಯಾಗಿ. ಆದರೆ ಬಹಳ ಬೇಗ ಸಮೂಹ ರಾಜಕಾರಣದ ಅಲೆಯನ್ನೇ ಹುಟ್ಟುಹಾಕಿದರು. ಕೇಡರ್ ಬೇಸ್ಡ್ ಪಕ್ಷದ ಹಾಗೂ ಮಾರಾಟದ ಮಿತಿಯಿದು. ಈಗಾಗಲೇ ಜನ ಬಲ ಪಂಥೀಯತೆಗೆ ಶಿಫ್ಟ್ ಆಗಿದ್ದಾರೆ ಎಂದು ನನಗನ್ನಿಸುವುದಿಲ್ಲ, ಆದರೆ ಶಿಫ್ಟ್ ಆಗುವ ಅಪಾಯವಂತೂ ಇದೆ. ನಮ್ಮ ದೇಶದ ಡೆಮಾಕ್ರಸಿಯಲ್ಲಿ ಬಹುಮತ ನಿಜವಾದ ಬಹುಮತವಾಗುತ್ತಿಲ್ಲ, ಅದು ಆಯ್ಕೆ ಮಾಡುವ ಕ್ರಮದಲ್ಲೇ ಒಂದು ದೋಷವಿದೆ ಎಂದು ನನಗನ್ನಿಸುತ್ತದೆ. ನಿಜವಾದ ಜನಪ್ರಿಯತೆಯನ್ನು ಅದು ಸೂಚಿಸುವುದಿಲ್ಲ.

◆ *ಕನ್ನಡದ ಸಾಂಸ್ಕೃತಿಕ ಸಂದರ್ಭದಲ್ಲಿ ಇಂದು ನಾವು ಕಾಣುತ್ತಿರುವ ಧ್ರುವೀಕರಣ ಮತ್ತು ದ್ವೇಷ ಸಿದ್ಧಾಂತಗಳ ವೈಭವೀಕರಣವನ್ನು ಹೇಗೆ ಮುಖಾಮುಖಿ ಯಾಗಬೇಕೆಂದು ನೀವು ನಿರೀಕ್ಷಿಸುತ್ತೀರಿ? ಈ ಬೆಳವಣಿಗೆ ನಮ್ಮ ಈವರೆಗಿನ ಶುದ್ಧ ಸಾಹಿತ್ಯಿಕ ತಿಳಿವಳಿಕೆಯ ಬಗೆಗಿನ ಗ್ರಹಿಕೆಯ ಪುನರಾವಲೋಕನ ಬಯಸುತ್ತಿಲ್ಲವೇ?*

ಕರ್ನಾಟಕದಲ್ಲಿ ನೀವು ಹೇಳುವಂತೆ ಶುದ್ಧ ಸಾಹಿತ್ಯಿಕ ತಿಳಿವಳಿಕೆ ಮಾತ್ರವಿತ್ತು ಎಂದು ನನಗನ್ನಿಸುವುದಿಲ್ಲ, ಪಂಪ, ಕುಮಾರವ್ಯಾಸ ಭಕ್ತಿಪಂಥದ ಕವಿಗಳು... ಇವರೆಲ್ಲರಿಗೂ ತಮ್ಮದೇ ಆದ ಒಂದು ಬಗೆಯ ರಾಜಕೀಯ ನಂಬಿಕೆಗಳಿದ್ದವು. ಹಾಗಿದ್ದೂ ಅವರು ಉತ್ಕೃಷ್ಟ ಕಾವ್ಯಗಳನ್ನು ರಚಿಸಿದರು. ಹಾಗೆಯೇ ಅಂದಿನ ಸಮಯದಲ್ಲೂ ಕನ್ನಡಕ್ಕೂ ಮರಾಠಿಗೂ ಹಲವಾರು ವ್ಯತ್ಯಾಸಗಳನ್ನು ನೀವು ಗುರುತಿಸಬಹುದು. ಎರಡೂ ಭಾಷೆಗಳಲ್ಲಿ ಏಕಕಾಲದಲ್ಲಿ ನವ್ಯ ಪರಂಪರೆ ಪ್ರಾರಂಭವಾದರೂ ಮರಾಠಿ ಸಾಹಿತಿಗಳು ವಿಶೇಷವಾಗಿ ಫಾರ್ಮ್‌ನ ಗೀಳನ್ನು ಹತ್ತಿಸಿಕೊಂಡರು. ಆದರೆ ನಮ್ಮಲ್ಲಿ ಅಡಿಗರು ನವ್ಯದಲ್ಲೇ 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ರಾಜಕೀಯ ವಿಷಯವುಳ್ಳ ನವ್ಯ ಕಾವ್ಯ ಬರೆದರು. ನಾನು ಘಟಶ್ರಾದ್ಧ ಬರೆದೆ, ಲಂಕೇಶ್ ರಾಜಕೀಯ ವಿಷಯಗಳನ್ನು ಬರೆಯುತ್ತಾ ಹೋದರು. ಹೀಗೆ ನಮ್ಮಲ್ಲಿ ಪ್ರಾಯಶಃ ಕೆ.ಎಸ್. ನರಸಿಂಹಸ್ವಾಮಿ ಯೊಬ್ಬರನ್ನು ಹೊರತುಪಡಿಸಿದರೆ ಶುದ್ಧ ಸಾಹಿತ್ಯ ಮಾತ್ರ ಬರೆದವರು ಯಾರೂ ಇಲ್ಲ. ನರಸಿಂಹಸ್ವಾಮಿಯವರ ಕಾವ್ಯದಲ್ಲೂ ರಾಜಕೀಯವೆಂಬ ಅಂಶಗಳಿವೆ. ಹೀಗೆ... ನಮ್ಮಲ್ಲಿ ಯೂರೋಪಿನಲ್ಲಿ ಆದಂತೆ **Art for art sake** ಎಂಬ ತುದಿಗೆ ಹೋಗಲಿಲ್ಲ, ಪ್ರಾಯಶಃ ಕರ್ನಾಟಕ ಶಾಸ್ತ್ರೀಯ ಸಂಗೀತ ಮಾತ್ರ ಈ ಬಗೆಯ ರಾಜಕೀಯಗಳಿಂದ ಹೊರತಾಗಿ ಉಳಿದಿದೆ ಎನ್ನಬಹುದೇನೊ.

ಸಾಹಿತಿಗಳು ಎಂದಿಗೂ ಮೌನವಾಗಿರಬಾರದು. ಗುಜರಾತ್‌ನಂತಹ ದುರಂತಕ್ಕೆ ಅಲ್ಲಿನ ಲೇಖಕರ ಮೌನವೂ ಒಂದು ಕಾರಣವಾಗಿತ್ತು, ನಮ್ಮೆದುರು ನಡೆಯುತ್ತಿರುವ ಈ ಕ್ರೌರ್ಯಕ್ಕೆ ಸಾಹಿತಿ ಮೌನಿಯಾಗದೇ ಪ್ರತಿಕ್ರಿಯಿಸ ಲೇಬೇಕು.

◆ *ರಾಜಕೀಯ ಲೋಕದಲ್ಲಿ ಬಲಪಂಥೀಯತೆಯ ವಿಜೃಂಭಣೆಗೆ ಎಡ ಶಕ್ತಿಗಳ ಬಲಹೀನತೆಯೂ ಒಂದು ಕಾರಣ. ಮತ್ತು ಆ ಬಲಹೀನತೆಗೆ ಸಮಾಜದಲ್ಲಿ ರಚನಾತ್ಮಕವಾಗಿ ಬರುತ್ತಿರುವ ಬದಲಾವಣೆಗಳೂ ಕಾರಣ ಎನ್ನಲಾಗುತ್ತದೆ. ಉಗ್ರ ಜಾಗತೀಕರಣದ ಮತ್ತು ಉಗ್ರ ಹಿಂದೂತ್ವದ ಶಕ್ತಿಗಳ ಎದುರು ರಾಜಕೀಯವಾಗಿ ನಾವು ಕಟ್ಟಿಕೊಂಡಿರುವ ಸಾಧನಗಳು ಸಮಾಜವಾದ, ಜಾತ್ಯತೀತತೆ ಯಂತ ಸಂವಿಧಾನಿಕ ಬುನಾದಿಯನ್ನು ರಕ್ಷಿಸಿಕೊಳ್ಳಲು ವಿಫಲವಾಗುತ್ತಿರುವ ಈ ಹೊತ್ತಿನಲ್ಲಿ ಸಾಂಸ್ಕೃತಿಕವಾಗಿ ಮಾತ್ರ ಅದನ್ನು ಕಾಪಾಡಿಕೊಳ್ಳಲು ಸಾಧ್ಯವೇ? ಈ ಸಾಂಸ್ಕೃತಿಕ ಬಿಕ್ಕಟ್ಟು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಹೊಸ ಹಾದಿಯನ್ನು ನಿರೀಕ್ಷಿಸುತ್ತಿಲ್ಲವೇ?*


ಮೊದಲಿಗೆ, ಮಕ್ಕಳಲ್ಲೂ ಧ್ರುವೀಕರಣವುಂಟುಮಾಡುವ ಶಾಲಾ ಶಿಕ್ಷಣ ಬದಲಾಗಬೇಕು. ಕಾಮನ್ ಸ್ಕೂಲ್ ಪದ್ಧತಿ ಜಾರಿಗೆ ಬರಬೇಕು. ಕನಿಷ್ಠ ಹತ್ತನೇ ತರಗತಿಯ ತನಕ ಏಕ ರೂಪದ ಶಿಕ್ಷಣ ಜಾರಿಗೆ ಬರಬೇಕು. ಏಕೆಂದರೆ ನಮಗಿರುವ ಐಕ್ಯತೆಯ ಭರವಸೆ ಹುಟ್ಟಿದ ಮಗುವಿನದು. ಅದರ ಭಾವನೆಯನ್ನು ಧ್ರುವೀಕರಣ ಮಾಡಿಬಿಡುವುದು ಆತಂಕಕಾರಿ ಯಾದದ್ದು.

ಇಂದು ನಾವು ಕಟ್ಟಿಕೊಂಡಿರುವ ರಾಜಕೀಯ ಸಾಧನಗಳು, ಸಂವಿಧಾನದ ಆಶಯಗಳನ್ನು ರಕ್ಷಿಸಲು ವಿಫಲವಾಗುತ್ತಿವೆ ಎಂಬುದು ಸತ್ಯ. ಹೀಗಾಗಿ ಜನಪರ ಚಳವಳಿಗಳು ಇವುಗಳ ರಕ್ಷಣೆಗೆ ಮುಂದಾಗಬೇಕು. ವರ್ಗ, ಜಾತಿ, ಧರ್ಮಗಳಿಗೆ ಅತೀತವಾದಂತಹ ಜನಪರ ಚಳವಳಿಗಳಿಂದ ಮಾತ್ರ ಇಂತಹ ರಕ್ಷಣೆ ಸಾಧ್ಯವಾದೀತು. ಅದರಲ್ಲೂ ಕೋಮುವಾದದ ವಿಷಯದಲ್ಲಿ ಮಾರ್ಕ್ಸ್‌ವಾದಕ್ಕೆ ಇರುವಂತಹ ಸ್ಪಷ್ಟ ಗ್ರಹಿಕೆಯ ಅಗತ್ಯವಿದೆ. ಆದರೆ ಆರ್ಥಿಕ ವಿಷಯಗಳಿಗೆ ಬಂದರೆ ಕಾಂಗ್ರೆಸ್, ಬಿಜೆಪಿ ಮತ್ತು ಕಮ್ಯುನಿಸ್ಟರ ನಡುವೆ ಹೆಚ್ಚಿನ ವ್ಯತ್ಯಾಸಗಳು ಕಂಡುಬರದಂತಾಗಿದೆ. ಹೀಗಾಗಿಯೇ ಈ ಸಂದರ್ಭದ ಬಗ್ಗೆ ಉತ್ಕಟವಾಗಿ ಯೋಚಿಸುವ ಕ್ಷಣಗಳಲ್ಲಿ ನನಗೆ ನಕ್ಸಲೈಟರ ಬಗ್ಗೆ ಸಿಂಪಥಿ ಬರುತ್ತದೆ. ಆದರೆ ಅವರ ಹಿಂಸೆಯನ್ನು ನಾನು ಬೆಂಬಲಿಸ ಲಾರೆ. ಅಲ್ಲದೆ ಬಹಳ ಮಡಿವಂತರೂ ಸಹ ಜನಸಮೂಹದ ಚಳವಳಿ ಕಟ್ಟಲು ಸಾಧ್ಯವಿಲ್ಲ, ಉದಾಹರಣೆಗೆ ಜಾತಿ ಪ್ರಶ್ನೆಯನ್ನು ಎತ್ತಿಕೊಂಡರೆ, ಅಲ್ಪಸ್ವಲ್ಪ ಜಾತಿ ಪ್ರೇಮ ಕೆಲಸ ಮಾಡಬಹುದು. ಆದರೆ ಅದು ವಿಶಾಲ ಜನಚಳವಳಿಯ ಭಾಗವೆಂದು ಅರ್ಥಮಾಡಿಕೊಂಡು ಮುಂದುವರೆಯಬೇಕು. ಅದರಲ್ಲೂ ದಲಿತ ಮತ್ತು ಶೋಷಿತ ಜಾತಿಗಳ ಜಾತಿ ಪ್ರಜ್ಞೆಯನ್ನು ಸಕಾರಾತ್ಮಕವಾಗಿ ನೋಡಬೇಕೆಂಬುದು ನನ್ನ ನಿಲುವು.

◆ *ಈ ಹಿನ್ನೆಲೆಯಲ್ಲಿ ನಿಮ್ಮ ಆತ್ಮ ವಿಮರ್ಶೆಗಳೇನು? ಮತ್ತು ಸಲಹೆಗಳೇನು?*

ಈಗಾಗಲೇ ನಾನು ಹೇಳಿದಂತೆ ನನ್ನ ಸಬ್ಜೆಕ್ಟಿವಿಟಿಯನ್ನು ಸದಾ ನಾನು ಪರೀಕ್ಷೆಗೊಡ್ಡುತ್ತಾ ಸರಿಪಡಿಸಿಕೊಳ್ಳುತ್ತಾ ಬರುತ್ತಿದ್ದೇನೆ. ಒಬ್ಬ ನಿಜವಾದ ಉದಾರವಾದಿ ಉದಾರವಾದ ವನ್ನೇ ಸಂಶಯದಿಂದ ನೋಡಬೇಕು. ಜರ್ಮನಿಯಲ್ಲಿ ಇಂತಹ ಉದಾರವಾದದ ಬೆಂಬಲದಿಂದಲೇ ನಾಜಿಗಳು ಅಧಿಕಾರಕ್ಕೆ ಬಂದರು. ಹೀಗೆ ಅನುಮಾನದಿಂದ ನೋಡಿ ತಿದ್ದಿಕೊಳ್ಳದಿದ್ದರೆ ಅದೊಂದು ಬಗೆಯ ಇಂಟಲೆಜೆನ್ಸ್ ಆಗಿಬಿಡುತ್ತದೆ. ■

ಇಬ್ರಾಹಿಂ ಸಾಹೇಬರ ಬಗ್ಗೆ ಭೈರಪ್ಪನ ಸುಳ್ಳು



ಅಲ್ಪಸಂಖ್ಯಾತರ ಮೇಲೆ ಕೋಮು ದ್ವೇಷ ಕಾರುವ 'ಆವರಣ'ದಂತಹ ಕಾದಂಬರಿಯಲ್ಲದ ಕಾದಂಬರಿಯನ್ನು ಬರೆದಿರುವ ಎಸ್.ಎಲ್. ಭೈರಪ್ಪನವರ ಅಪ್ರಾಮಾಣಿಕತೆಗೆ ಇಲ್ಲೊಂದು ಉದಾ ಹರಣೆ ಇದೆ. ಅದೇನೆಂದರೆ ಈ ಪುಸ್ತಕ ವನ್ನು ರಚಿಸುವಲ್ಲಿ ತಮಗೆ ನೆರವಾದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವಾಗಲೂ ಭೈರಪ್ಪನವರು ಪ್ರಜ್ಞಾಪೂರ್ವಕವಾಗಿ ಹಲವರ ಹೆಸರುಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಅದರಲ್ಲೂ ಎಚ್. ಇಬ್ರಾಹಿಂರವರ ಹೆಸರನ್ನು ಉಲ್ಲೇಖಿಸಿ ರುವುದು ಹಲವಾರು ಪ್ರಗತಿಪರ ಜನ ರಿಗೆ ಘಾಸಿಯನ್ನುಂಟುಮಾಡಿದೆ. ಏಕೆಂದರೆ ಇಬ್ರಾಹಿಂ ಸಾಹೇಬರು ಹಲ ವಾರು ದಶಕಗಳಿಂದ ಸೂಕ್ಷ್ಮ ಮನಸ್ಸಿನವ ರೊಂದಿಗೆ, ಸಾಹಿತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡು ಬಂದಿದ್ದಾರಲ್ಲದೆ, ಮುಸಲ್ಮಾನರನ್ನು 'ದರೋಡೆಕೋರರು, ಸಲಿಂಗಕಾಮಿಗಳು, ಖೂಳರು' ಎಂದೆಲ್ಲ ಬಿಂಬಿಸುವ ಭೈರಪ್ಪನಂತಹವರೊಂದಿಗೆ ಎಂದೂ ಕೈಜೋಡಿಸಿದವರಲ್ಲ.

ಹೀಗಿರುವಾಗ ಭೈರಪ್ಪನವರು ಅದು ಹೇಗೆ ತಮ್ಮ ಈ ಕಾದಂಬರಿಯಲ್ಲದ ಪುಸ್ತಕದಲ್ಲಿ "ಶಿವಮೊಗ್ಗದ ಎಚ್. ಇಬ್ರಾಹಿಂ ಸಾಹೇಬರು ಎಷ್ಟೋ ಸೂಕ್ಷ್ಮಾಂಶಗಳನ್ನು ಹೇಳಿ ನನ್ನ ಮನಸ್ಸಿನ ಚಿತ್ರಗಳು ಸ್ಫುಟವಾಗಲು ಸಹಾಯ ಮಾಡಿದರು" ಎಂದು ಬರೆಯುತ್ತಾರೆ? ಹಾಗೆ ಬರೆಯುವ ಮೂಲಕ ಈ ರಾಜ್ಯದ ಪ್ರಜ್ಞಾವಂತ ಮುಸಲ್ಮಾನರೂ ತಮ್ಮ ಈ ದುಷ್ಕೃತ್ಯದಲ್ಲಿ ಸಹಾಯ ಮಾಡಿದರು ಎಂದು ಬಿಂಬಿಸಲು ಭೈರಪ್ಪ ಹಂಚು ಹಾಕಿದ್ದಾರೆಯೇ?

ಪಿ. ಲಂಕೇಶರ ಮಿತ್ರರೂ ಆಗಿದ್ದ 'ಲಂಕೇಶ್' ವಾರಪತ್ರಿಕೆಯ ಹಿತೈಷಿಯೂ ಆಗಿರುವ ಇಬ್ರಾಹಿಂ ಸಾಹೇಬರನ್ನೇ ಇದರ ಬಗ್ಗೆ ಕೇಳಿದೆವು. ಅವರು ಹೇಳಿದ್ದು ಇಲ್ಲಿದೆ:

"ಪಂಡಿತ ಜಸರಾಜರ ಸಂಗೀತ ಕಾರ್ಯಕ್ರಮ ಶಿವಮೊಗ್ಗದಲ್ಲಿ (2005) ನಡೆದಾಗ ಭೈರಪ್ಪ ಬಂದಿದ್ದರು. "ಯಾವುದಾದ್ರೂ ಮುಸ್ಲಿಂ ಕುಟುಂಬವನ್ನು ಪರಿಚಯಿಸಿ. ನಾನವರ ಮನೆಯಲ್ಲಿ ಒಂದು ವಾರ ಇದ್ದು ಜೀವನ ಕ್ರಮ ನೋಡ್ಬೇಕು" ಅಂದಿದ್ದರು. ನಾನು "ಹ್ಞೂಂ" ಅಂದಿದ್ದೆ, ಆಮೇಲೆ ಆತ ನನಗೆ ನೆನಪಿಸಲೂ ಇಲ್ಲ, ಬರಲೂ ಇಲ್ಲ. ಚರ್ಚೆಯಂತೂ ಮಾಡೇ ಇಲ್ಲ."

"ಅವತ್ತಲ್ಲದಿದ್ದರೂ ಆ ಮೊದಲು ಎಂದಾದರೂ ಭೈರಪ್ಪ ಅನೌಪಚಾರಿಕವಾಗಿ ಚರ್ಚಿಸಿರಬಹುದಲ್ಲವೇ?" ಎಂಬ ಪ್ರಶ್ನೆಗೆ ಇಬ್ರಾಹಿಂ ಸಾಹೇಬರು ಉತ್ತರಿಸಿದ್ದು ಹೀಗೆ:

"ಭೈರಪ್ಪ ನನಗೆ ಮೊದಲು ಭೇಟಿಯಾಗಿದ್ದು 1980 ರಲ್ಲಿ, ನನ್ನ ಹಿರಿಯ ಮಗನ ಮದುವೆ ಸಂದರ್ಭಕ್ಕೆ ಹರಿಪ್ರಸಾದ್ ಚೌರಾಸಿಯಾ ಅವರ ಸಂಗೀತ ಕಾರ್ಯಕ್ರಮ ಆಯೋಜಿಸಿದ್ದೆ. ಈ ಕಾರ್ಯಕ್ರಮಕ್ಕೆ ನನ್ನ ಆತ್ಮೀಯರು, ಮಿತ್ರರು ಮತ್ತು ಸಂಗೀತಾಸಕ್ತರನ್ನು ಆಹ್ವಾನಿಸಿದ್ದೆ. ಆದರೆ ಆ ಹೊತ್ತಿಗೆ ಭೈರಪ್ಪನ ಪರಿಚಯ ನನಗೆ ಮುಖತಃ ಇರದಿದ್ದರಿಂದ ನಾನು ಅವರನ್ನು ಆಹ್ವಾನಿಸಿರಲಿಲ್ಲ. ಆದರೆ ಅವರಿಗೆ ಈ ಸಂಗೀತ ಕಾರ್ಯಕ್ರಮಕ್ಕೆ ಬರಬೇಕು ಅನ್ನಿಸಿತ್ತಂತೆ. ಇದರ ಬಗ್ಗೆ ಅವರು ತಮ್ಮ ಗೆಳೆಯರೊಬ್ಬರ ಹತ್ತಿರ ಹೇಳಿಕೊಂಡರಂತೆ "ನನಗೆ ಈ ಸಂಗೀತಗೋಷ್ಠಿಗೆ ಹೋಗಬೇಕೆನಿಸಿದೆ. ಆದರೆ ಆಹ್ವಾನವಿಲ್ಲ, ಏನು ಮಾಡೋದು" ಅಂತ. ಆಗ ಗೆಳೆಯರು ನನಗೆ ಪರಿಚಯ ವಿದ್ದರಿಂದ "ಭೈರಪ್ಪನವ ರಿಗೆ ಬರಬೇಕೆನಿಸಿದೆ. ಆಹ್ವಾನವಿಲ್ಲ ವೆಂದು ಸಂಕೋಚಪಡುತ್ತಿದ್ದಾರೆ. ದಯವಿಟ್ಟು ಕರೆಯಿರಿ" ಎಂದು ಹೇಳಿದ್ರು. ಆಗ ಸ್ವತಃ ನಾನೇ ಭೈರಪ್ಪನವರನ್ನು ಸಂಪರ್ಕಿಸಿ ಸಂಗೀತ ಕಾರ್ಯಕ್ರಮಕ್ಕೆ ಕರೆದೆ. ಬಂದಿದ್ದರು. ಅದು ಮೊದಲ ಭೇಟಿ. ಆನಂತರ ಮೂರ್ನಾಲ್ಕು ಬಾರಿ ನಮ್ಮ ಮನೆಗೆ ಬರುತ್ತಿದ್ದ ಸಾಹಿತಿಗಳ ಜೊತೆಗೆ ಇವರೂ ಬಂದಿದ್ದಾರಾದರೂ ಹೆಚ್ಚು ಮಾತಾಡಿರಲಿಲ್ಲ. ಹಾಗಾಗಿ ಯಾವ ಸಂದರ್ಭ ದಲ್ಲಿಯೂ ಅವರು ನನ್ನ ಜೊತೆ ಯಾವ ವಿಷಯ ಕುರಿತಾಗಿಯೂ ಚರ್ಚಿಸಿಲ್ಲ. ನಾನವರಿಗೆ ಯಾವ ಸೂಕ್ಷ್ಮಾಂಶಗಳನ್ನೂ ಹೇಳಿಲ್ಲ.... ನಾನು ಅವರಿಗೆ ಹಾಗೆಲ್ಲ ಹೇಳಿದ್ದೆ ಎಂಬುದಂತೂ ಅಪ್ಪಟ ಸುಳ್ಳು. ಹಾಗೇ ಹೇಳಿಕೊಂಡಿರುವ ಉದ್ದೇಶ ಏನೋ ನನಗೆ ಗೊತ್ತಿಲ್ಲ" ಎನ್ನುತ್ತಾರೆ.

ಕೃತಜ್ಞತೆ ಸಲ್ಲಿಸುವ ನೆಪದಲ್ಲಿ ಸುಳ್ಳು ಹೇಳಿ ಇಬ್ರಾಹಿಂ ಸಾಹೇಬರ ಬಗ್ಗೆ ಅಪಪ್ರಚಾರ ಮಾಡಿರುವ ಭೈರಪ್ಪ ಈ ಮೂಲಕ ಕನ್ನಡ ಸಾರಸ್ವತ ಲೋಕದ 'ಆತ್ಮವಂಚಕ' ಲೇಖಕ ಎಂಬುದನ್ನು ಸಾಬೀತುಪಡಿಸಿಕೊಂಡಿದ್ದಾರೆ. ಸದ್ರಿ ಲೇಖಕರ ಮಾತಿನಲ್ಲಿ ಸತ್ಯಾಂಶವಿದ್ದರೆ ಇಬ್ರಾಹಿಂ ಸಾಹೇಬರ ಎದುರು ನಿಂತುಕೊಳ್ಳಲಿ ಸಾಕು! ಅವರಿಗೆ ಮನಸ್ಸಾಕ್ಷಿ ಇದ್ದರೆ, ಸುಳ್ಳು ಹೇಳಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ತಂತಾನೇ ತಲೆ ಬಾಗುತ್ತದೆ.

ಆದರೆ 'ಆವರಣ'ದಂತಹ ಕೃತಿಯನ್ನು ರಚಿಸಿರುವ ಭೈರಪ್ಪನವರಲ್ಲಿ ಅಂತ ಸೂಕ್ಷ್ಮತೆ ಇರಲು ಸಾಧ್ಯವೇ?!

–ವರದಿಗಾರ

ಕ್ಷಮಿಸಿ ಇದು ತಮಾಷೆಗಾಗಿ

'ನನ್ನ ಕ್ಷೇತ್ರದಾಗ ನಾನೊಬ್ಬನೆ ಬಲು ಜಾಣ. ಉಳಿದೋರೆಲ್ಲಾ ದಡ್ಡರು. ಅವರು ದಡ್ಡರಾಗಿದ್ದಕ್ಕೇ ಬೆಂಗಳೂರಲ್ಲಿ ಮನೆ ಮಾಡಿ, ಕ್ಷೇತ್ರದ ಜಿಲ್ಲೆಯಿಂದ ಹೊರಗೆ ವಾಸಿಸುವ ನನಗೆ ಓಟು ಕೊಡುತ್ತಾರೆ' ಎಂಬಂತಾಡುವ ಈತ ಈಗ ಶಾಸಕ. ಒಮ್ಮೆ ಸಂಸದ ಸಚಿವನಾಗಿದ್ದ ಇನ್ನೊಮ್ಮೆ ಪಟೇಲರ ಕಾಲದಲ್ಲಿ ದೆಹಲಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿದ್ದ.

ಅದಕ್ಕೂ ಮುನ್ನ ದಿವಂಗತ ರಾಮಕೃಷ್ಣ ಹೆಗಡೆಯವರಿಗೆ ತನ್ನ ನಿಷ್ಠೆ ತೋರಿಸಲು ಅವರ ಪಾದುಕೆಗಳನ್ನು ತಲೆ ಮೇಲೆ ಹೊತ್ತು ತಿರುಗಿದ್ದ. ಮೂಲತಃ ಕಾಂಗ್ರೆಸ್ಸಿನ ಎನ್‌ಎಸ್‌ಯುಐದಿಂದ 20 ವರ್ಷಗಳ ಹಿಂದೆ ರಾಜಕೀಯ ಆರಂಭಿಸಿದ ಈತ ಜನತಾಪರಿವಾರದಲ್ಲಿ ಅಂಡಲೆದು ಈಗ ಕಾಂಗ್ರೆಸ್ಸಿನಿಂದ ತನ್ನ ಕ್ಷೇತ್ರಕ್ಕೆ ಶಾಸಕನಾಗಿದ್ದಾನೆ. ದೇವೇಗೌಡರಿಗೆ ಹೇಗೆ 'ಮಣ್ಣಿನ ಮಗ' ಎಂಬ ಅಸಡ್ಡಾಳ ಬಿರುದು ಇದೆಯೋ ಹಾಗೆ ಈತನಿಗೆ 'ಅಭಿವೃದ್ಧಿಯ ಹರಿಕಾರ' ಎಂಬ ಅಡ್ಡ ಹೆಸರಿದೆ. ಆದರೂ ಈತನ ಕ್ಷೇತ್ರ ಇಡೀ ಏಷ್ಯಾ ಖಂಡದಲ್ಲೇ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲೊಂದು.

'ಹುಡ್ಗಿರು ನನ್ನನ್ನು ಶಾರೂಕ್‌ಖಾನ್ ಅಂದ್ಕೊಂಡಿದ್ರು'

ಸಣ್ಣ ಹಳ್ಳಿಯಲ್ಲಿ ಹುಟ್ಟಿ ಧಾರವಾಡದಂತಹ ಊರಲ್ಲಿ ಎಲ್‌ಎಲ್‌ಬಿ ಓದಿದ ಈತ ಇವತ್ತು ವರ್ಷಕ್ಕೆ ನಾಲ್ಕು ಬಾರಿ ನ್ಯೂಯಾರ್ಕ್, ಅಲ್ಲಿ ಇಲ್ಲಿ ಅಂತ ಪರದೇಶ ತಿರುಗುತ್ತಾನೆ. ಪ್ರತಿ ವರ್ಲ್ಡ್‌ಕಪ್ ಮ್ಯಾಚ್ ನೋಡ್ತಾನೆ. ತನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದಕ್ಕಿಂತ ಹೆಚ್ಚಾಗಿ ದೆಹಲಿ, ಮುಂಬಯಿಗಳಿಗೆ ಹೋಗ್ತಾನೆ. ಹೋಗಲಿ ನಮ್ಮದೇನು ಅಭ್ಯಂತರವಿಲ್ಲ. ಈತ ಹೇಳ್ತಾನೆ 'ಬಾಂಬೆಗೆ ಹೋದಾಗ ಏನಾಯಿತು ಗೊತ್ತೇ? ಒಂದು ಫೈವ್‌ಸ್ಟಾರ್ ಹೋಟೆಲ್‌ಗೆ ಹೋದೆ. ಅಲ್ಲಿದ್ದ ಹುಡುಗಿಯರೆಲ್ಲ ನನ್ನನ್ನು ಶಾರೂಖ್‌ಖಾನ್ ಅಂತ ಅಂದುಕೊಂಡು ಮುತ್ತಿಕೊಂಡರು. ಆಮೇಲೆ ಪಕ್ಕದಲ್ಲಿದ್ದ ನನ್ನ ಹೆಂಡತಿ ನೋಡಿ ಇವರು ಗೌರಿ ಖಾನ್ ಅಲ್ಲ! ಅಂದಮೇಲೆ ನಾನು ಶಾರೂಖ್‌ಖಾನ್ ಅಲ್ಲ ಅಂತ ಗೊತ್ತಾಗಿ ಸಾರಿ ಅಂದು ಹೋದ್ರು" ಅಂತ ರೀಲು ಬಿಡುತ್ತಾನೆ.

ಕಾಂಗ್ರೆಸ್ಸಿಗೆ ಬಂದಮೇಲೂ ಮೊದಲಿನಂತಾಡುವ ಈತ ವರ್ಷದ ಹಿಂದೆ ಕೊಪ್ಪಳ ಜಿಲ್ಲೆಯ ಭಾನಾಪುರ ರೈಲು ನಿಲ್ದಾಣದಲ್ಲಿ ನಡೆಯುತ್ತಿದ್ದ 'ಗುರು' ಸಿನಿಮಾ ಶೂಟಿಂಗ್‌ಗೆ ಹೋಗಿ ಹತ್ತಿರದಲ್ಲಿರುವ ಐಬಿ ಕಾಂಪೌಂಡ್‌ನಲ್ಲಿ ಐಶ್ವರ್ಯಗಳಿಂದ ಒಂದು ಸಸಿ ನೆಡೆಸಲು ಮಣಿರತ್ನಂಗೆ ಹೇಳಿ ಮುಖಭಂಗಕ್ಕೀಡಾಗಿದ್ದ. ಈಗ ಅದೇ ಐಬಿ ಉದ್ಘಾಟನೆಗೆ ಶಾರೂಖ್‌ಖಾನ್ ಬರ್ತಾನೆ ಅಂತ ಹೇಳಿಕೊಂಡು ತಿರುಗುತ್ತಿದ್ದಾನೆ. ಸದ್ಯಕ್ಕೀತ ಚೀನಾ ಪ್ರವಾಸಕ್ಕೆ ಹೋಗಿದ್ದಾನೆ.

ಈತ ಯಾರೆಂಬ ಕುತೂಹಲವೇ? ಕೊಪ್ಪಳ ಜಿಲ್ಲೆಯ ಯಲಬುರ್ಗಾ ಎಂಬ ನತದೃಷ್ಟ ಕ್ಷೇತ್ರದ ಶಾಸಕ. ಹೆಸರು ಬಸವರಾಜ ರಾಯರೆಡ್ಡಿ ಅಂತ.

ಈಗ ಚೀನಾದಿಂದ ಬಂದ ಮೇಲೆ 'ಅಲ್ಲಿ ಹುಡ್ಗಿರು ನನ್ನನ್ನು ಜಾಕಿಚಾನ್ ಅಂತ ಮುತ್ತಿಕೊಂಡುಬಿಟ್ರು' ಅಂತ ಎಲ್ಲಿ ರೀಲು ಬಿಡಲು ಆರಂಭಿಸುತ್ತಾನೋ ಅಂತ ಯಲಬುರ್ಗಾದ ಜನ ಹೆದರಿ ಕುಳಿತಿದ್ದಾರೆ.

ಕೊಲೆಯಾದ ಗಣೇಶ್ ಸಾರಾಯಿರಾಣಿಯ ತಮ್ಮ!

ಕಾಟನ್‌ಪೇಟೆಯ ಕಳ್ಳಭಟ್ಟಿ ವಾರ್

ತಲೆ ಸೀಳಿ ಹೋಗಿದೆ. ಕೈ, ಹೊಟ್ಟೆ, ಬೆನ್ನು, ಎದೆ ಎಲ್ಲೆಂದರಲ್ಲಿ ಬಿದ್ದ ಮಚ್ಚೇಟಿಗೆ ಇಡೀ ದೇಹ ತ್ಯಾಪೆ ದುಪ್ಪಟಿಯಂತಾಗಿದೆ. ಬರುತ್ತಿದ್ದ ಬೈಕನ್ನು ಬೀಳಿಸಿ ನೆಲಕ್ಕೆ ಬಿದ್ದ ಗಣೇಶನನ್ನು ಹತ್ತಕ್ಕೂ ಹೆಚ್ಚು ಮಂದಿ ಹಂತಕರು ಹಾಕಿ ಕತ್ತರಿಸುತ್ತಿದ್ದರೆ ಆತನ ಪತ್ನಿ ಕಸ್ತೂರಿ ಕೊಲ್ಲುತ್ತಿದ್ದವರ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತಿದ್ದಳು. "ಅಣ್ಣಾ ನಿನ್ನ ಕಾಲಿಗೆ ಬೀಳ್ತೀನಿ, ನನ್ನ ಮಾಂಗಲ್ಯ ಉಳಿಸು.....!"

ಕೊಲ್ಲಲೆಂದೇ ಬಂದವರಿಗೆ ಹೆಂಡತಿ ಕಾಲಿಗೆ ಬಿದ್ದರೆಷ್ಟು?

ಅವರಿಗೆ ಕೊಲ್ಲಲೇಬೇಕಿತ್ತು. ಇಲ್ಲಿಗೆ ಸರಿಯಾಗಿ ಒಂದೂವರೆ ತಿಂಗಳ ಹಿಂದೆ ಊರ್ವಶಿ ಚಿತ್ರಮಂದಿರದ ಎದುರು ದಲಿತ ಪ್ಯಾಂಥರ್ಸ್ ನಾಯಕ ಬಾಲುವನ್ನು ವಿನಾಕಾರಣ ಕೊಚ್ಚಿ ಕೊಲ್ಲಿಸಿದ್ದ ರೌಡಿ ಗುಪ್ಪ, ಆವತ್ತು ತಾನು ಮಾಡಿದ್ದು ನಾಳೆ ತನ್ನ ಅಣ್ಣನಿಗೆ ಬರದಿರುತ್ತಾ? ಎಂದು ಆವತ್ತೇ ಯೋಚಿಸಬೇಕಿತ್ತು!

ಬೆಂಗಳೂರಿನ ಪರಮ ಕುಖ್ಯಾತ ಕೊಳೆಗೇರಿಯಾದ ಆಂಜನಪ್ಪ ಗಾರ್ಡನ್ ಮತ್ತು ಭಕ್ಷಿ ಗಾರ್ಡನ್ನುಗಳ ತಮಿಳು ಪಾತಕಿಗಳ ಪೈಶಾಚಿಕತೆಗಿದು ಸಣ್ಣ ನಿದರ್ಶನ ಮಾತ್ರ. ಇಲ್ಲಿಗೆ ಮೂವತ್ತು ವರ್ಷಗಳ ಹಿಂದೆ ಸಿನಿಮಾ ನೋಡಿಕೊಂಡು ತನ್ನ ಪತ್ನಿ ಮತ್ತು ಮಕ್ಕಳ ಸಮೇತ ಹೊರಬಿದ್ದ ಗಾರ್ಡನ್ ಮಣಿಯನ್ನು ಆತನ ಹೆಂಡತಿ ಮಕ್ಕಳ ಎದುರಿಗೇ ರೌಡಿ ಚಾಮರಾಜನ ಗ್ಯಾಂಗ್ ಕತ್ತರಿಸಿ ಕೊಂದದ್ದು ಆರಂಭವಾದರೆ ಈಗ ಅದೇ ಗಾರ್ಡನ್ ಮಣಿಯ ಭಾಮೈದ ಗಣೇಶನನ್ನು ಅದೇ ಚಾಮರಾಜನ ಕಡೆಯ ಹುಡುಗರು ಮತ್ತೆ ಪತ್ನಿಯ ಕಣ್ಣೆದುರೇ ಕೊಂದಿದ್ದಾರೆ. ಅದೂ ಬೆಳ್ಳಂಬೆಳಗ್ಗೆ ವಿಜಯನಗರದ ಮನುವನ ಸ್ಟಾಪಿನ ಎದುರಿಗೇ, ದೇವಸ್ಥಾನದಿಂದ ಹೊರಬಿದ್ದ ಗಣೇಶನನ್ನು ನೋಡುತ್ತ ನಿಂತಿದ್ದ ನೂರಾರು ಜನರೆದುರಿಗೇ ಕತ್ತರಿಸಿ ಹಾಕಿದ್ದಾರೆ.


ಅಕ್ಕ ತಮಿಳ್ ಕುಡಿ

ಇಲ್ಲಿಗೆ ಎರಡು ವರ್ಷದ ಹಿಂದೆ ಇದೇ ಆಂಜನಪ್ಪ ಗಾರ್ಡನ್ನಿನ ಮತ್ತೊಬ್ಬ ರೌಡಿ ಕದಿರೇಶನ ಗ್ಯಾಂಗ್ ಝೂಪಡಿ ರಾಜೇಂದ್ರನನ್ನು ಆತನ ಪತ್ನಿ ಮತ್ತು ಮಕ್ಕಳ ಮುಂದೆಯೇ ಕೊಚ್ಚಿ ಕೊಂದದ್ದು ಇಲ್ಲಿನ ರೌಡಿಗಳ ಮೃಗೀಯತೆಗೆ ಮತ್ತೊಂದು ಉದಾಹರಣೆಯಷ್ಟೇ. ಅದೇಕೆ ಈ ರೀತಿ ಹೆಂಡತಿ ಮಕ್ಕಳ ಎದುರೇ ಕೊಲ್ಲುತ್ತಾರೋ ಭಗವಂತನೇ ಬಲ್ಲ!

ಕಳ್ಳಭಟ್ಟಿ ದಂಧೆ, ಗಾಂಜಾ ದಂಧೆ, ಗಂಧದ ಸ್ಮಗ್ಲಿಂಗ್, ಸ್ನಾಪ್ ಕಳ್ಳತನ, ಕಿಸೆಗಳ್ಳತನ, ಬಡ್ಡಿ ದಂಧೆ, ಹೀಗೆ ಏನೆಲ್ಲಾ ಕಳ್ಳಕಸುಬುಗಳಿವೆಯೋ ಅದೆಲ್ಲಕ್ಕೂ ಈ ಆಂಜನಪ್ಪ ಗಾರ್ಡನ್ ಸ್ಲಮ್ಮೆಂಬುದು ಹೇಗೆ ತವರು ಮನೆಯೋ, ಹಾಗೇ ನಡೆದ ಎಲ್ಲಾ ಹತ್ಯೆಗಳಿಗೂ ಇಲ್ಲಿನ ಕಳ್ಳಭಟ್ಟಿ ರಾಣಿಯರಿಬ್ಬರೇ ಒಂದಲ್ಲಾ ಒಂದು ರೀತಿಯಲ್ಲಿ ಕಾರಣರಾಗಿರುತ್ತಾರೆಂಬುದೂ ಅಷ್ಟೇ ಸತ್ಯ.


ಮೊದಲ ಪತ್ನಿ ಕಸ್ತೂರಿ

ಇದು ಕಾಟನ್‌ಪೇಟೆ ಪೊಲೀಸರ ಪಾಪದ ಫಲವಲ್ಲದೇ ಮತ್ತೇನಲ್ಲ. ಕಳ್ಳಬಟ್ಟಿ ದಂಧೆಯಿಲ್ಲದೇ ಈ ಕಾಟನ್‌ಪೇಟೆ ಪೊಲೀಸ್ ಠಾಣೆ ನಡೆಯಬೇಕಲ್ಲ!

ಈಗ ಹತನಾದ ಗಣೇಶ ಈ ಆಂಜನಪ್ಪ ಗಾರ್ಡನ್ನಿನ ಕಳ್ಳಭಟ್ಟಿ ರಾಣಿ ತಮಿಳು ಕುಡಿಯ ಖಾಸಾ ತಮ್ಮ. ಈಕೆಯ ಅಕ್ಕ ಭವಾನಿಯ ಗಂಡನೇ ರೌಡಿ ಚಾಮನಿಂದ ಹತನಾದ ಗಾರ್ಡನ್ ಮಣಿ. ಕೊಲೆಯಾದ ಗಣೇಶನ ಅಣ್ಣ ಕುಂಟರಾಜ, ತಮ್ಮ ದಕ್ಷಿಣ ಮತ್ತೊಬ್ಬ ತಮ್ಮ ಗುಪ್ಪ, ಅಕ್ಕಂದಿರಾದ ಭವಾನಿ, ತಮಿಳು ಕುಡಿ ಎಲ್ಲರೂ ಕಳ್ಳಭಟ್ಟಿಯಲ್ಲೇ ಬೆಳೆದವರು. ಪ್ರಾರಂಭದಲ್ಲಿ ಈ ಕಳ್ಳಭಟ್ಟಿ ದಂಧೆಗೆ ಅಡ್ಡಗಾಲಿಟ್ಟ ಮತ್ತೊಬ್ಬ ರೌಡಿ ಚಾಮನನ್ನು ಗಾರ್ಡನ್ ಮಣಿ ಕುಯ್ದು ಹಾಕಿದ್ದ. ಅದಕ್ಕೆ ಪ್ರತಿಯಾಗಿ ಚಾಮ, ಕುಟ್ಟಿ, ರಾಜಾ, ತಕ್ಕಾಳಿ ಬಾಬು, ಅಶೋಕ ಸೇರಿಕೊಂಡು ಗಾರ್ಡನ್ ಮಣಿಯನ್ನು ಧಾರುಣವಾಗಿ ಕೊಂದರು.


ಅಲ್ಲಿಗೆ ಚಾಮ ಏರಿಯಾ ಬಿಟ್ಟು ಹೆಬ್ಬಾಳ, ನಾಗವಾರದ ಕಡೆ ತನ್ನ ಸಾಮ್ರಾಜ್ಯ ವಿಸ್ತರಿಸಿಕೊಂಡರೆ ಕ್ರಮೇಣ ಕಳ್ಳಭಟ್ಟಿ ದಂಧೆಗೆ ತಮಿಳು ಕುಡಿಯೇ ದೊರೆಸಾನಿ ಬಿಟ್ಟಳು. ಬರುಬರುತ್ತ ತಮಿಳುಕುಡಿಯ ಸಹೋದರರಾದ ಗಣೇಶ, ದಕ್ಷಿಣ, ಗುಪ್ಪ ಕೂಡ ಅನಾಹುತಕಾರಿ ಪಾತಕಿಗಳಾದರು. ಅದೇ ಹೊತ್ತಿಗೆ ಆಂಜನಪ್ಪ ಗಾರ್ಡನ್ನಿನ ಮತ್ತೊಂದು ಭಾಗದಲ್ಲಿ ಮತ್ತೊಬ್ಬ ಕಳ್ಳಭಟ್ಟಿ ರಾಣಿ ಮಾಲಾ ಚಿಗಿತುಕೊಂಡಳು. ಈಕೆಯ ತಮ್ಮಂದಿರಾದ ಕುಮರೇಶ, ಕದಿರೇಶ, ಸುರೇಶನೂ ಈ ಸ್ಲಮ್ಮಿನ ಅನಾಹುತಕಾರಿ ರೌಡಿಗಳಾದರು. ಒಂದೆಡೆ ಮಾಲಾ ಮತ್ತು ಆಕೆಯ ತಮ್ಮಂದಿರ ಸಾರಾಯಿ ಸಾಮ್ರಾಜ್ಯವಾದರೆ ಮತ್ತೊಂದೆಡೆ ತಮಿಳು ಕುಡಿ ಮತ್ತು ಆಕೆಯ ಪಾಪಿ ಸಹೋದರರ ಕಳ್ಳಭಟ್ಟಿ ಸಂಸ್ಥಾನ. ಸಣ್ಣಪುಟ್ಟ ವಿಷಯಕ್ಕೆ ಈ ಎರಡೂ ತಂಡಗಳು ಕಿತ್ತಾಡುತ್ತಿದ್ದವಾದರೂ ಕಳ್ಳಭಟ್ಟಿ ವಿಷಯ ಬಂದಾಗ ಎರಡೂ ಗ್ಯಾಂಗುಗಳು ಒಂದಾಗಿಬಿಡುತ್ತವೆ.

ಇದರ ಪ್ರತಿಫಲವೇ ಕಳೆದ ಏಪ್ರಿಲ್ 21 ರಂದು ಊರ್ವಶಿ ಚಿತ್ರಮಂದಿರದ ಎದುರು ನಡೆದ ಬಾಲು ಹತ್ಯೆ. ಒಂದಾನೊಂದು ಕಾಲಕ್ಕೆ ಗಾರ್ಡನ್ ಮಣಿಯನ್ನು ಕೊಂದ ಚಾಮರಾಜನಿಗೆ ಬಾಲು ವರಸೆಯಲ್ಲಿ ತಮ್ಮನಾಗಬೇಕು. ದೂರದ ನಾಗವಾರದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಕರೆಸಿ ಹಿಂಡುಗಟ್ಟಲೇ ರೌಡಿಗಳನ್ನು ಜೊತೆ ಸೇರಿಸಿ ಅದ್ದೂರಿಯ ಸನ್ಮಾನವನ್ನೂ ಏರ್ಪಡಿಸಿದ್ದ ಚಾಮರಾಜ ಕಾಲಕ್ರಮೇಣ ಜೆಡಿಎಸ್ ನಾಯಕನಾಗಿಬಿಟ್ಟ. ತನ್ನ ಅನುಪಸ್ಥಿತಿಯಲ್ಲಿ ಸಂಬಂಧಿ ಬಾಲುವನ್ನೇ ಆಂಜನಪ್ಪ ಗಾರ್ಡನ್ನಿನ ಜೆಡಿಎಸ್ ನಾಯಕನನ್ನಾಗಿ ಬೆಳೆಸುತ್ತಿದ್ದ.

ಆದರೆ ಬಾಲು ರೌಡಿಯಲ್ಲ. ಜೆಡಿಎಸ್ ಉಸಾಬರಿಯ ಜೊತೆಗೇ ಆಂಜನಪ್ಪ ಗಾರ್ಡನ್ನಿನಲ್ಲಿ ತಮಿಳು ನಾಡಿನ ದಲಿತ ಪ್ಯಾಂಥರ್ಸ್ ಸಂಘಟನೆಯ ಶಾಖೆಯೊಂದನ್ನು ಆರಂಭಿಸಿದ. ದಲಿತ ಪ್ಯಾಂಥರ್ಸ್ ನಾಯಕ ತೋಲ್ ತಿರುಮಾವಳನ್‌ರನ್ನು ಕರೆಸಿ ಆದ್ದೂರಿಯ ಪ್ರತಿಭಟನಾ ಸಭೆಗಳನ್ನು ಹಮ್ಮಿಕೊಂಡ. ಯಾವತ್ತು ಬಾಲು ಆಂಜನಪ್ಪ ಗಾರ್ಡನ್ನಿನ ಕಳ್ಳಭಟ್ಟಿ ದಂಧೆಯ ವಿರುದ್ಧ ದಲಿತರನ್ನು ಸಂಘಟಿಸಿ ಪ್ರತಿಭಟನೆಗಿಳಿದನೋ ಸಹಜವಾಗೇ ತಮಿಳುಕುಡಿ ಮತ್ತು ಮಾಲಾ ಒಂದಾಗಿಬಿಟ್ಟರು. ತಮಿಳುಕುಡಿಯ ತಮ್ಮ ರೌಡಿ ಗುಪ್ಪ ಒಂದೆರಡು ಬಾರಿ ಬಾಲು ಹತ್ಯೆಗೆ ಯತ್ನಿಸಿ ವಿಫಲನಾದ. ಆತನ ಜೊತೆ ಪದೇಪದೇ ಬಾಲು ಹತ್ಯೆಗೆ ಕೈಗೂಡಿಸಿದ್ದು ಕೆಂಪಾಪುರ ಅಗ್ರಹಾರದ ಜರ್ಕೀನ್ ಶಿಷ್ಯರಾದ ಲಿಯೋ ಮತ್ತು ಕಿರಣ. ಇವರಿಬ್ಬರೂ ಕೆಜಿಎಫ್‌ನ ಹತ ರೌಡಿಗಳಾದ ತಂಗ ಮತ್ತು ಆತನ ತಮ್ಮ ಗೋಪಿಯ ಶಿಷ್ಯರು. ಜೊತೆಗೆ ಕಾಣಿಕ್‌ರಾಜ್‌ನ ಹಂತಕ ತಿರುಪತ್ತೂರು ಶಂಕರನ ಬಂಟರು.

ಗುಪ್ಪನ ಹಾವಳಿ ವಿಪರೀತವಾದಾಗ ವಿಧಿಯಿಲ್ಲದೇ ಕಾಟನ್‌ಪೇಟೆ ಪೊಲೀಸರು ಆತನನ್ನು ಗಡಿಪಾರು ಮಾಡಿದ್ದಾರೆ. ಗುಪ್ಪ ಎಂಥಾ ಕ್ರಿಮಿಯೆಂದರೆ ಗಡಿಪಾರಾಗಿಯೂ ಬಾಲುವನ್ನು ಬೆಂಬಲಿಸುತ್ತಾನೆ ಎಂಬ ಒಂದೇ ಕಾರಣಕ್ಕೆ ಇಲ್ಲಿಗೆ ಆರು ತಿಂಗಳ ಹಿಂದೆ ಬಸವನಗುಡಿಯ ಎಸ್‌ಎಲ್‌ವಿ ಹೋಟೆಲಿನ ಮೇಲೆ ದಾಳಿ ಮಾಡಿ ಮಾಲೂರ್ ಎಂಬಾತನನ್ನು ಕತ್ತರಿಸಿಬಿಟ್ಟ.

ಆಗ ಡಿಸಿಪಿ ಸ್ವತಃ ಅಲೋಕ್‌ಕುಮಾರ್ ತಲೆ ಕೆಡಿಸಿಕೊಂಡು ಗುಪ್ಪ ಮತ್ತು ಆತನ ಗ್ಯಾಂಗನ್ನು ಪರಪ್ಪನ ಅಗ್ರಹಾರ ಜೈಲಿಗೆ ಹಾಕಿದ್ದಾರೆ. ಅಲ್ಲಿಗೆ ಗುಪ್ಪ ಕೆಲಸ ಇನ್ನಷ್ಟು ಸಲೀಸಾಗಿದೆ. ಜೈಲಲ್ಲಿ ಕೂತೇ ಬಾಲು ಹತ್ಯೆಗೆ ಸ್ಕೆಚ್ ರೂಪಿಸಿದ್ದಾನೆ. ಕಳೆದ ಏಪ್ರಿಲ್ 21 ರಂದು ಊರ್ವಶಿ ಚಿತ್ರಮಂದಿರದ ಎದುರಿಗೆ ಸಿಗ್ನಲ್ಲಿನಲ್ಲಿ ಕಾರಿನಲ್ಲಿದ್ದ ಬಾಲುವನ್ನು ತಮಿಳುಕುಡಿಯ ಮಕ್ಕಳಾದ ಅಡ್ವಿನ್, ಡಬ್ಬಲ್ ಮೀಟ್ರು, ಮೋಹನ, ಶಂಕ್ರ ಮತ್ತು ಭವಾನಿಯ ಮಕ್ಕಳಾದ ಉದಯ, ಸೂರ್ಯ ಸೇರಿಕೊಂಡು ಕಾರಿನಿಂದೆಳೆದು ಕತ್ತರಿಸಿ ಹಾಕಿದ್ದಾರೆ.




ಕಳ್ಳಭಟ್ಟಿ ವಿರುದ್ಧ ಹೋರಾಟಕ್ಕಿಳಿದಿದ್ದ ಬಾಲು ಅನ್ಯಾಯವಾಗಿ ಕೊಲೆಯಾಗಿ ಹೋದ.


ಸಾಯುವ ಮುನ್ನ ಮತ್ತೊಬ್ಬ ಕಳ್ಳಭಟ್ಟಿ ರಾಣಿ ಮಾಲಾಳ ತಮ್ಮ ಕದಿರೇಶನ ಅಟ್ಟಹಾಸ ವಿರುದ್ಧವೂ ಬಾಲು ಪತ್ರಿಕಾಗೋಷ್ಠಿ ನಡೆಸಿದ್ದ. ದಲಿತ ಪ್ಯಾಂಥರ್ಸ್ ನಾಯಕ ತೋಲ್ ತಿರುಮಾವಳನ್ ಬೆಂಗಳೂರಿಗೆ ಬಂದು ಕದಿರೇಶ ಮತ್ತು ಗುಪ್ಪ ಇಬ್ಬರು ಸೇರಿಕೊಂಡೇ ಬಾಲುವನ್ನು ಕೊಂದಿದ್ದಾರೆಂದು ಗೃಹ ಮಂತ್ರಿ ಎಂ.ಪಿ. ಪ್ರಕಾಶ್‌ಗೆ ದೂರು ಕೊಟ್ಟರು. ಅಷ್ಟಕ್ಕೂ ಬಾಲು ಜೆಡಿಎಸ್ ಕಾರ್ಯಕರ್ತ ಕೂಡ. ಕದಿರೇಶನನ್ನಾಗಲಿ, ಸಾರಾಯಿ ರಾಣಿಯರನ್ನಾಗಲಿ ಪೊಲೀಸರು ಮುಟ್ಟಲೇ ಇಲ್ಲ.

ಅಲ್ಲಿಗೆ ಬಾಲು ತಮ್ಮ ಶಂಕ್ರನ ತಲೆ ಕೆಟ್ಟಿದೆ. ಹೇಗೂ ಗುಪ್ಪ ಸೇಫಾಗಿ ಜೈಲಲ್ಲಿದ್ದಾನೆ. ತಮಿಳುಕುಡಿಯ ಮಕ್ಕಳೂ ಸದ್ಯಕ್ಕೆ ಜೈಲುಬಿಟ್ಟು ಬರಲಾರರು. ಕೈಗೆ ಸಿಗುವವನು ಗುಪ್ಪ ಅಣ್ಣ ಗಣೇಶ್ ಮಾತ್ರ. ಆತನೂ ರೌಡಿಯೇ. ಜೊತೆಗೆ ಗಂಧದ ಸ್ಮಗ್ಲಿಂಗ್ ಕೂಡ ನಡೆಸುತ್ತಾನೆ. ಆಂಜನಪ್ಪ ಗಾರ್ಡನ್ನಿನಲ್ಲಿ ಕಳ್ಳಭಟ್ಟಿ ನಡೆಸಿಯೇ ವಿಜಯನಗರದ ಪಿಆಂಡ್‌ಟಿ ಕಾಲೋನಿಯಲ್ಲಿ ಬಂಗಲೆ ಕಟ್ಟಿಸಿದ್ದಾನೆ. ಕಾರಿದೆ. ಜೈಲಲ್ಲಿರುವ ಗುಪ್ಪಗೆ ದುಡ್ಡು ಕಾಸನ್ನು ಫೀಡ್ ಮಾಡುವುದೇ ಈತ ಎಂದು ಲೆಕ್ಕಹಾಕಿದ್ದೇ ಜೂನ್ 2 ರ ಶನಿವಾರ ಬೆಳಿಗ್ಗೆ ಮುಹೂರ್ತ ಗೊತ್ತು ಮಾಡಿದ್ದಾನೆ.

ಪ್ರತಿ ಶನಿವಾರದಂತೆ ಮಾಗಡಿ ರೋಡ್ ಟೋಲ್‌ಗೇಟಿನ ಶನಿಮಹಾತ್ಮನ ದೇವಸ್ಥಾನಕ್ಕೆಂದು ಪತ್ನಿ ಸಮೇತ ಬಂದ ಗಣೇಶ ಮನುವನದ ಬಸ್‌ಸ್ಟಾಪ್ ಎದುರು ಬರುತ್ತಿದ್ದಂತೆ ಒಬ್ಬ ಬೈಕ್ ಅಡ್ಡ ತಂದಿದ್ದಾನೆ. ಅಷ್ಟೇ. ಹತ್ತು ಮಂದಿಯ ಹಂತಕ ಪಡೆ ಗಣೇಶನನ್ನು ಮುತ್ತಿಕೊಂಡಿದೆ. ಗಣೇಶ್ on the spot ಹೆಣವಾಗಿದ್ದಾನೆ.


ಈಗ ಸಾರಾಯಿ ರಾಣಿ ತಮಿಳುಕುಡಿ ವಿಕ್ಟೋರಿಯಾ ಶವಾಗಾರದ ಮುಂದೆ ನಿಂತು ಎದೆಬಡಿದುಕೊಳ್ಳುತ್ತಿದ್ದಾಳೆ. ಗಣೇಶನ ಮೊದಲ ಪತ್ನಿ ಕಸ್ತೂರಿ. ಎರಡನೇ ಪತ್ನಿ ಮೇರಿ ಇಬ್ಬರೂ ಗೋಳಿಡುವ ದೃಶ್ಯ ಎಂಥವರಲ್ಲೂ ಕಣ್ಣೀರು ತರಿಸುತ್ತದೆ. ಅದು ಆಂಜನಪ್ಪ ಗಾರ್ಡನ್ನಿನ ದುರಂತ ಮತ್ತು ಶಾಪವೂ ಕೂಡ. ಮೊನ್ನೆಗೆ ಝೂಪಡಿ ರಾಜೇಂದ್ರ ಕೊಲೆಯಾಗಿದ್ದ. ನಿನ್ನೆಗೆ ಬಾಲು ಹತನಾದ. ಈಗ ಗಣೇಶನ ಸರದಿ. ನಾಳೆ ಜೈಲಿಂದ ಹೊರಬಿದ್ದ ಗುಪ್ಪ ಸುಮ್ಮನಿರುತ್ತಾನಾ? ಗುಪ್ಪನನ್ನು ಚಾಮರಾಜ ಬಿಡುತ್ತಾನಾ? ತಮಿಳುಕುಡಿಯ ಮಕ್ಕಳು ಇನ್ನೇನು ಗತಿಯಾಗುತ್ತಾರೋ? ಮತ್ತೊಬ್ಬಳು ಸಾರಾಯಿರಾಣಿ ಮಾಲಾ ಮತ್ತು ಆಕೆಯ ತಮ್ಮ ಕದಿರೇಶ ಇನ್ನಾವ ಅನಾಹುತಕ್ಕೆ ಕೈ ಹಾಕುತ್ತಾರೋ? ಆಂಜನಪ್ಪ ಗಾರ್ಡನ್ನಿನ ಕಳ್ಳಭಟ್ಟಿ, ಗಾಂಜಾ ದಂಧೆಗೆ ಎಲ್ಲಿಯತನಕ ಪೊಲೀಸ್ ಕುಮ್ಮಕ್ಕು ಇರುತ್ತೋ ಅಲ್ಲಿಯತನಕ ಹೆಣ ಬೀಳುತ್ತಲೇ ಇರುತ್ತೆ.


ಎರಡನೇ ಪತ್ನಿ ಮೇರಿ



ವೆಂಕಣನಾರಾಯಣ ಔಟ್–ಡೈತೋಟನ ಲಕ್!

ಟೈಮ್ಸ್ ಕನ್ನಡ ಸಂಪಾದಕ ಎಕ್ಕಡ?




ವೆಂಕಟನಾರಾಯಣ ಹೀಗೆ ಟೈಮ್ಸ್ ಬಿಡುವುದಕ್ಕೆ ಇನ್ನೂ ಒಂದು ಕಾರಣವಿದೆ. ಅವರನ್ನು ವಿ.ಕ. ಸೇರಿದಂತ ಇಡೀ ವಿಜಯಾನಂದ ಪ್ರಿಂಟರ್ಸ್ ಬಳಗದ ಎಲ್ಲಾ ದಿನಪತ್ರಿಕೆಗಳ ಸಂಪಾದಕೀಯ ಸಲಹೆಗಾರರನ್ನಾಗಿ ನೇಮಿಸುವುದು ಚಿನ್ನನ್‌ದಾಸ್ ಉದ್ದೇಶವಾಗಿತ್ತು. ತನ್ಮೂಲಕ ವಿ.ಕ.ದ ವಿ. ಭಟ್ಟರನ್ನು ಮೂಲೆಗುಂಪು ಮಾಡಿ ಆತ ತಾನಾಗಿಯೇ ಕೆಲಸಬಿಟ್ಟು ಹೋಗುವಂತೆ ಮಾಡುವ ಉದ್ದೇಶವೂ ಅವರಿಗಿತ್ತೋ ಏನೋ. ವಿ.ಕ. ಬರುಬರುತ್ತ ಚೆಡ್ಡಿಗಳ ಪಾಲಿಗೆ ಮತ್ತೊಂದು 'ಹೊಸದಿಗಂತ'ವಾಗುತ್ತಿರುವ ದುರಂತವೂ ಅವರ ಕಣ್ಣಮುಂದಿದೆ.

ವಿಕದ ವಿ.ಭಟ್ಟ, ಮುಳುಗುವೀರ ಡೈತೋಟ!

ಅದಕ್ಕೆ ಮದ್ದು ಮಾಡಲೆಂದೇ ವಿ.ಭಟ್ಟನ ಹುದ್ದೆಯ ಮೇಲೊಂದು ಹುದ್ದೆ ಸೃಷ್ಟಿಸುವುದು ಟೈಮ್ಸ್ ಧಣಿಗಳ ಉದ್ದೇಶವಾಗಿತ್ತು. "ಎಲ್ಲಾದ್ರೂ ಉಂಟೆ? ವಿ. ಭಟ್ಟನ್ನ ನಿಷ್ಠುರ ಕಟ್ಟಿಕೊಂಡು ಬದುಕೋದುಂಟಾ?" ಎಂದು ವೆಂಕಟನಾರಾಯಣ ಕೈಚೆಲ್ಲಿದ್ದಾರೆ. ಸದ್ಯ ವೆಂ.ನಾ. ಜಾಗಕ್ಕೆ ಸಂ.ಕ.ದ ದುರಂತ ಪುರುಷ ಈಶ್ವರ್ ದೈತೋಟರನ್ನು ತರುತ್ತಾರೆಂಬ ಮಾತಿದೆ. ದೈತೋಟ ಎಂದರೆ ಅದು ಡೈತೋಟ ಎಂಬ ಜೋಕು ಈಗಾಗಲೇ ಚಾಲ್ತಿಗೆ ಬಂದಾಗಿದೆ. ಬರೆಯುವ ಹಂಗಿಲ್ಲ, ಬುದ್ಧಿ ಬೇಕಿಲ್ಲ, ಇಂಗ್ಲಿಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಲು ಡೈತೋಟನೇ ಬೇಕೆಂದೇನಿಲ್ಲ, ಅಂಥಾ ಸಂಯುಕ್ತ ಕರ್ನಾಟಕವನ್ನೇ ಮುಳುಗಿಸಿದ ಪುಣ್ಯಾತ್ಮನಿಗೆ 'ಕನ್ನಡ ಟೈಮ್ಸ್' ಮುಳುಗಿಸುವುದು ಎಷ್ಟು ಹೊತ್ತು?

ಅಂದ್ಹಹಾಗೆ, ಕಳೆದ ವಾರವೇ ಸಂ.ಕದಲ್ಲಿ ದೈತೋಟನಿಗೆ ಫೇರ್ವೆಲ್ ಪಾರ್ಟಿ ಕೊಟ್ಟಿದ್ದರೂ, ಆತ ಅಂದಿನಿಂದ ಅಲ್ಲಿ ಕಾರ್ಯ ನಿರ್ವಹಿಸಿಲ್ಲವಾದರೂ ಆತನ ಹೆಸರನ್ನು ಇನ್ನೂ ಸಂಪಾದಕ ಎಂದು ಆ ಪತ್ರಿಕೆ ನಮೂದಿಸುತ್ತಲೇ ಇದೆ. ಇದಕ್ಕೆ ಕಾರಣವೂ ಇದೆ.



"ಸ್ವಲ್ಪ ದಿನ ದಯವಿಟ್ಟು ಸುಮ್ಮನಿರಿ. ಟೈಮ್ಸ್ ಆಫ್ ಇಂಡಿಯಾ ಕನ್ನಡ ಪತ್ರಿಕೆಯವರೊಂದಿಗೆ ನನ್ನ ಒಪ್ಪಂದ ಸಂಪೂರ್ಣವಾದ ನಂತರ ಇದನ್ನು ಬಹಿರಂಗಗೊಳಿಸಿ'' ಎಂದು ದೈತೋಟ ವಿನಂತಿಸಿಕೊಂಡಿದ್ದಾನಂತೆ. ಆದ್ದರಿಂದ ಸಂ.ಕ ದವರೂ ಸುಮ್ಮನಿದ್ದಾರಂತೆ. ಈಗ ದೈತೋಟ ಖಾಲಿ ಮಾಡಿರುವ ಸಂ.ಕದ ಸಂಪಾದಕನ ಜಾಗಕ್ಕೆ ಕೃಷ್ಣಮೂರ್ತಿ ಹೆಗಡೆ ಎಂಬುವವರು ಅನಧಿಕೃತವಾಗಿ ಬರಲಿದ್ದಾರೆ. ಆದರೆ ಅಧಿಕೃತವಾಗಿ ಹುಬ್ಬಳ್ಳಿಯ ಮನೋಜ್ ಪಟೇಲರೇ ಬೆಂಗಳೂರಿಗ ಆವೃತಿಗೂ ಸಂಪಾದಕರಾಗಿರುತ್ತಾರೆ ಎಂಬ ಸುದ್ದಿ ಇದೆ.

ಸುದ್ದಿಲೋಕದ ಕುತಂತ್ರ ಮತ್ತು ಮಸಲತ್ತು ಬಲ್ಲವರಿಗಿದು ಆಘಾತಕಾರಿಯಲ್ಲದಿದ್ದರೂ ಅಚಾನಕ್ಕಾದ ಸುದ್ದಿಯೆ!

ಡಬ್ಬಿಂಗ್ ಪತ್ರಿಕೋದ್ಯಮದ ಮೂರ್ತರೂಪಿ ಟೈಮ್ಸ್ ಆಫ್ ಇಂಡಿಯಾದ ಕನ್ನಡ ಆವೃತಿಯ ಸಂಪಾದಕ ಹುದ್ದೆಗೆ ಹಿರಿಯ ಪತ್ರಕರ್ತ ವೆಂಕಟನಾರಾಯಣರು ರಾಜೀನಾಮೆ ಕೊಟ್ಟಿದ್ದಾರೆ. ಆ ಜಾಗಕ್ಕೆ ಎಡಬಿಡಂಗಿ ಈಶ್ವರ್ ದೈತೋಟರು ಒಕ್ಕರಿಸಲು ಈ ಕ್ಷಣಕ್ಕೂ ಕಸರತ್ತು ನಡೆಸುತ್ತಲೇ ಇದ್ದಾರೆ!

ಅಂದಹಾಗೆ "ಇದೇ ಜೂನ್ 11 ರ ನಂತರ ನಾನು ನಿಮಗೆ ಲಭ್ಯವಿಲ್ಲ" ಎಂಬ ಒಂದೇ ವಾಕ್ಯದ ರಾಜೀನಾಮೆ ಪತ್ರವನ್ನು ಟೈಮ್ಸ್ ಧಣಿ ಚಿನ್ನನ್‌ದಾಸರಿಗೆ ವೆಂಕಟನಾರಾಯಣರು ರವಾನಿಸಿದ್ದಾರೆ. "ಇಲ್ಲ, ನೀವು ನಮ್ಮ ಸಂಸ್ಥೆಯಲ್ಲಿ ಇರಬೇಕು" ಎಂದು ಚಿನ್ನನ್‌ದಾಸ್ ಎಷ್ಟು ಹೇಳಿದರೂ ಕೇಳದ ವೆಂಕಟನಾರಾಯಣರು ತಾವು ಮಠವೊಂದರಲ್ಲಿ ದೀಕ್ಷೆ ತೆಗೆದುಕೊಳ್ಳುವುದಾಗಿ ನಿರ್ಧರಿಸಿರುವುದರಿಂದ ತಾವು ಇನ್ನು ಮುಂದೆ ಆ ಸಂಸ್ಥೆಯಲ್ಲಿ ಇರುವುದಿಲ್ಲವೆಂದು ಖಚಿತವಾಗಿ ಹೇಳಿದ್ದಾರೆ.

ಈಗಾಗಲೇ ಹದಗೆಟ್ಟು ಹೋಗಿರುವ ಟೈಮ್ಸ್ ಆಫ್ ಇಂಡಿಯಾ ಕನ್ನಡ ಪತ್ರಿಕೆಯಲ್ಲಿನ ಪರಿಸ್ಥಿತಿ ಇತ್ತೀಚಿನ ಬೆಳವಣಿಗೆಗಳಿಂದ ಮತ್ತಷ್ಟು ಕೆಡುವುದರಲ್ಲಿ ಅನುಮಾನಗಳೇ ಇಲ್ಲ ಎಂಬಂತಾಗಿದೆ.

ಹೇಳಿ, ಕೇಳಿ ಫ್ಯಾಷನ್ನು, ಡಿಜೈನು, ಸೆನ್ಸೇಷನ್ನು ಇತ್ಯಾದಿ ಇಂಗ್ಲಿಷ್ ಟೈಮ್ಸ್ ಹೂರಣವನ್ನೇ ಕನ್ನಡದ ಪಾತ್ರೆಯಲ್ಲಿ ಬಡಿಸುತ್ತಿದ್ದ ಟೈಮ್ಸ್ ಕನ್ನಡದ ಕತೆಯೇ ವಿಚಿತ್ರ. ಈ ಹಿಂದಿದ್ದ ಸಂಕೇಶ್ವರರ ಉಷಾಕಿರಣವನ್ನೇ ಕನ್ನಡ ಟೈಮ್ಸ್ ಆಗಿ ಮರುಹುಟ್ಟು ಕೊಟ್ಟ ಚಿನ್ನನ್‌ದಾಸ್‌ಗೆ ಕನ್ನಡ ಪತ್ರಿಕೋದ್ಯಮದ ರೋಗ ಮತ್ತು ಔಷಧಿ ಎರಡೂ ಗೊತ್ತಿರಲಿಲ್ಲ, ಉಷಾಕಿರಣ ಎಕ್ಕುಟ್ಟಿದ್ದೇಕೆಂದೂ ತಲೆಕೆಡಿಸಿಕೊಳ್ಳಲಿಲ್ಲ. ಅದೇ ವೆಂಕಟನಾರಾಯಣರನ್ನೇ ಸಂಪಾದಕರನ್ನಾಗಿ ಮಾಡಿಬಿಟ್ಟರೆ ಸಲೀಸಾಗಿ ಭಾಷಾಂತರ ಮಾಡಿಕೊಂಡಿದ್ದುಬಿಡುತ್ತಾರೆ, ಪತ್ರಿಕೆಯೂ ಕ್ಲಿಕ್ಕಾಗುತ್ತದೆ ಎಂಬುದು ಟೈಮ್ಸ್ ಧಣಿಗಳ ಲೆಕ್ಕಾಚಾರವಾಗಿತ್ತು.

ಆದರೆ ಅವರ ಲೆಕ್ಕಾಚಾರಗಳೆಲ್ಲ ಎಕ್ಕುಟ್ಟಿಹೋದವು. ಯಾಕೆಂದರೆ ಆಗಲೇ ಹಲವು ಜನಿವಾರಿಗಳು ಟೈಮ್ಸ್ ಆಫ್ ಇಂಡಿಯಾ ಕನ್ನಡದ ಆಫೀಸನ್ನು ತಮ್ಮ ಅಧೀನಕ್ಕೊಳಪಡಿಸಿಕೊಂಡಿದ್ದರು. ಅಂತಹವರಲ್ಲಿ ಭಟ್ಟ ಎಂಬುವವನು ಪ್ರಮುಖ. ಈತ ಎಂತಹ ಜಾತಿವಾದಿ ಮತ್ತು ಸಂಘಪರಿವಾರದ ಬೆಂಬಲಿಗ ಅಂದರೆ, ತನ್ನ ಸುತ್ತಲೂ ಆರೆಸ್ಸೆಸ್ ಸಂಘಟನೆಯ ಸದಸ್ಯರನ್ನೇ ಕಲೆಹಾಕಿಕೊಳ್ಳಲಾರಂಭಿಸಿದ.

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಭಟ್ಟ ಹೇಳಿಕೇಳಿ ಆರೆಸ್ಸೆಸ್‌ನ ಕ್ಷೇತ್ರ ಪ್ರಚಾರಕನಾಗಿದ್ದಾತ. ಎದೆಯಲ್ಲಿ ವೈದಿಕ ವಿಷಬಿಟ್ಟರೆ ಲೋಕಜ್ಞಾನವಿಲ್ಲ. ಆಯಾ ಸಂಘ ಸಂಸ್ಥೆಗಳು ಕೊಟ್ಟ ಪತ್ರಿಕಾ ಹೇಳಿಕೆಗಳನ್ನೇ ತಿದ್ದಿ ಪತ್ರಿಕೆಗೆ ಸಾಗಹಾಕುತ್ತಿದ್ದನೇ ಹೊರತು ಸುದ್ದಿ ಬರೆಯುವುದು ಗೊತ್ತಿಲ್ಲ. ಉಷಾಕಿರಣ ಬರಖಾಸ್ತಾಗಿ ಕನ್ನಡ ಟೈಮ್ಸ್ ಕಣ್ಣುಬಿಡುವ ಹೊತ್ತಿಗೆ ಅಳಿದುಳಿದ ಕೆಳಜಾತಿಯ ಪ್ರತಿಭಾವಂತರನ್ನೆಲ್ಲ ಬೀದಿಗಟ್ಟಿದ ಭಟ್ಟ ಟೈಮ್ಸ್ ಕನ್ನಡದ ಆಯಕಟ್ಟಿನ ಹುದ್ದೆಗಳಿಗೆಲ್ಲ ಸ್ವಜಾತಿ ಜನರನ್ನೇ ತಂದು ತುರುಕಿದ್ದ.

ಇವರಲ್ಲಿ ಬಹುತೇಕರು ಆರೆಸ್ಸೆಸ್ ಕಾರ್ಯಕರ್ತರೆಂಬುದನ್ನು ಬಿಟ್ಟರೆ ನೆಟ್ಟಗೊಂದು ವರದಿಯನ್ನೇ ಬರೆದವರಲ್ಲ! ದಲಿತರ ಹೋರಾಟ, ಕಾರ್ಮಿಕರ ಪ್ರತಿಭಟನೆ, ರೈತರ ಧರಣಿ, ಕನ್ನಡ ಚಳವಳಿ ಸಂಬಂಧಪಟ್ಟ ವರದಿಗಳೆಂದರೇನೇ ಇವರಿಗೆ ಅಸಹ್ಯ. ಇಂಥ ಸುದ್ದಿಗಳಿಲ್ಲದೇ ಬರೇ ಪಾರ್ಟಿ, ಡಿಸ್ಕೋ, ಫ್ಯಾಷನ್ನು, ಪೆರೇಡು ವರದಿಗಳಿಗಾಗಿ ಇಂಗ್ಲಿಷ್ ಟೈಮ್ಸ್ ಇರುವಾಗ ಕನ್ನಡ ಟೈಮ್ಸ್ ಯಾರಿಗೆ ಬೇಕು? ಕನ್ನಡ ಟೈಮ್ಸ್ ಇನ್ನೆಲ್ಲಿಂದ ಉದ್ಧಾರವಾಗಲು ಸಾಧ್ಯ?

ಏಕಾಏಕಿ ಐವತ್ತು ಸಾವಿರದ ಸರ್ಕ್ಯುಲೇಷನ್ ಮುಟ್ಟುತ್ತದೆ ಎಂದು ಲೆಕ್ಕಹಾಕಿದ ಟೈಮ್ಸ್ ಧಣಿಗಳಿಗೆ ಪ್ರಸಾರ ಸಂಖ್ಯೆ ಹದಿನೈದು ಸಾವಿರವನ್ನೂ ದಾಟದೇ ಹೋದಾಗ ತಲೆ ಕೆಟ್ಟಿದೆ. ಇದೇ ಹೊತ್ತಿಗೆ ಸರಿಯಾಗಿ ಅನುಭವಿ ಮತ್ತು ಕಸುಬುದಾರ ಶೂದ್ರ ಪತ್ರಕರ್ತರಿಗೆಲ್ಲ ಒಂದೊಂದು ತರಹದ ಕಿರುಕುಳ ನೀಡಿ ಹೊರದಬ್ಬಲಾಗಿದೆ.

ಇಂತಹ ಪರಿಸ್ಥಿಯಲ್ಲಿ ಕಾರ್ಯನಿರ್ವಹಿಸಲಾಗುವುದಿಲ್ಲ ಎಂದು ವೆಂಕಟನಾರಾಯಣರು ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಈಗ ಅವರ ಜಾಗಕ್ಕೆ ಸಂಯುಕ್ತ ಕರ್ನಾಟಕದಿಂದ ಈಶ್ವರ್ ದೈತೋಟ ಬರಲಿದ್ದಾರೆ.

ಟೈಮ್ಸ್ ಆಫ್ ಇಂಡಿಯಾಗೆ ಇನ್ನೆಂತೆಂತಹ ಗತಿ ಕಾದಿದೆಯೊ ಬಲ್ಲವರ್‍ಯಾರು?

–ವರದಿಗಾರ

(3ನೇ ಪುಟದಿಂದ)

ನಿಜ, ಅಪ್ಪನಂತೆ, ತೇಜಸ್ವಿಯವರಂತೆ ರಾಮದಾಸ್‌ರವರು ಹೆಚ್ಚು ಬರೆದಿಲ್ಲ. ಆದರೆ ತಮ್ಮ ನೇರ ಮತ್ತು ನಿಷ್ಠುರ ನಿಲುವಿನಿಂದಾಗಿ ಅವರು ಅಪಾರ ಸಂಖ್ಯೆಯ ಜನರ ಮೇಲೆ ಪ್ರಭಾವ ಬೀರಿದ್ದಾರೆ. ನೈತಿಕ ಪ್ರಜ್ಞೆಯಾಗಿದ್ದಾರೆ. ಈಗಾಗಲೇ ಹಲವಾರು ವರ್ಷಗಳಿಂದ ಡಯಾಬಿಟಿಸ್‌ನೊಂದಿಗೆ ಮತ್ತು ಹೃದಯದ ಸಮಸ್ಯೆಯೊಂದಿಗೆ ಜೀವನ ಸಾಗಿಸುತ್ತಾ ತಮ್ಮ ಎಲ್ಲಾ ಉತ್ಸಾಹಗಳನ್ನು ಉಳಿಸಿಕೊಂಡು ಬಂದಿರುವ ರಾಮದಾಸರು ಇನ್ನೂ ಬಹಳಷ್ಟು ಕಾಲ ನಮ್ಮೊಂದಿಗೆ ಇರಲೇಬೇಕಿದೆ. ನಮ್ಮನ್ನು ಸದಾ ಎಚ್ಚರದಲ್ಲಿಡಲು, ಮಾರ್ಗವನ್ನು ಸೂಚಿಸಲು, ಬೈಯಲು, ಟೀಕಿಸಲು ಅವರ ಅವಶ್ಯಕತೆ ಇದ್ದೇ ಇದೆ.

ಮೊನ್ನೆ ಬೊಳುವಾರು ಮೊಹಮದ್ ಕುಂಞರವರು ತಮ್ಮ ಮಾವನಿಗೂ ಶ್ವಾಸಕೋಶದ ಕ್ಯಾನ್ಸರ್ ಆಗಿತ್ತು, ಶಸ್ತ್ರ ಚಿಕಿತ್ಸೆ ಪಡೆದ ನಂತರ ಈಗ ಆರಾಮಾಗಿದ್ದಾರೆ ಎಂದು ಹೇಳಿದರು. ಹಾಗೆಯೇ ರಾಮದಾಸರೂ ಆದಷ್ಟು ಬೇಗ ಚೇತರಿಸಿಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ. ನನ್ನ, ನಿಮ್ಮ, ಎಲ್ಲರ ಪರವಾಗಿ.....

* * * * * * * * * *

ರಾಜ್ಯದ ಲಕ್ಷಾಂತರ ಮಕ್ಕಳಂತೆ ಕಳೆದ ವಾರ ನಮ್ಮ ಪುಟ್ಟಿ ಇಶಾ ಕೂಡಾ ಶಾಲೆಗೆ ಹೋಗಲಾರಂಭಿಸಿದಳು. ಆದರೆ ಆಕೆ ಈಗತಾನೇ ಶಾಲೆಗೆ ಸೇರಿರುವುದರಿಂದ ಈ ಹೊಸ ಜಗತ್ತಿನ ಬಗ್ಗೆ ಭಯ, ಆತಂಕ. ಸಹಜವಾಗಿಯೇ ಮೊದಲೆರಡು ದಿನ ಶಾಲೆಗೆ ಹೋಗುವುದರ ವಿರುದ್ಧ ಪ್ರತಿಭಟಿಸಿದಳು. ಆಕೆಯ ಪ್ರತಿಭಟನಾ ಶೈಲಿ ಹೀಗಿತ್ತು: "ಅಮ್ಮಾ, ನೀನು ಸ್ಕೂಲಿಗೆ ಕಳಿಸ್ತೀಯಾ... ನಾನು ಸ್ನಾನ ಮಾಡಲ್ಲ, ಕಕ್ಕಾ ಮಾಡಲ್ಲ...." ಅವಳನ್ನು potty ಮೇಲೆ ಕೂಡಿಸಲು ಬೇಬಿ ಎಷ್ಟೇ ಪ್ರಯತ್ನಿಸಿದರೂ ಸೆಟೆದೆದ್ದು ನಿಲ್ಲುತ್ತಿದ್ದ ಇಶಾ ತನ್ನ ಈ "ಕಕ್ಕಾಗ್ರಹ"ವನ್ನು ಮುಂದುವರೆಸಿದಳು. ಅವಳ ವಿರೋಧದ ಮುಂದೆ ಶಾಲೆಗೆ ಕಳುಹಿಸುವುದಿಲ್ಲ ಎಂದು ಸುಳ್ಳು ಹೇಳಲು ಇಚ್ಛಿಸದ "ಸತ್ಯಾಗ್ರಹಿ" ಬೇಬಿ ಅದೇನೇನೋ ಹೇಳಿ ಪುಸಲಾಯಿಸಿದಳು. ಕೊನೆಗೂ ಇಶಾಳಿಗೆ ಗೊತ್ತಾಯಿತು: ತನ್ನ 'ಕಕ್ಕಾಗ್ರಹ'ದ ಮುಂದೆ ಅಮ್ಮನ 'ಸತ್ಯಾಗ್ರಹ'ವೇ ಗೆಲ್ಲುತ್ತದೆ ಎಂದು. ಈಗ ಆಕೆ ಸುಮ್ಮನಾಗಿದ್ದಾಳೆ.

ಇಶಾಳ ಈ 'ಕಕ್ಕಾಗ್ರಹ' ಹೋರಾಟ ತುಂಬಾ cute ಆಗಿದ್ದರಿಂದ ಇಲ್ಲಿ ಹೇಳಿದ್ದೇನೆ. Simply smile!

–ಗೌರಿ ಲಂಕೇಶ್

ಉಳ್ಳಾಲ ಚುನಾವಣೆ

ಮುದ್ದೇಗೌಡರ ಮನೆಯಲ್ಲೂ ಕದನ

ಉಳ್ಳಾಲದ ಉಪಚುನಾವಣೆಯ ಕಾವು ಪದ್ಮನಾಭನಗರದ ಮುದ್ದೇಗೌಡರ ಮನೆಗೂ ತಾಕಿದೆಯಂತೆ. ತಮ್ಮ ಪಕ್ಷ ಎಂದಿದ್ದರೂ ಮುದ್ದೆ-ಮಟನ್ ಸಾರು ಜನರದ್ದು, ತಾವು ಎಂದಿಗೂ ಕುಂಬಳಕಾಯಿ ಸಾಂಬಾರು ಮತ್ತು ಪತ್ರೊಡೆಯ ಜನರ ಪರವಲ್ಲ ಎಂದು ಹೇಳಲು ಹೋಗಿ ಮನ್ಸಾರಿ ಎಂಬ ತುರುಕ ಅದೇನನ್ನೋ ಹೇಳಿದ್ದಕ್ಕೆ ಮುದ್ದೇಗೌಡರ ಮಗ ಶೇವಣ್ಣನೂ, ಆತನ ಮಡದಿ ಭವಾನಮ್ಮಳೂ ದೊಡ್ಡ ಗಲಾಟೆಯನ್ನೇ ಎಬ್ಬಿಸಿದರಂತೆ.

"ಹೋಗಲಿ, ಸುಮಾರುಸ್ವಾಮಿ ಮೊದಲು ಮುಖ್ಯಮಂತ್ರಿಯಾಗಲಿ, ಆಮೇಲೆ ನಮ್ಮವರು ಆಗ್ತಾರೆ ಅಂತ ಸುಮ್ಮನಿದ್ರೆ ಬುದ್ಧ್ಯೋರು ಹೀಗೆ ಮಾಡದಾ?" ಎಂದು ಭವಾನಮ್ಮ ತಕರಾರೆತ್ತಿದಳಂತೆ. ಅವಳೊಂದಿಗೆ ದನಿಗೂಡಿಸಿದ ಶೇವಣ್ಣನೂ "ಏಟು ದಿನಾ ಅಂತ ನಾನು ಸುಮ್ಮಿರದು? ನಾನು ನೊಡ್ತಾ ಇವ್ನಿ. ನಂಗೆ ಬರೀ ರಸ್ತೆ, ರೋಡು, ಡ್ಯಾಮು ಅಂತ ಕೊಟ್ಟು ಅವ್ನಿಗೆ ಮಾತ್ರ ಇಡೀ ರಾಜ್ಯಾನೇ ಕೊಟ್ರೆ ಎನು ಮಾಡಾದು?" ಎಂದು ಮುದ್ದೇಗೌಡರಿಗೆ ದೂರಿದನಂತೆ.

ಸಕತ್ತಾಗಿ ಮುದ್ದೆ ಮೊಸರನ್ನು ತಿಂದು ಆಳವಾದ ನಿದ್ದೆಗೆ ಜಾರಿದ್ದ ಮುದ್ದೇಗೌಡರು ನಿಧಾನವಾಗಿ ಕಣ್ಣುಗಳನ್ನು ತೆರೆದು, ನಿಟ್ಟುಸಿರು ಬಿಟ್ಟು "ಅದೆಲ್ಲ ಚುನಾವಣಾ ತಂತ್ರ ಮಗಾ. ನೀನು ಸುಮ್ಮಿರು. ಆ ಕಾಂಗ್ರೆಸ್‌ನವರನ್ನು ಸೋಲಿಸಲಿಕ್ಕೆ ನಾನೇ ಆ ತುರ್ಕನನ್ನ ಮಗನಿಗೆ ಹಾಗೆ ಹೇಳು ಅಂದಿದ್ದೆ. ನಿನಗೆ ಚಾನ್ಸ್ ಸಿಕ್ಕೇ ಸಿಗುತ್ತೆ ಗೊತ್ತಾಯ್ತಾ?" ಅಂದರಂತೆ.

ಇದನ್ನೆಲ್ಲ ಬಾಗಿಲ ಹಿಂದಿನಿಂದ ಕೇಳಿಸಿಕೊಳ್ಳುತ್ತಿದ್ದ ಸುಮಾರುಸ್ವಾಮಿಯ ಮಡದಿ ಕೋಲಾರಮ್ಮ ಅನಿತಾಂಬೆ ಧಾವಿಸುತ್ತಾ ಹೊರಬಂದು "ದೇವರಾಣೆಗೂ, ಆ ಪಕ್ಷದವರ ತಲೆಹಿಡುದುಕೊಂಡು ಬಂದದ್ದು ನಮ್ಮವರೋ, ಈ ಭವಾನಮ್ಮನವರೋ. ನಮ್ಮವರು ಹಾಗೆ ಮಾಡಿರದಿದ್ದರೆ ಇವತ್ತು ನಮ್ಮ ವಂಶವೇ ಅಧಿಕಾರದಲ್ಲಿರುತ್ತಿರಲಿಲ್ಲ. ಹೋಗಲಿ. ಏನೋ ಭಾವ ಅಂತ ಮಂತ್ರಿ ಮಾಡಿದ್ರೆ, ಈಗ ನಮ್ಮವರ ಜಾಗಾನೇ ಬೇಕು ಅಂದ್ರೆ ಅದ್ಯಾವ ನ್ಯಾಯ?" ಎಂದು ಕೇಳುತ್ತಾ ತನ್ನ ಸೀರೆಯ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಶೇವಣ್ಣನ ಜೋತೆಗೂ ಆತನ ಹೆಂಡತಿಯ ಜೊತೆಗೂ ಜಗಳಕ್ಕೆ ಬಿದ್ದಳಂತೆ.

ಈ ಎಲ್ಲ ವಿದ್ಯಮಾನಗಳ ಬಗೆಗಿನ ಸುದ್ದಿ ಯೆಡ್ಡಿಚಡ್ಡಿ ಮನೆವರೆಗೂ ತಲುಪಿ "ನನ್ನ ಹಣೇಲಿ ಏನು ಬರೆದಿದೆ ಅನ್ನೋದಕ್ಕಿಂತ. ಶೇವಣ್ಣನ ತಲೇಲಿ ಏನು ಬರೆದಿದೆ ಅಂತ ಸ್ವಲ್ಪ ವಿಚಾರಿಸಿ ನೋಡಿ" ಎಂದು ತಮ್ಮ ಜ್ಯೋತಿಷಿಗಳಿಗೆ ಫೋನ್ ಹಾಯಿಸಿದರಂತೆ.


ಇದನ್ನು ಕೇಳಿ ತನ್ನ ರೇಷ್ಮೆ ಸೀರೆಯನ್ನು, ಯಡ್ಡಿಯ ಸಫಾರಿ ಸೂಟನ್ನು ಇಸ್ತ್ರಿ ಮಾಡುತ್ತಿದ್ದ ಶೋಭಕ್ಕ ಗಳಗಳನೆ ಅಳಲಾರಂಭಿಸಿದ್ದು ಸುಳ್ಳಲ್ಲ ಎನ್ನುತ್ತಿವೆ ಚಡ್ಡಿಗಳು.

– ಕುಹುಕಿ

ಶಿವಮೊಗ್ಗ ನಾಗನ ಎನ್‌ಕೌಂಟರ್!

ರಿವೇಂಜ್ ಕಿಲ್ಲಿಂಗ್ಸ್ 32

ರಾ. ಸೋಮನಾಥ್



ಹೆಬ್ಬೆಟ್ ಮಂಜ

ಜವಗೊಂಡನಹಳ್ಳಿ ಡಾಬಾ ಮೇಲಿನ ದಾಳಿಯಲ್ಲಿ ದೀಪು ಗುಂಡಿಗೆ ಬಲಿಯಾಗಿದ್ದು, ಕತ್ತರಿಸಲ್ಪಟ್ಟರೂ ಕೊರಂಗು ಬದುಕುಳಿದದ್ದು ಇತ್ಯಾದಿಗಳೆಲ್ಲ ನೇರವಾಗಿ ಬೆಂಗಳೂರು ಪೊಲೀಸರಿಗೆ ಸಂಬಂಧ ಪಟ್ಟದ್ದಲ್ಲವಾದರೂ ಕಾರಣ ಮಾತ್ರ ಬೆಂಗಳೂರೇ ಆಗಿತ್ತು. ಒಂದೇ ಮಾತಲ್ಲಿ ಹೇಳಬೇಕೆಂದರೆ ಬೆಂಗಳೂರಿನ ಪಾಪ ವೆಂಬುದು ಚಿತ್ರದುರ್ಗದಲ್ಲಿ ಫಲಿಸಿತ್ತು.

ಮತ್ತು ಅದು ಬೆಂಗಳೂರು ಪೊಲೀಸರ ಅಸ್ತಿತ್ವಕ್ಕೇ ಪಾತಕಿಗಳು ಎಸೆದ ಪ್ರಶ್ನೆಯಂತಿತ್ತು!

ಸಶಸ್ತ್ರಧಾರಿ ಪೊಲೀಸರ ಬೆಂಗಾವಲಿದ್ದೂ ಕೋರ್ಟ್ ಗೆಂದು ಬಂದಿದ್ದ ಕೊರಂಗು ತಂಡದ ಮೇಲೆ ಬೆಂಗಳೂರಿನ ಹಿಂದುಗಟ್ಟಲೇ ರೌಡಿಗಳು ಚಿತ್ರದುರ್ಗದ ತನಕ ಹಿಂಬಾಲಿಸಿ ದಾಳಿ ಮಾಡುತ್ತಾರೆಂದರೆ ಏನರ್ಥ? ಬೆಂಗಳೂರು ಪೊಲೀಸರಿಗೆ ಅದರಲ್ಲೂ ಸಿಸಿಬಿ ಡಿಸಿಪಿ ರವಿಕಾಂತೇಗೌಡರಿಗೆ ಇದಕ್ಕಿಂತ ಅವಮಾನ ಬೇಕೆ?


ಒಂದೆರಡು ಎನ್‌ಕೌಂಟರ್ ಆಗದ ಹೊರತು ಇದ್ಯಾವುದೂ ಸರಿಹೋಗದೆಂಬ ನಿರ್ಧಾರಕ್ಕೆ, ಮಚ್ಚನ ಕೊಲೆಯಾದಾಗಲೇ ಬಂದುಬಿಟ್ಟಿದ್ದ ಸಿಸಿಬಿ ಪೊಲೀಸರಿಗೆ ಇದ್ಯಾದ ನಂತರವೂ ಕೈಕಟ್ಟಿ ಕೂರುವುದು ತರವಲ್ಲ ಎನ್ನಿಸಿಬಿಟ್ಟಿದೆ. ಹಿಟ್‌ಲಿಸ್ಟ್ ರೆಡಿಯಾಗಿದೆ. ಅದರಲ್ಲಿದ್ದ ಮೊದಲ ಹೆಸರೇ ಹೆಬ್ಬೆಟ್ಟು ಮಂಜ!

ಆದರೆ ಹೆಬ್ಬೆಟ್ಟು ಮಂಜ ಹಿರಿಯೂರು ಪೊಲೀಸರನ್ನೇ ಬುಟ್ಟಿಗೆ ಹಾಕಿಕೊಂಡುಬಿಟ್ಟಿದ್ದ. ಒಂದು ಮೂಲದ ಪ್ರಕಾರ ಸರಿಸುಮಾರು ಐದು ಲಕ್ಷ ರೂಪಾಯಿ ಅಲ್ಲಿನ ಪೊಲೀಸರ ಜೇಬಿಗೆ ತುರುಕಿದ್ದೇ ತನ್ನೊಂದಿಗೆ ಒಂದಿಷ್ಟು ಮಂದಿ ಹುಡುಗರನ್ನು ಹಾಕಿಕೊಂಡವನು ನೇರವಾಗಿ ಹಿರಿಯೂರು ಇನ್ಸ್‌ಪೆಕ್ಟರ್ ಮುಂದೆ ಶರಣಾಗಿ ಸೇಫಾಗಿ ಜೈಲು ಹೊಕ್ಕಿ ಬಚಾವಾಗಿಬಿಟ್ಟ. ಹಿಟ್‌ಲಿಸ್ಟಿನಲ್ಲಿದ್ದ ಎರಡನೇ ಹೆಸರೇ ಶಿವಮೊಗ್ಗ ನಾಗ!

ಜವಗೊಂಡನಹಳ್ಳಿ ಡಾಬಾ ಮೇಲಿನ ದಾಳಿಯಲ್ಲಿ ಶಿವಮೊಗ್ಗ ನಾಗ ನೇರವಾಗಿ ಭಾಗವಹಿಸಿರಲಿಲ್ಲ ನಿಜ. ಆದರೆ ಅಂಥಾದ್ದೊಂದು ಭೀಕರ ದಾಳಿಗೆ ಮುಲಾಮನ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದೇ ನಾಗ ಎಂಬ ಬಗ್ಗೆ ಪೊಲೀಸರಿಗೆ ಯಾವುದೇ ಗುಮಾನಿಯಿರಲಿಲ್ಲ. ಹಾಗಂತ ನಾಗ ಸುಮ್ಮನಿರಲಿಲ್ಲ. ಅದರಲ್ಲಿ ತನ್ನದೇನೂ ಕೈವಾಡವಿಲ್ಲ ತನಗೂ ಅದಕ್ಕೂ ಸಂಬಂಧವಿಲ್ಲ ಎಂದೇ ಪೊಲೀಸರನ್ನು ನಂಬಿಸಿದ್ದ. ಸಿಸಿಬಿಯ ಪೊಲೀಸರಿಗೆ ಪದೇಪದೇ ಫೋನ್ ಮಾಡಿ 'ನನ್ನದೇನಿಲ್ಲ ಎಲ್ಲಾ ಮುಲಾಮುಂದೇ ಕೆಲಸ' ಎಂದು ಆಣೆ ಪ್ರಮಾಣ ಮಾಡಿದ್ದ. ಹೆಬ್ಬೆಟ್ಟು ಮಂಜ ಕೂಡ ಸೂರಿಯ ಋಣಕ್ಕೆ ಬಿದ್ದು ತಾನೇ ಕೊರಂಗು ಮೇಲೆ ದಾಳಿ ನಡೆಸಿದೆನೆಂದು ಪೊಲೀಸರಿಗೆ ಹೇಳಿಕೆ ಕೊಟ್ಟು ನಾಗನನ್ನು ಬಚಾವು ಮಾಡಲು ಯತ್ನಿಸಿದ್ದ.

ಬಹುಶಃ ನಾಗನಿಗಾಗಲಿ ಮಂಜನಿಗಾಗಲಿ ಗೊತ್ತಿರದ ಒಂದು ಸಂಗತಿಯೆಂದರೆ, ಕೊರಂಗು ಮೇಲಿನ ದಾಳಿಯಾಗಿ ವಾರಕ್ಕೇ ಹೆಬ್ಬೆಟ್ಟು ಮಂಜ ಮತ್ತು ನಾಗ ಇಬ್ಬರೂ ಪರಸ್ಪರ ಧರ್ಮಸ್ಥಳದಲ್ಲಿ ಭೇಟಿ ಮಾಡಿದ್ದನ್ನು ಹೇಗೋ ಸಿಸಿಬಿ ಎಸಿಪಿ ಬಿ.ಕೆ. ಶಿವರಾಮ್ ತಿಳಿದುಕೊಂಡಾಗಿತ್ತು.

ಶಿವಮೊಗ್ಗ ನಾಗನ ಸ್ವಭಾವವೇ ವಿಚಿತ್ರ. ಮೂಲತಃ ಶಿವಮೊಗ್ಗ ಜಿಲ್ಲೆಯ ಸೊರಬದ ಮುಟಗುಪ್ಪೆ ಗ್ರಾಮದ ಬಂಗಾರಪ್ಪನ ಮಗನಾದ ಈ ನಾಗರಾಜ್ ಹುಟ್ಟಿದ್ದು 1972 ರ ಜೂನ್ ಹತ್ತರಂದು. ಜಾತಿಯಲ್ಲಿ ಈಡಿಗ. ತನ್ನ ಇಪ್ಪತ್ತನೇ ವಯಸ್ಸಿಗೇ ಊರು ಬಿಟ್ಟವನು ನೆಲಮಂಗಲದ ಬಳಿಯ ಡಾಬಾ ಒಂದರಲ್ಲಿ ಸಪ್ಲೈಯರ್ ಕೆಲಸ ಮಾಡಿಕೊಂಡಿದ್ದ. ಅಲ್ಲಿಗೆ ಪದೇಪದೇ ಊಟಕ್ಕೆಂದು ಬರುತ್ತಿದ್ದ ಹೊಟ್ಟೆನಾಗನೇ ಈತನ ಮೊದಲ ಗುರು. ಅದು ಆತನನ್ನು ಯಶವಂತಪುರದ ನಟೋರಿಯಸ್ ಹಂತಕರಾದ ರಾಬರಿಗಿರಿ, ವೆಂಕಿ ಮುಂತಾದವರ ಸಹವಾಸಕ್ಕೆ ಬೀಳಿಸಿತ್ತು. 1995 ರಲ್ಲಿ ರಾಬರಿ ಕೇಸೊಂದರಲ್ಲಿ ಪೀಣ್ಯ ಪೊಲೀಸರಿಗೆ ಸಿಕ್ಕಿಬಿದ್ದ ನಾಗನನ್ನು ವೆಂಕಿಯೇ ಜಾಮೀನು ಹೊಂದಿಸಿ ಬಿಡಿಸಿ ತಂದಿದ್ದ.



ರವಿಕಾಂತೇಗೌಡ

ಜೈಲಿಂದ ಬಂದವನು ಕೆಲಕಾಲ ಹೆಬ್ಬಾಳ ಕೆಂಪಾಪುರದ ತನ್ನ ಸಂಬಂಧಿಯೊಬ್ಬರ ಮನೆಯಲ್ಲಿದ್ದ. ಆ ಹೊತ್ತಿಗಾಗಲೇ ಜೇಕೆ ತಂಡದ ಸಕ್ರಿಯ ಸದಸ್ಯನಾಗಿಬಿಟ್ಟಿದ್ದ ನಾಗ ಕ್ರಮೇಣ ಯಶವಂತಪುರ ಮತ್ತು ಪೀಣ್ಯ ಏರಿಯಾಗಳಲ್ಲಿ ಇನ್ನಷ್ಟು ರಾಬರಿಗಳನ್ನು ಮಾಡಿದ. ಈತನ ವಿರುದ್ಧ ಹೆಬ್ಬಾಳ ಪೊಲೀಸರು ಮೊದಲ ಬಾರಿ ರೌಡಿಶೀಟ್ ತೆರೆದದ್ದೇ 1996 ರ ಸೆಪ್ಟೆಂಬರ್ 15 ರಂದು. ತನ್ನ ವಾಸದ ಅಡ್ರೆಸ್ಸನ್ನು ಹೆಬ್ಬಾಳದ ಸಂಬಂಧಿಕರ ಮನೆ ಎಂದು ಹೇಳುತ್ತಿದ್ದ. ಆದರೆ ಪಾತಕಗಳನ್ನೆಲ್ಲ ದೂರದ ಪೀಣ್ಯ, ನೆಲಮಂಗಲ ರಸ್ತೆಗುಂಟ ನಡೆಸುತ್ತಿದ್ದ. ಬೇರೆ ರೌಡಿಗಳಂತೆ ಯಾವತ್ತೂ ಆತ ತನ್ನ ಜೊತೆ ಹತ್ತಾರು ಹುಡುಗರನ್ನಿಟ್ಟುಕೊಂಡವನಲ್ಲ. ತನ್ನದೇ ಶಿಷ್ಯರ ಸಮೂಹ ಕೂಡ ಆತನಿಗಿರಲಿಲ್ಲ. ಯಶವಂತಪುರದ ಮೋರಿನಾಗನ ಕೊಲೆಯಾಗುವ ತನಕ ಆತನ ಹೆಸರು ಬೆಂಗಳೂರು ಅಂಡರ್ ವರ್ಲ್ಡ್‌ನ ಬಹುತೇಕರಿಗೆ ಗೊತ್ತೇ ಇರಲಿಲ್ಲ.

ಹಾಗೇ ಮೋರಿನಾಗನ ಕೊಲೆ ಕೇಸಿನಲ್ಲಿ ಜೈಲುಪಾಲಾದ ನಾಗನಿಗೆ ಜೈಲಲ್ಲಿ ಬನಾಯ್ಸ್ ರಾಜೇಂದ್ರನ ಪರಿಚಯವಾಗಿತ್ತು. ಸರಿಸುಮಾರು ಒಂದು ವರ್ಷದ ಕಾಲ ಪ್ರತಿನಿತ್ಯ ಜೈಲಿಗೆ ಬಿರಿಯಾನಿ ಕಳಿಸಿ, ಜಾಮೀನು ಕೊಡಿಸಿ ಆತನ ಬದುಕಿಗೂ ವ್ಯವಸ್ಥೆ ಮಾಡಿ ಹೊರಬಂದ ತಕ್ಷಣ ಖರ್ಚಿಗೂ ಏರ್ಪಾಟು ಮಾಡಿದವನು ಬನಾಯ್ಸ್ ರಾಜೇಂದ್ರ. ಆತನ ಋಣವೇ ದೊಡ್ಡದಿತ್ತು. ಯಾವತ್ತು ಕೊರಂಗು ಮತ್ತೆ ಬೆಂಗಳೂರಿಗೆ ಬಂದು ಕೋದಂಡರಾಂಪುರದಲ್ಲಿ ಬೆಳ್ಬೆಳಿಗ್ಗೆ ಪೇಪರ್ ಓದುತ್ತಾ ಕೂತಿದ್ದ ಬನಾಯ್ಸ್ ರಾಜೇಂದ್ರನನ್ನು ಕತ್ತರಿಸಿ ಹೇಗೆ ಜೀವನ ಪರ್ಯಂತ ಆತ ಕೋಮಾದಲ್ಲೇ ಹಾಸಿಗೆ ಹಿಡಿಯುವಂತೆ ಮಾಡಿಬಿಟ್ಟನೋ ಆವತ್ತೇ ಶಿವಮೊಗ್ಗ ನಾಗ ಪ್ರತಿಜ್ಞೆ ಮಾಡಿಬಿಟ್ಟಿದ್ದ. ಕೊರಂಗು ತಲೆ ತೆಗೆದೇ ತೀರ್ತೀನಿ ಎಂದೇ ಶಿಕಾರಿಗೆ ನಿಂತುಬಿಟ್ಟ.

ಕೊರಂಗು ಲೈವ್‌ಬ್ಯಾಂಡ್ ಹುಡುಗಿಯರನ್ನು ಹೊತ್ತೊಯ್ದು ಬಾಣಸವಾಡಿ ಬಳಿಯ ಮರಿಯಪ್ಪನ ಪಾಳ್ಯದಲ್ಲಿ ಇಟ್ಟಿದ್ದಾನೆಂಬ ಸುದ್ದಿ ಸಿಕ್ಕಿದ್ದೇ ಹೆಬ್ಬೆಟ್ಟು ಮಂಜನ ಕಡೆಯ ಇಪ್ಪತ್ತು ಮಂದಿ ಹಾಕಿಕೊಂಡು ಬಾಣಸವಾಡಿಗೆ ದಂಡೆತ್ತಿ ಹೋದ. ಆದರೆ ನಾಗನ ಗ್ಯಾಂಗ್ ಇದ್ದ ಟಾಟಾ ಸುಮೋ ಕೊರಂಗು ಅಡ್ಡೆಗೆ ಆನತಿದೂರದಲ್ಲೇ ಕೆಸರಲ್ಲಿ



ಹತನಾದ ಶಿವಮೊಗ್ಗ ನಾಗ

ಸಿಕ್ಕಹಾಕಿಕೊಂಡಿದೆ. ಮತ್ತು ಅದನ್ನು ಕೊರಂಗು ಬಲಗೈ ಬಂಟ ಕತ್ತಿಗುಪ್ಪೆ ಲಿಂಗ ನೋಡಿಬಿಟ್ಟ. ಆವತ್ತು ಲಿಂಗ ಇನ್ನೆಲ್ಲಿ ದಂಡಿನ ಸಮೇತ ಬಂದು ದಾಳಿ ಮಾಡುತ್ತಾನೋ ಎಂದು ಹೆದರಿದ ನಾಗ ಮತ್ತು ಹೆಬ್ಬೆಟ್ಟು ಮಂಜ ಟಾಟಾ ಸುಮೋ ಅನ್ನು ಕೆಸರಲ್ಲೇ ಬಿಟ್ಟು ಪರಾರಿಯಾಗಿದ್ದರು. ತಮಾಷೆಯೆಂದರೆ ಹಾಗೇ ನಾಗನ ಗ್ಯಾಂಗ್ ಬಿಟ್ಟುಹೋದ ಟಾಟಾ ಸುಮೋ ಅನ್ನು ಲಿಂಗನ ಗ್ಯಾಂಗ್ ಮೂರು ತಿಂಗಳು ಕಾಲ ಬಳಸಿತ್ತು!

ಅಲ್ಲಿಗೆ ಕೊರಂಗು ಕೂಡ ಪೊಲೀಸರ ಕೈಗೆ ಸಿಕ್ಕು ಜೈಲುಪಾಲಾಗಿದ್ದ. ತನ್ನ ಶಿಕಾರಿಯನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದ ಶಿವಮೊಗ್ಗ ನಾಗ ಕ್ರಮೇಣ ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ ಲ್ಯಾಂಡ್ ಡೀಲಿಗೆ ನಿಂತ. ರಿಯಲ್ ಎಸ್ಟೇಟ್ ಆಸಾಮಿಯೊಬ್ಬನನ್ನು ಹೊತ್ತೊಯ್ದು ಹತ್ತು ಲಕ್ಷ ಕಿತ್ತ. ಅದು ಗೊತ್ತಾಗಿಯೇ ನಾಗನ ಬೆನ್ನಿಗೆ ಬಿದ್ದ ಸಿಸಿಬಿ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ 2005 ರ ಜುಲೈ 25 ರಂದು ನಾಗನನ್ನು ಹಿಡಿದು ಜೈಲಿಗೆ ರವಾನಿಸಿದ್ದಾರೆ. ಜೈಲಲ್ಲಿ ನಾಗನಿಗೆ ಜೊತೆಯಾದವನೇ ತಿಮ್ಮೇನಹಳ್ಳಿ ಸೂರಿ!

ಇಬ್ಬರೂ ಸೇರಿಕೊಂಡೇ ಮಚ್ಚನ ಕೊಲೆಗೆ ಸ್ಕೆಚ್ ಹಾಕಿದ್ದರು. ಇವರಿಬ್ಬರೂ ಜೈಲಲ್ಲಿ ಕೂತು ರೂಪಿಸಿದ ಷಡ್ಯಂತ್ರವನ್ನು ಕರಾರುವಾಕ್ಕಾಗಿ ಕಾರ್ಯಗತಗೊಳಿಸಿದವನು ಮುಲಾಮ. ಪರಿಣಾಮವೇ ಮಚ್ಚನ ಹತ್ಯೆ!

ಮಚ್ಚ ಮುಗಿದದ್ದೇ ಜೈಲಿಂದ ಹೊರಬಿದ್ದ ಸೂರಿಯನ್ನು ಪೆದ್ದ ಗುಂಡನ ಗ್ಯಾಂಗ್ ಮುಗಿಸಿ ಹಾಕಿತ್ತು. ಒಂದೆಡೆ ಸೂರಿ ಹತ್ಯೆಯ ರಿವೇಂಜ್ ಮತ್ತೊಂದೆಡೆ ಗುರು ಬನಾಯ್ಸ್ ರಾಜೇಂದ್ರನ ಮೇಲಾದ ದಾಳಿಗೆ ಕೊರಂಗು ತಲೆ ತೆಗೆಯುವ ಪ್ರತಿಜ್ಞೆ, ಜೊತೆಗೆ ಹೆಬ್ಬೆಟ್ಟು ಮಂಜನ ಬೆಂಗಾವಲು ಮತ್ತು ಮುಲಾಮನ ದುಡ್ಡು. ತಾನು ನಿರೀಕ್ಷಿಸಿದಂತೆಯೇ ಎಲ್ಲವೂ ನಡೆದುಬಿಟ್ಟರೆ ಮುಂದೊಮ್ಮೆ ತಾನೇ ಬೆಂಗಳೂರಿಗೆ ಡಾನ್ ಎಂದೇ ನಾಗ ಕನಸುಕಂಡಿದ್ದ. ಕೊರಂಗು ಕೈ ಲ್ಯಾಪ್ಸ್ ಆಗಿ ಆತ ಬದುಕುಳಿದು ಬಿಟ್ಟ ಎಂಬ ಸುದ್ದಿ ಕೇಳಿದ್ದೇ ನಾಗ ತಲ್ಲಣಿಸಿಬಿಟ್ಟ.



ದಾಳಿಯನ್ನೇನೋ ಹೆಬ್ಬೆಟ್ಟು ಮಂಜ ಲೆಕ್ಕಾಚಾರದಂತೆಯೇ ಮಾಡಿ ಮುಗಿಸಿದ್ದ. ಆದರೆ ಕೊರಂಗು ಬದಲಾಗಿ ಆತನ ಬಲಗೈ ಬಂಟ ದೀಪು ಗುಂಡಿಗೆ ಬಲಿಯಾಗಿದ್ದ!

ಮತ್ತೆ ಇಂಥ ಅವಕಾಶ ಸಿಗುವುದು ಯಾವ ಕಾಲಕ್ಕೋ. ಅಲ್ಲಿಯತನಕ ಭೂಗತನಾಗೇ ಇದ್ದು ಬಿಡುವುದು ಮತ್ತೆ ಹೆಬ್ಬೆಟ್ಟು ಮಂಜ ಈಗಾಗಲೇ ಜೈಲು ಸೇರಿ ಸೇಫಾಗಿದ್ದಾನಾದ್ದರಿಂದ ತನ್ನ ತನಕ ಪೊಲೀಸರು ಬರಲಾರರು ಎಂದೇ ನಾಗ ಲೆಕ್ಕ ಹಾಕಿದ್ದ. ಅದೇ ಹೊತ್ತಿಗೆ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಬೇರೆ ಇತ್ತಲ್ಲ; ಅದು ಮುಗಿಯುವ ತನಕ ಪೊಲೀಸರು ತನ್ನನ್ನು ಮುಟ್ಟಲಾರರು ಎಂದೇ ಆತ ಭಾವಿಸಿದ್ದ. ಹೇಗೆ ತನ್ನದೇ ಆದ ಬಂಟರ ಪಡೆ ಆತನ ಬೆನ್ನಿಗಿರಲಿಲ್ಲವೋ ಹಾಗೇ ಆತನಿಗೆ ತನ್ನದೇ ಆದ ನೆಟ್‌ವರ್ಕ್ ಕೂಡ ಇರಲಿಲ್ಲ. ಏಕಾಂಗಿಯಾಗಿ ಸುತ್ತುವುದು, ಬೇಟೆಯನ್ನು ಸಾವಧಾನವಾಗಿ ಹೊಂಚು ಹಾಕುವುದು ಮತ್ತು ದಾಳಿಯನ್ನು ನಿಗದಿ ಮಾಡುವ ಹೊತ್ತಿಗೆ ಆ ಕ್ಷಣಕ್ಕೆ ಇನ್ನಾರದೋ ಗ್ಯಾಂಗಿನ ನೆರವು ಪಡೆದು ಕೆಲಸ ಮುಗಿಸುವುದು ಆತನ ಹುಟ್ಟು ಪ್ರವೃತ್ತಿ.

ಕೆಲಸ ಮುಗಿದದ್ದೇ ಮತ್ತೆ ಏಕಾಂಗಿ ಭೂಗತನಾಗಿ ಬಿಡುವುದು ನಾಗನ ಹಳೇ ಚಾಳಿ!

ವಿಚಿತ್ರವೆಂದರೆ ಆತನ ಇಂಥ ವಿಲಕ್ಷಣ ಚರ್ಯೆಯೇ ಆತನ ಪ್ರಾಣಕ್ಕೆ ಕುತ್ತಾಗಿತ್ತು. ಅದಕ್ಕೆ ಮತ್ತೂ ಒಂದು ಕಾರಣವಿತ್ತು. ಅದು ಆತನ ಪ್ರೇಯಸಿ!

ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿಯ ಸಮೀಪ ಮನೆ ಮಾಡಿಕೊಂಡಿದ್ದ ನಾಗನಿಗೆ ಉಷಾ ಎಂಬ ಕೂರ್ಗಿ ಹುಡುಗಿಯೊಬ್ಬಳ ಸಂಗವಿತ್ತು. ನಾಗನ ಮೊಬೈಲಿಗೆ ಆಕೆಯಿಂದ ಪ್ರತಿನಿತ್ಯ ಬರುತ್ತಿದ್ದ ಎಸ್ಸೆಮ್ಮೆಸ್‌ಗಳನ್ನೆಲ್ಲ ಹೇಗೋ ಪೊಲೀಸರು ಕಲೆಹಾಕಿಬಿಟ್ಟಿದ್ದರು. ನಾಗ ದಿನಕ್ಕೊಂದು ಮೊಬೈಲ್ ಬದಲಾಯಿಸಿದರೂ ಖಂಡಿತ ಆಕೆಗೊಂದು ಫೋನ್ ಮಾಡಿಯೇ ತೀರುತ್ತಾನೆಂಬ ಪೊಲೀಸರ ನಿರೀಕ್ಷೆ ಸುಳ್ಳಾಗಲೇ ಇಲ್ಲ ಮತ್ತು ಹೆಬ್ಬೆಟ್ಟು ಮಂಜನ ಬದಲಿಗೆ ತನ್ನ ಬಲಿ ಹಾಕಲು ಸಿಸಿಬಿ ಪೊಲೀಸರು ನಿರ್ಧರಿಸಿದ್ದಾರೆಂಬುದು ಕೂಡ ನಾಗನಿಗೆ ಗೊತ್ತಾಗಲಿಲ್ಲ. ತನ್ನನ್ನು ಮತ್ತು ಪ್ರೇಯಸಿಯ ನಡುವಿನ ಪ್ರತಿನಿತ್ಯದ ಸಂಭಾಷಣೆಯನ್ನು ಪೊಲೀಸರು ಕದ್ದು ಕೇಳುತ್ತಿದ್ದಾರೆಂಬುದಾಗಲಿ, ಆಕೆಯ ಮನೆಯನ್ನು ಪೊಲೀಸರಾಗಲೇ ಪತ್ತೆ ಹಚ್ಚಿದ್ದಾರೆಂದಾಗಲಿ, ಇಷ್ಟರಲ್ಲೇ ತನ್ನ ಎನ್‌ಕೌಂಟರ್ ನಡೆದು ಹೋಗುತ್ತದೆ ಎಂಬುದಾಗಲೀ ನಾಗನಿಗೆಲ್ಲಿ ಗೊತ್ತಾದೀತು?

2006 ರ ಅಕ್ಟೋಬರ್ 16 ರಾತ್ರಿ ಜವಗೊಂಡನಹಳ್ಳಿ ಡಾಬಾ ಮೇಲಾದ ದಾಳಿಯ ನಂತರ ಬಹುಶಃ ತನ್ನ ಪ್ರೇಯಸಿಯನ್ನು ಸಂಧಿಸುವುದಕ್ಕೆಂದೇ ಆತ ಏಕಾಂಗಿಯಾಗಿ ಸುತ್ತುತ್ತಿದ್ದನೆ? ಆಕೆಗೋಸ್ಕರವೇ ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ ಓಡಾಡಿಕೊಂಡಿದ್ದನೆ? ಇಷ್ಟರಲ್ಲೇ ಆಕೆಯನ್ನು ಮದುವೆಯಾಗಿ ಸೆಟಲ್ ಆಗಿಬಿಡುವ ಯೋಚನೆ ಆತನಿಗಿತ್ತೆ?

ಇಂಥ ಲೆಕ್ಕಾಚಾರಗಳ ಮಧ್ಯೆಯೇ 2006 ರ ಡಿಸೆಂಬರ್ 2 ರ ರಾತ್ರಿ ಸಿಸಿಬಿ ಪೊಲೀಸರ ತಂಡ ನಾಗನ ಪ್ರೇಯಸಿಯ ಮನೆ ಸುತ್ತ ಹೊಂಚುಹಾಕಿದೆ. ಸರಿರಾತ್ರಿಯ ಹೊತ್ತಿಗೆ ಆಕೆಯ ಕೋಣೆ ಹೊಕ್ಕಿದ ನಾಗ ಬೆಳಿಗ್ಗೆ ನಾಲ್ಕೂವರೆಗೇ ಎದ್ದಿದ್ದಾನೆ. ತನ್ನ ರಿವಾಲ್ವರ್ ಸಮೇತ ಬಿಳಿ ಬಣ್ಣದ ಮಾರುತಿ ಕಾರಿನಲ್ಲಿ ರಿಂಗ್ ರಸ್ತೆಗೆ ಇಳಿದವನೇ ಹೆಬ್ಬಾಳದತ್ತ ಕಾರ್ ತಿರುಗಿಸಿದ್ದಾನೆ. ಹಿಂದೆಯೇ ಸಿಸಿಬಿಯ ಡಿಸಿಪಿ ರವಿಕಾಂತೇಗೌಡ, ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಮತ್ತು ನಂಜುಂಡೇಗೌಡರ ತಂಡ ನಾಗನನ್ನು ಬೆನ್ನತ್ತಿದೆ. ಇನ್ನೇನು ಹೆಬ್ಬಾಳದ ರೈಲ್ವೇ ಸ್ಟೇಷನ್ನಿನ ಎದುರು ತನ್ನ ಕಾರನ್ನು ನಿಧಾನ ಮಾಡಿ ಬಲಕ್ಕೆ ತಿರುಗಿಸಬೇಕು. ಅಷ್ಟರಲ್ಲೇ ಡಿಸಿಪಿ ರವಿಕಾಂತೇಗೌಡರ ಪಡೆ ಮುತ್ತಿಗೆ ಹಾಕಿದೆ.

ಬೆಳಿಗ್ಗೆ ಹತ್ತರ ಹೊತ್ತಿಗೆಲ್ಲಾ ಇಡೀ ಬೆಂಗಳೂರೇ ಬೆರಗಾಗುವಂತೆ ನಾಗನ ಎನ್‌ಕೌಂಟರ್ ಸುದ್ದಿ ವ್ಯಾಪಿಸಿಬಿಟ್ಟಿದೆ.

ಹೆಬ್ಬಾಳ ರೈಲ್ವೇ ಸ್ಟೇಷನ್ನಿನ ಎದುರು ನಂಬರ್ ಪ್ಲೇಟಿಲ್ಲದ ಮಾರುತಿ ಕಾರಿನಲ್ಲಿ ಕೂತಿದ್ದ ನಾಗ ಹೆಣವಾಗಿದ್ದ. ಗುಂಡು ಕರಾರುವಾಕ್ಕಾಗಿ ಆತನ ಎಡಗಣ್ಣು ಮತ್ತು ಎಡಕಿವಿಯ ನಡುಭಾಗವನ್ನು ಹೊಕ್ಕಿತ್ತು. ಅದು ಮೆದುಳನ್ನು ಅಪ್ಪಚ್ಚಿ ಮಾಡಿ ಬಲಭಾಗದಿಂದ ಹೊರಬಿದ್ದಿತ್ತು. ಮತ್ತೊಂದು ಗುಂಡು ಮೂಗಿನ ಮೇಲಿಂದ ತಲೆಹೊಕ್ಕಿ ಹಿಂಭಾಗದಿಂದ ಹೊರಬಿದ್ದಿತ್ತು. ಮಾತುಕತೆ, ಕೊಸರಾಟ, ತಿಕ್ಕಾಟ ಯಾವುದಕ್ಕೂ ಆಸ್ಪದವೇ ಇಲ್ಲದ ಹಾಗೆ ಶಿವಮೊಗ್ಗ ನಾಗನ ಪ್ರಾಣ ಹಾರಿಹೋಗಿತ್ತು!

ಕ್ರೈಂ ಡಿಸಿಪಿ ರವಿಕಾಂತೇಗೌಡರೇ ಹೇಳುವಂತೆ ನಾಗ ಅಡ್ಡಗಟ್ಟಿದ ಪೊಲೀಸರ ಮೇಲೆಯೇ ಕಾರು ಹತ್ತಿಸಲು ಯತ್ನಿಸಿದ್ದ. ಅದು ಯಶಸ್ವಿಯಾಗದೇ ಹೋದಾಗ ತನ್ನಲ್ಲಿದ್ದ .38 ರಿವಾಲ್ವರ್‌ನಿಂದ ಪೊಲೀಸರತ್ತ ಗುಂಡು ಹಾರಿಸಿದ್ದ. ಆತನ ಗುಂಡು ಪೊಲೀಸರಿಗೆ ತಾಕಲ್ಲವಾದರೂ ಪೊಲೀಸರು ಹಾರಿಸಿದ ಗುಂಡು ಮಾತ್ರ ನಾಗನ ತಲೆ ಹೊಕ್ಕಿದೆ!

ನಾಗನ ಸಾವಿಗೆ ಅಳುವವರಿರಲಿಲ್ಲ. ಏಕೆ ಸತ್ತ? ಹೇಗೆ ಸತ್ತ? ಎಂದು ಯಾರೂ ಕೇಳಲಿಲ್ಲ. ಅಸಲಿಗೆ ಆತನ ಶವಸಂಸ್ಕಾರಕ್ಕೂ ಯಾರೂ ದಿಕ್ಕಿರಲಿಲ್ಲ. ಇವತ್ತಲ್ಲ ನಾಳೆ ಬೆಂಗಳೂರಿಗೆ ಡಾನ್ ಆಗೇ ತೀರುತ್ತಾನೆಂದು ಕೆಲ ಪತ್ರಿಕೆಗಳು ಬರೆದಿದ್ದಕ್ಕೂ ನಾಗನ ಎನ್‌ಕೌಂಟರ್ ನಂತರದ ಪರಿಸ್ಥಿತಿಗೂ ಎಲ್ಲಿಂದೆಲ್ಲಿಯ ಸಂಬಂಧ?

ರಕ್ಷಣಾ ವೇದಿಕೆಯ ಬೀದಿ ರಂಪಾಟ

ಬೆಂಗಳೂರಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ನಾಯಕ ನಾರಾಯಣಗೌಡನ ದರ್ಬಾರ್ ಮಿತಿ ಮೀರುತ್ತಿದೆ. ಈತ ಗೂಂಡಾಗಿರಿಯನ್ನೇ ಹೋರಾಟವೆಂತಲೂ, ದಬ್ಬಾಳಿಕೆಯನ್ನೇ ಚಳವಳಿ ಎಂತಲೂ ಅರ್ಥಮಾಡಿಕೊಂಡಂತಿದೆ. ತನ್ನ ವಿರುದ್ಧ ಎಲ್ಲರೂ ಬಾಯಿ ಮುಚ್ಚಿಕೊಂಡಿರಬೇಕು, ಎಲ್ಲರೂ ತನಗೆ ಅಧೀನರಾಗಿರಬೇಕು ಎಂದು ಬಯಸುವ ಈತ ಕರ್ನಾಟಕ ತನ್ನ ಸಾಮ್ರಾಜ್ಯವೆಂತಲೂ, ಅದಕ್ಕೆ ತಾನೇ ಚಕ್ರವರ್ತಿ ಎಂತಲೂ ಭ್ರಮಿಸಿಕೊಂಡಂತಿದೆ. ತನ್ನ ಸಾಮ್ರಾಜ್ಯದಲ್ಲಿ ತಾನು ಮಾಡಿದ್ದೇ ಕಾನೂನು, ಹೇಳಿದ್ದೇ ತೀರ್ಪು ಎಂದು ಕೋರ್ಟು, ಶಾಸನ ಸಭೆ ಎಲ್ಲವೂ ತಾನೇ ಎಂಬ ಮತ್ತಿನಲ್ಲಿದ್ದಂತೆ ಕಾಣುತ್ತದೆ. ಈ ಭ್ರಮೆ ಮತ್ತು ಅಮಲುಗಳ ಕಾರಣದಿಂದಲೇ ಆತನು ಕಾನೂನನ್ನೇ ಕೈಗೆ ತೆಗೆದುಕೊಂಡು ತನ್ನ ವಿರೋಧಿಗಳ ಮೇಲೆ ಹಲ್ಲೆ ನಡೆಸುತ್ತಿದ್ದಾನೆ.



ನಾರಾಯಣಗೌಡ


ನಿನ್ನೆ ನಡೆದ ಘಟನೆಯನ್ನೇ ನೋಡಿ. ನಿನ್ನೆ ಶನಿವಾರ ಬೆಳಗ್ಗೆ ಸುಮಾರು 3 ಗಂಟೆಯ ಹೊತ್ತಿಗೆ ವಿಜಯನಗರ ಪೊಲೀಸ್ ಠಾಣೆಯ ಎದುರುಗಡೆಯೇ ಹತ್ತು-ಹದಿನೈದು ಪುಡಿ ಗೂಂಡಾಗಳನ್ನು ಕಟ್ಟಿಕೊಂಡು ಮದ್ದಿರೆಡ್ಡಿ ಮತ್ತು ಚಂದ್ರಶೇಖರ್ ಎಂಬ ಇಬ್ಬರು ವಕೀಲರುಗಳ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾನೆ.

ಘಟನೆಯ ಹಿನ್ನೆಲೆ

ಕರ್ನಾಟಕ ರಕ್ಷಣಾ ವೇದಿಕೆಯು ಒಡೆದು ಇಬ್ಭಾಗವಾಗಿ ಒಂದು ಬಣಕ್ಕೆ ನಾರಾಯಣಗೌಡ ಮತ್ತೊಂದು ಬಣಕ್ಕೆ ಪ್ರವೀಣ ಶೆಟ್ಟಿ ನಾಯಕರೆಂದು ಬೋರ್ಡು ತಗಲುಹಾಕಿಕೊಂಡಿದ್ದು ಹಾಗೂ ತಮ್ಮ ತಮ್ಮ ಬಣಗಳ ಪ್ರಾಬಲ್ಯ ಹೆಚ್ಚಿಸಿಕೊಳ್ಳುವುದಕ್ಕಾಗಿ ಪರಸ್ಪರ ಕಿತ್ತಾಟ, ಜಗಳಾಟದಲ್ಲಿ ತೊಡಗಿರುವುದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರವೆ. ಈಗ ಈ ಗುದ್ದಾಟ ಇನ್ನಷ್ಟು ಪ್ರಖರತೆಯನ್ನು ಪಡೆದುಕೊಂಡು ಪಕ್ಕಾ ಬೀದಿ ಜಗಳವಾಗಿ ಪರಿವರ್ತನೆಯಾಗುತ್ತಿದೆ ಅಷ್ಟೆ.

ಮೊನ್ನೆ ಶುಕ್ರವಾರ ನಾರಾಯಣಗೌಡ ಮೂಡಿಗೆರೆಯಲ್ಲಿ 'ಪೂರ್ಣಚಂದ್ರ ತೇಜಸ್ವಿ ನೆನಪಿ'ನ ಒಂದು ಕಾರ್ಯಕ್ರಮವನ್ನು ಮುಗಿಸಿಕೊಂಡು ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ಬರುತ್ತಿದ್ದ ಸಮಯದಲ್ಲಿ ರಾತ್ರಿ 11ಗಂಟೆಯ ಹೊತ್ತಿಗೆ ಪ್ರವೀಣ್ ಶೆಟ್ಟಿ ಬಣದ ಪ್ರಸಾದ್ ಶೆಟ್ಟಿ ಎಂಬುವವನು ನಾರಾಯಣಗೌಡನಿಗೆ ಫೋನ್ ಮಾಡಿದ್ದಾನೆ. ಫೋನಿನಲ್ಲಿ ಅದೇನು ಪರಸ್ಪರ ಕಚ್ಚಾಡಿಕೊಂಡರೋ ಗೊತ್ತಿಲ್ಲ, ಆದರೆ ನಾರಾಯಣಗೌಡ ಮಾತ್ರ, ಪ್ರಸಾದ್ ಶೆಟ್ಟಿ ನನಗೆ ಫೋನ್ ಮಾಡಿ ತನಗೆ ಮುಂಬೈನ ಭೂಗತ ಲೋಕದ ಸಂಪರ್ಕವಿದೆ, ಉಡುಪಿ ನಕ್ಸಲೈಟರ ಬೆಂಬಲವಿದೆ ಎಂದೆಲ್ಲಾ ಹೇಳಿ 'ನೀನು ಪ್ರವೀಣ ಶೆಟ್ಟಿಯನ್ನು ವಾಪಾಸ್ಸು ನಿನ್ನ ಬಣಕ್ಕೆ ಸೇರಿಸಿಕೊಳ್ಳದಿದ್ದರೆ ನಿನ್ನನ್ನು ಕೊಂದು ಹಾಕುತ್ತೇನೆ' ಎಂದು ಬೆದರಿಕೆ ಒಡ್ಡಿದ ಎಂದು ಹೇಳುತ್ತಾನೆ. ಆದರೆ ಪ್ರಸಾದಶೆಟ್ಟಿ ಮಿಸ್ ಆಗಿ ನಾರಾಯಣಗೌಡನಿಗೆ ಫೋನ್ ಕನೆಕ್ಟ್ ಆಯಿತೆಂದು ಹೇಳುತ್ತಾನೆ. ಮಿಸ್ ಆಗಿ ಕನೆಕ್ಟ್ ಆದ ಮೇಲೂ ಇಬ್ಬರೂ ಭಾರಿ ಹೊತ್ತು ಕಚ್ಚಾಡಿಕೊಂಡಿದ್ದಾರೆ!

ಅದೇನೇ ಇರಲಿ, ಒಂದು ವೇಳೆ ನಾರಾಯಣಗೌಡನಿಗೆ ನಿಜಕ್ಕೂ ಪ್ರಾಣ ಬೆದರಿಕೆ ಬಂದಿದ್ದೇ ಆದಲ್ಲಿ ಅದಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಕಂಪ್ಲೇಂಟ್ ಕೊಡಬಹುದಿತ್ತು. ಆದರೆ ಆತ ಹಾಗೆ ಮಾಡಲಿಲ್ಲ, ತನ್ನ ಸಾಮ್ರಾಜ್ಯದಲ್ಲಿ ತನಗೇ ಸವಾಲೊಡ್ಡುವವರಿದ್ದಾರೆಯೇ ಎಂದು ಹೂಂಕರಿಸುತ್ತಾ ತನ್ನ ಹಿಂಬಾಲಕರಿಗೆ ಫೋನ್ ಮಾಡಿ ಒಂದು ಹಿಂಡು ಪುಡಿ ರೌಡಿಗಳನ್ನು ಪ್ರಸಾದ್ ಶೆಟ್ಟಿಯ ಮನೆಯ ಬಳಿ ಕಳಿಸಿಕೊಡಲು ಆದೇಶಿಸಿದ್ದಾನೆ. ಆ ರೌಡಿ ಪಡೆ ಅಂದೇ ರಾತ್ರಿ 1 ಗಂಟೆಯ ಹೊತ್ತಿಗೆ ಪ್ರಸಾದ ಶೆಟ್ಟಿಯ ಮನೆಯ ಹತ್ತಿರ ಬಂದಿದ್ದೇ ತಡ ಹಿಂದುಮುಂದು ನೋಡದೇ ದಾಂಧಲೆ ಶುರುವಿಟ್ಟುಕೊಂಡಿದೆ. ತಕ್ಷಣ ಪ್ರಸಾದ ಶೆಟ್ಟಿ 100 ನಂಬರಿಗೆ ಫೋನ್ ಮಾಡಿದ್ದಾನೆ. ತಕ್ಷಣ ಹೊಯ್ಸಳ ಮತ್ತು ಚೀತಾ ಪೊಲೀಸರು ಸ್ಥಳಕ್ಕಾಗಮಿಸುತ್ತಿದ್ದಂತೆ ದಾಂಧಲೆ ಮಾಡುತ್ತಿದ್ದವರೆಲ್ಲರೂ ಓಡಿಹೋಗಿದ್ದಾರೆ. ಆದರೆ ಪೊಲೀಸರು ಪ್ರಸಾದ ಶೆಟ್ಟಿಯನ್ನು ವಿಜಯನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ.




ಪ್ರವೀಣ್ ಶೆಟ್ಟಿ

ಪ್ರಸಾದ್ ಶೆಟ್ಟಿಯು ಪ್ರವೀಣ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಕಾರ್ಯ ದರ್ಶಿಯಾದ ಪ್ರಕಾಶ್ ಎಂಬ ವಕೀಲರಿಗೆ ಫೋನಾಯಿಸಿದ್ದಾನೆ. ಅವರು ತಮ್ಮಲ್ಲಿ ಕಾರ್ಯನಿರ್ವಹಿಸುವ ಮದ್ದಿ ರೆಡ್ಡಿ ಮತ್ತು ಚಂದ್ರಶೇಖರ್ ಎಂಬ ಇಬ್ಬರು ಕಿರಿಯ ವಕೀಲರನ್ನು ವಿಜಯ ನಗರ ಠಾಣೆಗೆ ಕಳಿಸಿಕೊಟ್ಟಿದ್ದಾರೆ. ಅವರಿಬ್ಬರೂ ಇನ್ನೇನು ಪೊಲೀಸ್ ಠಾಣೆಯನ್ನು ತಲುಪಬೇಕು ಎನ್ನುವಷ್ಟರಲ್ಲಿ ನಾಗೇಂದ್ರಬಾಬು, ನರಸಿಂಹ, ಕೆ.ಕೆ. ಮೋಹನ್, ಕೇಶವ್ ಮುಂತಾದವರನ್ನು ಒಳಗೊಂಡ ನಾರಾಯಣಗೌಡನ ಪಡೆ ಹಠಾತ್ತನೆ ಪ್ರತ್ಯಕ್ಷವಾಗಿ ಮಾರಕಾಸ್ತ್ರಗಳಿಂದ ಇವರ ಮೇಲೆ ಹಲ್ಲೆಗಿಳಿದಿದೆ. ಇದೆಲ್ಲ ನಡೆದದ್ದು ವಿಜಯನಗರ ಠಾಣೆಯ ಕೂಗಳತೆಯ ದೂರದಲ್ಲಿ, ಹೀಗಾಗಿ ಗಲಾಟೆಯನ್ನು ಕೇಳಿ ಪೊಲೀಸರೂ ಸ್ಥಳಕ್ಕಾಗಮಿಸುತ್ತಿದ್ದಂತೆ ಹಲ್ಲೆ ನಡೆಸುತ್ತಿದ್ದವರೆಲ್ಲಾ ಓಡಿ ಹೋಗಿದ್ದಾರೆ. ತಕ್ಷಣವೇ ಬೆನ್ನು ಹತ್ತಿದ ಹೊಯ್ಸಳ ಮತ್ತು ಚೀತ ಪೊಲೀಸರು ಅವರನ್ನು ಹಿಡಿದುಕೊಂಡು ಠಾಣೆಗೆ ಕರೆತಂದಿದ್ದಾರೆ.

ನಂತರ ಗಾಯಗೊಂಡ ಮದ್ದಿರೆಡ್ಡಿ ಮತ್ತು ಚಂದ್ರಶೇಖರ್ ರವರನ್ನು ಪೊಲೀಸರು ಪ್ರಥಮ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆದರೆ ಅವರು ಮರಳಿ ಬರುವಷ್ಟರಲ್ಲಿ ಠಾಣೆಯಲ್ಲಿ ಆ ಗೂಂಡಾ ಪಡೆಯೇ ಇರಲಿಲ್ಲ! ಅಲ್ಲದೇ ಹಲ್ಲೆಗೊಳಗಾದವರು ಕಂಪ್ಲೇಂಟ್ ಕೊಟ್ಟರೆ ಅದನ್ನು ಪಡೆಯಲೂ ಇಲ್ಲ, ಮತ್ತೆ ಇವರು ತಮ್ಮನ್ನು ಕಳಿಸಿದ ವಕೀಲ ಪ್ರಕಾಶ್‌ಗೆ ಫೋನಾಯಿಸಿದಾಗ ಖುದ್ದು ಪ್ರಕಾಶ್ ಕೂಡ ಠಾಣೆಗೆ ಬಂದು ಎಸಿಪಿ ಪ್ರಭುಸ್ವಾಮಿಯವರೊಂದಿಗೆ ಮಾತನಾಡಿದ್ದಾರೆ. ನಂತರ ಎಸಿಪಿ ಪ್ರಭುಸ್ವಾಮಿ ಮತ್ತು ಇನ್ಸ್‌ಪೆಕ್ಟರ್ ವೇಣುಗೋಪಾಲ್ ಕೂಡ ಬೆಳಗಿನ ಜಾವ 3.30ರ ಹೊತ್ತಿಗೆ ಠಾಣೆಗೆ ಬಂದ ನಂತರವಷ್ಟೇ ವಿಜಯನಗರ ಪೊಲೀಸರು ಕಂಪ್ಲೇಂಟ್ ತೆಗೆದುಕೊಂಡು ನಾರಾಯಣಗೌಡನನ್ನೂ ಒಳಗೊಂಡು ಇಡೀ ಗುಂಪಿನ ಮೇಲೆ ಎಫ್‌ಐಆರ್ ಸಿದ್ಧಪಡಿಸಿದ್ದಾರೆ. (ಹಾಕಿದ ಸೆಕ್ಷನ್‌ಗಳು 341, 323, 427, 392, 394, read with 149 of IPC).

ಇದರಿಂದ ಎಚ್ಚರಗೊಂಡ ನಾರಾಯಣಗೌಡ ತಕ್ಷಣ ಕಾರ್ಯಪ್ರವೃತ್ತನಾಗಿ ಅಡಿಷನಲ್ ಪೊಲೀಸ್ ಕಮೀಷನರ್ ಬಿಪಿನ್ ಗೋಪಾಲಕೃಷ್ಣರವರಿಗೆ ಒಂದು ಮನವಿ ಪತ್ರ ಕೊಟ್ಟು "ನನ್ನ ಮೇಲೆ ಸುಳ್ಳು ಕಂಪ್ಲೇಂಟ್ ಕೊಟ್ಟು ಸುಳ್ಳು ಕೇಸು ದಾಖಲಿಸಲಾಗಿದೆ, ಅದನ್ನು ವಜಾಮಾಡಬೇಕು" ಎಂದು ಕೇಳಿಕೊಂಡಿದ್ದಾನೆ. ನಂತರ ವಕೀಲರ ಸಂಘದಿಂದ ಖಜಾಂಚಿ ಉದಯ್ ಕುಮಾರ್ ನೇತೃತ್ವದಲ್ಲಿ ಒಂದು ನಿಯೋಗವು ಬಿಪಿನ್ ಗೋಪಾಲಕೃಷ್ಣರವರನ್ನು ಭೇಟಿಮಾಡಿ ತಮ್ಮ ಸಂಘದ ಕಿರಿಯ ವಕೀಲರುಗಳ ಮೇಲೆ ನಡೆದ ಹಲ್ಲೆಯನ್ನು ವಿವರಿಸಿದ್ದಾರೆ. ತಕ್ಷಣ ಬಿಪಿನ್ ಗೋಪಾಲ್‌ಕೃಷ್ಣರವರು ಸಂಬಂಧಪಟ್ಟ ಡಿಸಿಪಿಗೆ ಅಧಿಕೃತ ಪತ್ರ ಬರೆದು ನಾರಾಯಣಗೌಡನ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.



ಚಂದ್ರಶೇಖರ್



ಮದ್ದಿರೆಡ್ಡಿ

ಆದರೆ ನಾರಾಯಣಗೌಡ ಈಗ ತಲೆಮರೆಸಿಕೊಂಡಿದ್ದಾನೆ. ವಿಜಯನಗರ ಪೊಲೀಸರು ಅವರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ●


ಅವ್ಯವಹಾರ ಬಯಲಿಗೆಳೆದ ನಮ್ಮ ಪತ್ರಕರ್ತನ ಮೇಲೆ ಮುಗಿಬಿದ್ದ ಪೊಲೀಸರು

ಬಾಗಲಕೋಟೆ

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಸರ್ಕಾರಿ ಆಸ್ಪತ್ರೆಯ ವೈದ್ಯ ಡಾ. ಬಸವರಾಜ್ ಬಂಟನೂರ್‌ರವರ ಕಾನೂನುಬಾಹಿರ ಅವ್ಯವಹಾರಗಳನ್ನು ಪತ್ರಿಕೆ ಮತ್ತು ದೂರದರ್ಶನ ಮಾಧ್ಯಮಗಳ ಮೂಲಕ ಬಯಲಿಗೆಳೆದ ಕಾರಣ ನಮ್ಮ ವರದಿಗಾರ ಮೇಘರಾಜ್‌ರವರ ಮೇಲೆಯೇ ಗುಳೇದಗುಡ್ಡ ಪೊಲೀಸರು ಮುಗಿಬಿದ್ದಿದ್ದಾರೆ. ಮೊನ್ನೆ ಮೇ 21ರಂದು ಮೇಘರಾಜ್‌ರವರು ತಮ್ಮ ಮನೆಯಿಂದ ಬಾದಾಮಿಗೆ ಹೊರಡುವ ತಯಾರಿಯಲ್ಲಿದ್ದಾಗ ಹಠಾತ್ತನೆ ಪ್ರತ್ಯಕ್ಷರಾದ ಪೊಲೀಸರು ಅವರನ್ನು ಬಲವಂತವಾಗಿ ಠಾಣೆಗೆ ಕರೆದೊಯ್ದು, ಅವಾಚ್ಯ ಶಬ್ದಗಳಿಂದ ಬಯ್ದು ಒಬ್ಬ ಕ್ರಿಮಿನಲ್ ಜೊತೆ ವರ್ತಿಸುವ ರೀತಿಯಲ್ಲಿ ವರ್ತಿಸಿ ತಮ್ಮ ನೈಜ ಪೊಲೀಸ್ ಬುದ್ಧಿಯನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಠಾಣೆಯ ಎಸ್ಸೈ ಧೋಳಖೇಡ ಎಂಬುವವನು "ನೀನು ಡಾ. ಬಂಟನೂರ್‌ಗೆ ಫೋನ್ ಮಾಡಿ ಬೆದರಿಸಿದ್ದಿಯಾ ಎಂದು ಅವರು ನಿನ್ನ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದಾರೆ. ಪತ್ರಕರ್ತ ಎಂಬ ಪೋಜು ಹಾಕಿಕೊಂಡು ತಿರುಗುವ ನಿನ್ನನ್ನು ರೌಡಿಶೀಟ್ ಹಾಕಿ ಶಾಶ್ವತವಾಗಿ ಕಂಬಿಗಳ ಹಿಂದೆ ಕಳಿಸುವೆ" ಎಂದು ಆರ್ಭಟಿಸುತ್ತಾ ಬಾಯಿಗೆ ಬಂದಂತೆ ಇಲ್ಲಿ ಬರೆಯಲಾಗದಷ್ಟು ಕೆಟ್ಟದಾಗಿ ಬೈದಿದ್ದಾನೆ. ಈ ಘಟನೆಯನ್ನು ನೋಡಿದರೆ ಗುಳೇದಗುಡ್ಡದಲ್ಲಿ ಕಾನೂನಿನ ಜಾಗದಲ್ಲಿ ಖಾಕಿಯೇ ರಾಜ್ಯಭಾರ ನಡೆಸುತ್ತಿದೆ ಎಂದೆನಿಸದೇ ಇರದು.

ಈ ಡಾ. ಬಸವರಾಜ್ ಬಂಟನೂರ್ ಎಂಬ ವೈದ್ಯ ಈಗ್ಗೆ ಎರಡು ವರ್ಷಗಳ ಹಿಂದೆ ಗುಳೇದಗುಡ್ಡಕ್ಕೆ ಬಂದಾಗ ಬಹಳ ಒಳ್ಳೆಯ ಡಾಕ್ಟರ್ ಎಂದೇ ಜನ ನಂಬಿದ್ದರು. ಆದರೆ ಬರಬರುತ್ತಾ ಜನರಿಗೆ ಇವರ ಅಸಲಿ ಚಹರೆಯ ದರ್ಶನವಾಗತೊಡಗಿತು. ಇವರು ಗುತ್ತಿಗೆ ಆಧಾರದಲ್ಲಿ ಸೇರಿಕೊಂಡಿರುವ ವೈದ್ಯ, ಇವರಿಗೆ ಸಣ್ಣಪುಟ್ಟವುಗಳನ್ನು ಹೊರತುಪಡಿಸಿ ಯಾವುದೇ ಪ್ರಮುಖ ಶಸ್ತ್ರಚಿಕಿತ್ಸೆ ಮಾಡುವ ಅಧಿಕಾರ ಇಲ್ಲ, ಇವರು ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಮನೆಯಲ್ಲಿ ಕಾನೂನುಬಾಹಿರವಾಗಿ ಖಾಸಗಿ ಆಸ್ಪತ್ರೆಯನ್ನೂ ತೆರೆದುಕೊಂಡಿದ್ದಾರೆ. ಇದಕ್ಕಾಗಿಯೇ ಮನೆಯಲ್ಲಿ ಒಂದು ಸ್ಕ್ಯಾನ್ ಮೆಷಿನ್ ಕೂಡ ಇಟ್ಟುಕೊಂಡಿದ್ದಾರೆ. ಇದನ್ನು ಅವರು ಗರ್ಭಿಣಿಯರ ಗರ್ಭಪಾತಕ್ಕಾಗಿಯೇ ಬಳಸುತ್ತಿದ್ದಾರೆಂದು ಕೆಲವರು ಇವರ ವಿರುದ್ಧ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ (ಡಿಎಚ್‌ಓ)ಗೆ ದೂರು ನೀಡಿದ್ದರು. ತಮ್ಮ ಉಪಕರಣಕ್ಕೆ ಸರ್ಕಾರಿ ಪರವಾನಗಿ ಇಲ್ಲದ ಕಾರಣ ಅದು ಸೀಜ್ ಮಾಡಬಹುದೆಂಬ ಹೆದರಿಕೆಯಿಂದ ಬಿಜೆಪಿ ನಾಯಕ ರಂಗಣ್ಣ ಶೆಬನಕಟ್ಟಿ ಮತ್ತು ಮಾಜಿ ಶಾಸಕ ರಾಜಶೇಖರ್ ಶೀಲವಂತರಿಗೆ ದುಂಬಾಲು ಬಿದ್ದ ಬಂಟನೂರ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ (ಡಿಎಚ್‌ಓ) ಮೇಲೆ ಒತ್ತಡ ತರಲು ಪ್ರಯತ್ನಿಸಿದ್ದೂ ಇಡೀ ಗುಳೇದಗುಡ್ಡಕ್ಕೆ ಗೊತ್ತಿದೆ. ಇದರ ವಿರುದ್ಧ ಎಲ್‌ಐಸಿ ಏಜೆಂಟ್ ಚಿಂತಾಮಣಿ ಪಟ್ಟಣಶೆಟ್ಟಿ 'ಲಂಕೇಶ್' ವಾರಪತ್ರಿಕೆಯ ವರದಿಗಾರ ಮೇಘರಾಜ್‌ರನ್ನೂ ಒಳಗೊಂಡಂತೆ ಸುಮಾರು 100 ಜನರು ಸಹಿಮಾಡಿದ ದೂರನ್ನು DHOಗೆ ಸಲ್ಲಿಸಲಾಗಿತ್ತು. ಇದಕ್ಕೆಲ್ಲಾ ನೇತೃತ್ವ ಕೊಟ್ಟ ಎಂಬ ಕಾರಣಕ್ಕೆ ಮೇಘರಾಜ್ ವಿರುದ್ಧ ಬಂಟನೂರ್‌ಗೆ ಒಳಗೊಳಗೇ ಸಿಟ್ಟು ನೆತ್ತಿಗೇರಿತ್ತು.

ಡಾ. ಬಂಟನೂರ್ ಎಂತಹ ಚಾಲಾಕಿ ಎಂದರೆ ರೋಗಿ ಸತ್ತ ಮೇಲೂ ಇನ್ನೂ ಬದುಕಿದ್ದಾನೆಂದು ಸುಳ್ಳುಹೇಳಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯುವಂತೆ ಚೀಟಿ ಬರೆದು ಕೊಡುತ್ತಾರೆ. ಬಾದಾಮಿ ತಾಲ್ಲೂಕಿನ ಕಿತ್ತಲಿ ಎಂಬ ಗ್ರಾಮದ ಶ್ರೀಮತಿ ಕಂಬೋಗಿ ಎಂಬ ಗರ್ಭಿಣಿಯು ಇವರಲ್ಲಿಗೆ ಚಿಕಿತ್ಸೆಗೆಂದು ಬಂದಿದ್ದರು. ಅವರನ್ನು ಸರಿಯಾಗಿ ತಪಾಸಣೆ ಮಾಡಿ ಒಳರೋಗಿ ಎಂದು ದಾಖಲಿಸಿಕೊಳ್ಳದೇ ಹಣದ ಆಸೆಗಾಗಿ ನೇರವಾಗಿ ಆಪರೇಷನ್ ಕೋಣೆಗೆ ಕರೆದೊಯ್ದರು. ಅದೇನು ಚಿಕಿತ್ಸೆ ಮಾಡಿದರೋ ಗೊತ್ತಿಲ್ಲ, ಶ್ರೀಮತಿ ಕಂಬೋಗಿ ಮಾತ್ರ ಸ್ವಲ್ಪ ಹೊತ್ತಿನಲ್ಲಿಯೇ ಸತ್ತು ಹೆಣವಾಗಿ ಹೋದರು. ಈ ಕೇಸು ತನ್ನ ತಲೆಗೆ ಬಂದು ಬಡುತ್ತೆ ಎಂದುಕೊಂಡ ಬಂಟನೂರ್ ಉಪಾಯದಿಂದ "ಅವರಿನ್ನೂ ಬದುಕಿದ್ದಾರೆ, ಹೆಚ್ಚಿನ ಚಿಕಿತ್ಸೆಗಾಗಿ ತಕ್ಷಣ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ" ಎಂದು ಮನೆಯವರಿಗೆ ಸಲಹೆ ಮಾಡಿದ್ದಾರೆ. ಅಂತೆಯೇ ಮನೆಯವರು ಬಾಗಲಕೋಟೆಯ ಜಿಲ್ಲಾ ಆಸ್ಪತ್ರೆಗೆ ಬಂದಾಗಲೇ ಗೊತ್ತಾಗಿದ್ದು ಕಂಬೋಗಿ ಸತ್ತು ಹಲವಾರು ಗಂಟೆಗಳಾಗಿವೆ ಎಂದು. ಅಲ್ಲಿಯ ವೈದ್ಯರು ಸಲ್ಲಿಸಿದ ವರದಿಯಾಧಾರದಲ್ಲಿ ಬಂಟನೂರ್ ಕಂಬಿಯ ಹಿಂದೆ ಹೋಗಬೇಕಾಗಿತ್ತು. ಆದರೆ ಅವರಿವರ ಕಾಲು ಹಿಡಿದು, ಅಷ್ಟೋ ಇಷ್ಟೋ ಕಪ್ಪ ಸಲ್ಲಿಸಿ ಬಚಾವ್‌ವಾಗಿ ಹೋದರು. ಈ ಬಗ್ಗೆ ಮಾಹಿತಿ ಹಕ್ಕು ಕಾಯಿದೆಯ ಆಧಾರದಲ್ಲಿ ಸರ್ಟಿಫಿಕೇಟ್ ಪಡೆದ ಶ್ರೀಮತಿ ಕಂಬೋಗಿಯವರ ಕುಟುಂಬದವರು ನ್ಯಾಯಾಲಯದ ಮೊರೆ ಹೋಗುವ ತಯಾರಿ ನಡೆಸಿದ್ದರು. ಈ ಕೇಸಿನಲ್ಲಿಯೂ ಮೇಘರಾಜ್ ಬಂಟನೂರ್ ವಿರುದ್ಧ ಕಂಬೋಗಿ ಕುಟುಂಬಕ್ಕೆ ಸಹಾಯ ಮಾಡಿದ್ದರು.



ಡಾ. ಬಂಟನೂರ್

ಬಂಟನೂರ್ ವಿರುದ್ಧ ಬರುತ್ತಿರುವ ಇಂತಹ ದೂರುಗಳನ್ನು ಗಮನಿಸಿದ ಬಾಗಲಕೋಟೆ DHO ಇವರನ್ನು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ವರ್ಗಾಯಿಸಿದರು. ಆದರೆ ಬಂಟನೂರ್‌ಗೆ ಬಾಗಲಕೋಟೆಗಿಂತ ಗುಳೇದಗುಡ್ಡದಲ್ಲಿಯೇ ಹೆಚ್ಚಿನ ಬಿಸಿನೆಸ್ ಆಗುತ್ತದೆ. ಔಷಧಿ ವ್ಯಾಪಾರಿಗಳೊಂದಿಗೆ ಡೀಲ್ ಮಾಡಿಕೊಂಡಿರುವ ಬಂಟನೂರ್ ಬರುವ ರೋಗಿಗಳಿಗೆ ಅನಗತ್ಯವಾಗಿ ದುಬಾರಿ ಮತ್ತು ಅಗತ್ಯಕ್ಕಿಂತ ಹೆಚ್ಚಿನ ಮೆಡಿಸಿನ್ ಬರೆಯುವ ಪ್ರವೃತ್ತಿ ಇಟ್ಟುಕೊಂಡಿದ್ದಾರೆ. ಅಲ್ಲದೇ ಆಪರೇಷನ್ ಮಾಡುವಾಗಲೂ ಅನಗತ್ಯ ಔಷಧಿಗಳನ್ನು ರೋಗಿಯ ಕಡೆಯವರಿಂದ ತರಿಸಿ ನಂತರ ಅವುಗಳನ್ನು ಮಾರಿಕೊಳ್ಳುವ ಕೆಲಸವನ್ನೂ ಅವರು ಚೆನ್ನಾಗಿ ಮಾಡುತ್ತಾರೆ. ಹೀಗಾಗಿ ಅಂತೂಇಂತೂ ಮತ್ತೆ ಗುಳೇದಗುಡ್ಡಕ್ಕೆ ವಾಪಸ್ಸು ಬರುವಲ್ಲಿ ಬಂಟನೂರ್ ಯಶಸ್ವಿಯಾಗಿದ್ದಾರೆ.

ಅಲ್ಲದೇ ಇತ್ತೀಚೆಗೆ ಗುಳೇದಗುಡ್ಡದಲ್ಲಿ 14 ವರ್ಷದ ಬುದ್ಧಿಮಾಂದ್ಯ ಹುಡುಗಿಯ ಮೇಲೆ ಮೂವರು ಸಾಮೂಹಿಕ ಅತ್ಯಾಚಾರ ಮಾಡಿದ್ದು ಆಕೆ ಗರ್ಭಿಣಿಯಾಗಿದ್ದಳು. ನಂತರ ಅವಳು ಅತ್ಯಾಚಾರಕ್ಕೊಳಗಾದ ವಿಚಾರವನ್ನು ಆಕೆಯೇ ಬಾಯಿಬಿಟ್ಟು ಹೇಳಿದ್ದಳು. ಅವಳ ಗರ್ಭಪಾತ ಮಾಡಬೇಕೆಂದು ಆಸ್ಪತ್ರೆಗೆ ಕರೆ ತಂದಾಗ ಅವಳನ್ನು ಒಳರೋಗಿ ಎಂದು ದಾಖಲಿಸಿಕೊಳ್ಳಲೂ ಇಲ್ಲ, ಈ ಕುರಿತು ಪೊಲೀಸರಿಗೆ ದೂರನ್ನೂ ನೀಡಲಿಲ್ಲ. ಇದು ಗೊತ್ತಾದ ತಕ್ಷಣ ಮೇಘರಾಜ್ 'ಈ ಟಿವಿ'ಯ ಕ್ಯಾಮೆರಾಮ್ಯಾನ್ ಕಳಿಸಿ ಆ ಹುಡುಗಿ ತನ್ನ ಅತ್ಯಾಚಾರದ ಬಗ್ಗೆ ಮಾತನಾಡುತ್ತಿರುವ ದೃಶ್ಯಗಳನ್ನು ಸೆರೆಹಿಡಿಸಿದರು. ಇದು ಎಲ್ಲಿ ಪ್ರಸಾರವಾಗಿಬಿಡುತ್ತೊ ಎಂಬ ಭಯದಿಂದ ಈಗ ಮೇಘರಾಜ್ ವಿರುದ್ಧವೇ ಬಂಟನೂರ್ ಹಣಕ್ಕಾಗಿ ಒತ್ತಾಯಿಸುತ್ತಿದ್ದಾರೆಂದೂ, ಜೀವಬೆದರಿಕೆ ಹಾಕಿದ್ದಾರೆಂದೂ ದೂರು ನೀಡಿದ್ದಾರೆ. ಈ ದೂರನ್ನು ಹಿಂದುಮುಂದು ನೋಡದೇ ಸ್ವೀಕರಿಸಿದ ಗುಳೇದಗುಡ್ಡ ಠಾಣೆಯ ಎಸ್ಸೈ ಇವರನ್ನು ಕರೆಸಿ ಯದ್ವಾತದ್ವಾ ಬೈದು, ಕೇಸು ದಾಖಲಿಸಿದ್ದಾರೆ. ಬಂಟನೂರ್ ಹಿಂದೆ ಸ್ಥಳೀಯ ರಾಜಕೀಯ ಪುಢಾರಿಗಳಿರುವುದು ಅವರ ಆಟ ಎಗ್ಗಿಲ್ಲದೇ ನಡೆಯುವುದಕ್ಕೆ ಒಂದು ಕಾರಣ. ಇಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ವಿ. ಅಶೋಕ್ ಎಂಬುವವರು ಎಸ್ಸೈ ಆಗಿದ್ದಾಗ ಅವರ ವಿರುದ್ಧ ಪತ್ರಿಕೆಯಲ್ಲಿ ಬರೆದದ್ದಕ್ಕಾಗಿ ಅವರಿಗೂ ಮೇಘರಾಜ್ ಮೇಲೆ ಹಳೆಯ ದ್ವೇಷವಿತ್ತು, ಈಗ ಎಲ್ಲರೂ ಸೇರಿ ಅವರ ವಿರುದ್ಧ ಮುಗಿಬಿದ್ದಿದ್ದಾರೆ. ಬಾಗಲಕೋಟೆಯ ಅಧಿಕಾರಿಗಳಿಗೆ ತಮ್ಮ ಕರ್ತವ್ಯದ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ ಬಂಟನೂರ್ ಎಂಬ ವೈದ್ಯ ಮತ್ತು ವಿ. ಅಶೋಕ್‌ನಂತಹ ಸರಕಾರಿ ನೌಕರರ ವಿರುದ್ಧ ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕಿದೆ. ಅದರ ಬದಲಾಗಿ ಭ್ರಷ್ಟರನ್ನು ಬಯಲಿಗೆಳೆದ ಪತ್ರಕರ್ತನ ಮೇಲೆ ಹಲ್ಲು ಮಸೆಯುವುದಲ್ಲ.

– ಸಂಪಾದಕಿ

ಪುಂಡ ಶಾಸಕನ ಗಿನ್ನಿಸ್ ದಾಖಲೆ



ಪೊಲೀಸರಿಂದ ಗೂಸಾ ತಿನ್ನುತ್ತಿರುವ ರೇಣುಕಾಚಾರ್ಯ



ಪ್ರಾಯಶಃ ಕರ್ನಾಟಕದ ಶಾಸಕಾಂಗದ ಇತಿಹಾಸದಲ್ಲೇ ಪುಂಡಾಟಿಕೆ, ಚಿಲ್ಲರೆ ಚಟುವಟಿಕೆ, ಬೀದಿಜಗಳ, ಪೊಲೀಸ್ ಕೇಸ್, ಕೋರ್ಟ್ ವಿಚಾರಣೆಗಳೆಂದು ಜಾಸ್ತಿ ಗದ್ದಲ ಮಾಡಿರುವ ಒಬ್ಬನೇ ಶಾಸಕನೆಂದರೆ ಹೊನ್ನಾಳಿಯ ಬಿಜೆಪಿ ರೇಣುಕಾಚಾರ್ಯನೇ ಇರಬಹುದು.

ಪರಿಗಣಿಸುತ್ತಾರೆಂದಾದಲ್ಲಿ ಇವನ್ನು ಗಿನ್ನಿಸ್ ದಾಖಲೆಗೂ ಸೇರಿಸಿಬಿಡಬಹುದು. ಹಾಗಿದೆ ರೇಣುಕನ ಎಡವಟ್ಟು ಸಾರ್ವಜನಿಕ ಜೀವನ. ಹುಂಬತನ ಇವನ ಹುಟ್ಟುಗುಣ. ಜೊತೆಗೆ ಅನಿರೀಕ್ಷಿತವಾಗಿ ಶಾಸಕನೂ ಆಗಿಹೋದ ಮೇಲೆ ಕೋತಿಗೆ ಹೆಂಡ ಕುಡಿಸಿದಂತಾಗಿ ಹೋಯಿತು ಈತನ ವರ್ತನೆಗಳು. ಇದುವರೆಗೂ ರೇಣುಕಾಚಾರ್ಯ ವಿರುದ್ಧ ದಾಖಲಾಗಿರುವ ಪೊಲೀಸ್ ಕೇಸುಗಳ ಸಂಖ್ಯೆ 15 ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಕಳೆದ ಜನವರಿ ಎರಡನೇ ತಾರೀಖು ಜಿಲ್ಲಾ ಎಸ್ಪಿ ಸಾನಿಯಾ ನಾರಂಗ್ ಈತನ ಕುಂಡೆ ಮೇಲೊದ್ದು ಠಾಣೆಯಲ್ಲೇ ಕೂರಿಸಿದ್ದ ಪ್ರಕರಣ ಹೊರತುಪಡಿಸಿಯೂ ನಡೆದಿರುವ ಪುಂಡಾಟದ ಘಟನೆಗಳಿವು. ಇವಕ್ಕೆಲ್ಲಾ ಕಿರೀಟವಿಟ್ಟಂತೆ ಬೆಂಗಳೂರಿನ ಚಂದ್ರಾ ಲೇಔಟ್ ಪೊಲೀಸರು ಈಗ ಜಯಲಕ್ಷ್ಮಿಗೆ ಫೋನ್‌ನಲ್ಲಿ ಬೆದರಿಸಿದ ಆರೋಪದ ಮೇಲೆ ಇನ್ನೊಂದು ಪ್ರಕರಣ ದಾಖಲಿಸಿ ಚಾರ್ಜ್‌ಶೀಟ್ ಹಾಕಿದ್ದಾರೆ.

ಕಳೆದ ವಾರದ 'ಲಂಕೇಶ್' ಸಂಚಿಕೆಯಲ್ಲಿ ಈ ರೇಣುಕನು ಮನೋಜ್ ಎಂಬಾತನ ಮೊಬೈಲ್ ನಂಬರ್‌ಗೆ ಫೋನ್ ಮಾಡಿ "ಮದರ್ ಪ್ರಾಮಿಸ್... ನನ್ ಹಾಕೆ ಜಯಲಕ್ಷ್ಮಿಯದು ಅಶ್ಲೀಲ ಭಂಗಿಗಳ ಫೋಟೋ ಐತಿ, ಅದನ್ನ ಪೇಪರ್‌ನವ್ರಿಗೆ ಕೊಟ್ಟು ಅವಳ ಲೈಫ್ ಸ್ಪಾಯ್ಲ್ ಮಾಡ್ತೀನಿ" ಎಂದು ಚೀರಿಕೊಂಡಿದ್ದನ್ನು ವಿವರವಾಗಿ ದಾಖಲಿಸಲಾಗಿತ್ತು.

ಮಹಿಳೆಯೊಬ್ಬಳ ಮಾನಭಂಗ ಮಾಡುವುದಾಗಿ ನೇರ ಬೆದರಿಕೆ ಹಾಕಿ ಸಾಕ್ಷಿ ಸಮೇತ ಸಿಕ್ಕಿಹಾಕಿಕೊಂಡಿರುವ ರೇಣುಕ ಈಗ ನಾಪತ್ತೆಯಾಗಿದ್ದಾನೆಂದು ಪೊಲೀಸರು ಹೇಳುತ್ತಿದ್ದಾರೆ. ಯಾವನಾದರೂ ಎಂಎಲ್ಎ ಪೋರ್ಕಿಗಳಂತೆ ಹೀಗೆ ತಲೆತಪ್ಪಿಸಿಕೊಂಡು ತಿರುಗುತ್ತಿರುವ ವಿಚಾರ ನೀವೆಂದಾದರೂ ಕೇಳಿದ್ದೀರಾ?



ಹಾಗೆ ನೋಡಿದರೆ ರೇಣುಕನ ಪುಂಡಾಟಿಕೆಗಳು ಅವನನ್ನು ಎಂದೋ ಜೈಲಿಗೆ ಕಳಿಸಿರಬೇಕಾಗಿತ್ತು. ಶಾಸಕನಾಗುವುದಕ್ಕೂ ಮೊದಲೇ ಶುರುವಾಗಿದ್ದ ಇವನ ಗೂಂಡಾಗಿರಿಗೂ ಒಂದು ಚರಿತ್ರೆಯಿದೆ.

ಚನ್ನೇಶ್ ಬೋರ್‌ವೆಲ್ಸ್ ಎಂಬ ವ್ಯವಹಾರ ಆರಂಭಿಸಿ ಬೋಗಸ್ ಬಿಲ್ ಎತ್ತಲು ಶುರು ಮಾಡಿದ್ದ ರೇಣುಕ ಒಮ್ಮೆ ದಿನಾಂಕ 17.2.1997 ರಲ್ಲಿ ಹಣ ಪಾವತಿ ಸಂಬಂಧ ಆಗಿನ ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಓ ಕೆ. ಶಿವರಾಮ್ ಚೇಂಬರಿಗೇ ನುಗ್ಗಿ ಬಾಯಿಗೆ ಬಂದಿದ್ದನ್ನೆಲ್ಲಾ ಬೈಯ್ದು ಗಲಾಟೆ ಮಾಡಿದ್ದ. ರೇಣುಕನ ಗಾಂಚಾಲಿ ನೋಡಿ ರೇಗಿಹೋದ ಶಿವರಾವ್ ಶಿವಮೊಗ್ಗದ ಜಯನಗರ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟರು. ಐಪಿಸಿ 448, 504, 506, 186 ರಂತೆ ಕೇಸೂ ದಾಖಲಾಗಿ ಹೋಯಿತು. (ಸಂಖ್ಯೆ 27/1997) ಕೊನೆಗೆ 28.7.2003 ರಲ್ಲಿ ಕೋರ್ಟ್ ತೀರ್ಪು ನೀಡಿ ರೇಣುಕನಿಗೆ 15 ದಿನ ಜೈಲು ಶಿಕ್ಷೆ ಹಾಗೂ ಸಾವಿರ ರೂಪಾಯಿ ದಂಡ ವಿಧಿಸಿತ್ತು.

ಆದರೆ ರೇಣುಕ ಇದರಿಂದ ಯಾವ ಪಾಠವನ್ನೂ ಕಲಿಯಲಿಲ್ಲ. 22.12.2001 ರಲ್ಲಿ ಹೊನ್ನಾಳಿ ತಹಶೀಲ್ದಾರ್ ಕೆ.ಜಿ. ರಾಜಶೇಖರಪ್ಪನ ಚೇಂಬರಿಗೆ ನುಗ್ಗಿದವನೇ ಮಂಜುನಾಥ್ ಎಂಬುವವನ ಎಂಥದೋ ದೃಢೀಕರಣ ಪತ್ರದ ವಿಚಾರದಲ್ಲಿ ಬೈಯ್ದು ಗಲಾಟೆ ಎಬ್ಬಿಸಿದ್ದ. ರಾಜಶೇಖರಪ್ಪ ಪೊಲೀಸ್ ಕಂಪ್ಲೇಂಟ್ ಕೊಟ್ಟರು. ಪೊಲೀಸರು ದೂರು ದಾಖಲಿಸಿಕೊಂಡು (ಸಂಖ್ಯೆ 220/2001) ಕಲಂ 353, 504 ರಂತೆ ಕೇಸ್ ದಾಖಲಿಸಿದರು. ಆದರೆ ಇದರಿಂದ ಕೊಂಚ ಬೆದರಿದ ರೇಣುಕಾಚಾರ್ಯ ರಾಜಶೇಖರಪ್ಪನವರ ಜೊತೆ ರಾಜಿಸಂಧಾನ ಮಾಡಿಕೊಂಡು ಬಚಾವಾಗಿಬಿಟ್ಟ. ಇದರಿಂದ ರಾಜಶೇಖರಪ್ಪನಿಗೂ ಲಾಭವಾಯಿತು. ಇಡೀ ಹೊನ್ನಾಳಿಯನ್ನು ರಜಾಕಾರರಂತೆ ಲೂಟಿ ಹೊಡೆದ ರಾಜಶೇಖರಪ್ಪ ದಾವಣಗೆರೆಯಲ್ಲಿ ಒಂದು ಕೋಟಿ ರೂಪಾಯಿಯ ಬಂಗಲೆ ಕಟ್ಟಿಕೊಂಡ.



ಸಾನಿಯಾ ನಾರಂಗ್

ಇದರ ಬೆನ್ನಹಿಂದೆಯೇ ರೇಣುಕನ ಬಿಪಿಎಲ್ (Below Poverty Line) ರೇಷನ್‌ಕಾರ್ಡ್ ಗದ್ದಲ ಶುರುವಾಯಿತು. 27.10.2003 ರಂದು ತನ್ನೊಂದಿಗೆ ಒಂದಿಷ್ಟು ಚೆಡ್ಡಿ ಪಟಾಲಂಅನ್ನು ಕರೆದುಕೊಂಡು ತಾಲೂಕಾಫೀಸು ಹಾಗೂ ಬಿಡಿಓ ಆಫೀಸಿಗೆ ನುಗ್ಗಿದ ರೇಣುಕ 'ಈಗಿಂದೀಗಲೇ ಬಡವರಿಗೆ ರೇಷನ್‌ಕಾರ್ಡ್ ಕೊಡಿ' ಎಂಬ ವಿಚಿತ್ರ ಬೇಡಿಕೆ ಮುಂದಿಟ್ಟಿದ್ದ. ಶಿರಸ್ತೇದಾರ ದತ್ತಾ ಹಾಗೂ ತಾಲ್ಲೂಕ್ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಣ್ಣಯ್ಯಸ್ವಾಮಿಗೂ ಹೊಡೆಯಲು ಹೋಗಿ ಚೇರ್, ಟೇಬಲ್ ಮುರಿದು ಹಾಕಿದ್ದ. ಅಸಲಿ ವಿಚಾರ ಏನೆಂದರೆ ಇವತ್ತು ಬಡವರಿಗೆ ರೇಷನ್‌ಕಾರ್ಡ್ ಕೊಡುವುದು ಇಲ್ಲಾ ಬಿಡುವುದು ಈ ಲೋಕಲ್ ಆಫೀಸರ್‌ಗಳ ಕೈಲಿಲ್ಲ. ವಿಶ್ವಬ್ಯಾಂಕ್ ಆದೇಶದಂತೆ ನಮ್ಮ ಸರ್ಕಾರಗಳೇ ಜನರ ಕೈಲಿದ್ದ ಕಾರ್ಡ್‌ಗಳನ್ನು ಕಿತ್ತುಕೊಂಡು ಬರಿಗೈ ಮಾಡಿ ಕೂರಿಸಿವೆ. ಒಬ್ಬ ಶಾಸಕನಾಗಿ ವಿಧಾನಸಭೆಯಲ್ಲಿ ಎಂದೂ ಈ ಬಗ್ಗೆ ಚರ್ಚಿಸಲು ಹೋಗಿರದ ರೇಣುಕ ಕೇವಲ ಹೊನ್ನಾಳಿ ಜನರ ಕಣ್ಣಲ್ಲಿ ಹೀರೋ ಆಗಿ ಮಿಂಚಲು ಈ ಕಿತಾಪತಿ ನಡೆಸಿದ್ದ. ಕೊನೆಗೆ ಇದೂ ಒಂದು ಕೇಸಾಯಿತು. (ಸಂಖ್ಯೆ 184/2003), 185/2003) ಆಮೇಲೆ ರಾಜಿ ಕಬೂಲಿಯಾಗಿ ಕೇಸಿನ ಕತೆ ಮುಗಿದೂ ಹೋಯಿತು.

ಇಷ್ಟೆಲ್ಲಾ ರಾದ್ಧಾಂತಗಳಾದ ಮೇಲಾದರೂ ಶಾಸಕ ರೇಣುಕಾಚಾರ್ಯ ಒಂದಿಷ್ಟು ಬುದ್ಧಿ, ವಿವೇಕ ಬೆಳೆಸಿಕೊಂಡನಾ ಅಂದರೆ ಉಹೂಂ..... ಸುತಾರಾಂ ಇಲ್ಲ.

ಬಿಳಿದಾಳೆ ಈಶ

ಬದಲಾಗಿ ಇನ್ನೂ ಒಂದು ಡಜನ್ ಹಲ್ಲೆ, ಬೆದರಿಕೆ, ಗಲಾಟೆಗಳ ಕೇಸುಗಳನ್ನು ಮೈಮೇಲೆಳೆದುಕೊಂಡ. ಅದರಲ್ಲಿ ಆರ್‌ಎಫ್‌ಓ ವಿರೂಪಾಕ್ಷಪ್ಪ ಮೇಲಿನ ಗಲಾಟೆ (ದಿ. 8.4.03, ಪ್ರಕರಣ ಸಂಖ್ಯೆ 141/2002) ಹೊನ್ನಾಳಿಯ ಬಸವಂತಪ್ಪನ ಗಲಾಟೆ, ಹೊನ್ನಾಳಿ ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ಧಲಿಂಗಪ್ಪ ರೇಣುಕನ ಹಿಂದೂ ಸಮಾಜೋತ್ಸವದ ಅಟ್ಟಹಾಸ ನಿಯಂತ್ರಿಸಲು ಪ್ರಿವೆಂಟೀವ್ ಡಿಟೆಂಷನ್ ಮಾಡಿ ಬಳ್ಳಾರಿ ಜೈಲಿಗೆ ಕಳುಹಿಸಿದ್ದು ಇವೆ. ಇವಿಷ್ಟೇ ಅಲ್ಲದೆ ಹೊನ್ನಾಳಿ ತಹಶೀಲ್ದಾರ್ ಗಣಪತಿ ಭಟ್ ಕಚೇರಿಗೆ ಚೇಲಾಗಳೊಂದಿಗೆ ನುಗ್ಗಿ ಕಚೇರಿ ಕೆಲಸಕ್ಕೆ ಅಡ್ಡಿಪಡಿಸಿದ ಪ್ರಕರಣ (ದಿ. 26.8.04, ಪ್ರಕರಣ ಸಂಖ್ಯೆ 19/2004) ವಿಜಯ ಕರ್ನಾಟಕದ ವರದಿಗಾರ ಡಿ.ಎಂ. ಸುರೇಶ್ ಮೇಲಿನ ಹಲ್ಲೆ (ದಿ. 10.10.2004, ಕೇಸ್ ಸಂಖ್ಯೆ 24/2004) ಪೊಲೀಸ್ ಕೆ. ಬಸವರಾಜು ಮೇಲಿನ ದೌರ್ಜನ್ಯ (ದಿ. 6.12.04, ಕೇಸ್ ಸಂಖ್ಯೆ 22/04) ಮುಂತಾದ ಕೇಸ್‌ಗಳೂ ರೇಣುಕನ ವಿರುದ್ಧ ದಾಖಲಾಗಿವೆ.

ಬೇರ್‍ಯಾರೆ ವ್ಯಕ್ತಿ ಇಷ್ಟು ಪುಂಡಾಟಿಕೆ ಮಾಡಿದ್ದರೆ ಈ ಹೊತ್ತಿಗೆ ಪೊಲೀಸರು ರೌಡಿಶೀಟ್ ತೆಗೆದು ಗಡಿಪಾರು ಮಾಡಿರುತ್ತಿದ್ದರೋ ಏನೋ. ಆದರೆ ರೇಣುಕಾಚಾರ್ಯ ಈ ಮೇಲಿನ ಬಹಳಷ್ಟು ಪ್ರಕರಣಗಳಲ್ಲಿ ತನ್ನ ವಿರುದ್ಧ ಕಂಪ್ಲೇಂಟ್ ಕೊಟ್ಟವರ ಜೊತೆ ರಾಜಿ ಮಾಡಿಕೊಂಡು ಅಪಾಯದಿಂದ ಪಾರಾಗಿದ್ದಾನೆ. ಆದರೆ ಕೆಲವು ಈಗಲೂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ.

ಕರ್ನಾಟಕದಲ್ಲಿ ಕ್ರಿಮಿನಲ್ ಅಪರಾಧಿ ಹಿನ್ನೆಲೆಯಿಂದ ಬಂದು ನಂತರ ಶಾಸಕರಾದವರು ಅನೇಕರಿದ್ದಾರೆ. ಆದರೆ ಒಮ್ಮೆ ಶಾಸಕನಾದ ಮೇಲೂ ಪುಂಡಾಟಿಕೆ, ಹಾದಿರಂಪ, ಬೀದಿರಂಪ ಮಾಡಿಕೊಳ್ಳುತ್ತಾ ಸರ್ಕಾರಿ ನೌಕರರು, ಪೊಲೀಸರು, ಜನರ ಜೊತೆ ನಿತ್ಯ ಜಗಳವಾಡುತ್ತಾ ಹಾಸ್ಯಾಸ್ಪದವಾಗಿ ವರ್ತಿಸುತ್ತಿರುವವನೆಂದರೆ ರೇಣುಕಾಚಾರ್ಯ ಒಬ್ಬನೆ. ಈಗಿನ ಜಯಲಕ್ಷ್ಮಿ ಪ್ರಕರಣ ಸಾಗುತ್ತಿರುವ ದಿಕ್ಕನ್ನು ಗಮನಿಸುತ್ತಿದ್ದರೆ ರೇಣುಕ ರಿಪೇರಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಈ ಅಪ್ರಬುದ್ಧನಿಂದಾಗಿ ಕರ್ನಾಟಕ ಶಾಸಕಾಂಗದ ಮರ್ಯಾದೆಯೂ ಉಳಿಯುವ ಲಕ್ಷಣಗಳಿಲ್ಲ. ಆದರೆ ಈತ ಬಿಜೆಪಿಗಳಿಗೆ ಮಾತ್ರ ಹೇಳಿ ಮಾಡಿಸಿದ ಪುಂಡನಂತಿರುವುದು ನಿಜ.

ಸ್ಪೀಕರ್ ಕೃಷ್ಣ ಜವಾಬ್ದಾರಿ ಏನು?

ರೇಣುಕಾಚಾರ್ಯನ ಲೈಂಗಿಕ ಕಿರುಕುಳ ಹಾಗೂ ಜಯಲಕ್ಷ್ಮಿಗೆ ಬೆದರಿಕೆ ಹಾಕಿದ ಘಟನೆ ಈಗ ಪೊಲೀಸ್ ತನಿಖೆಗೆ ಒಳಪಟ್ಟಿದೆ. ಬಿಜೆಪಿಯವರಂತೂ ರೇಣುಕಾಚಾರ್ಯ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳದೆ ಮುಗುಂ ಆಗಿ ಇದ್ದುಬಿಟ್ಟಿದ್ದಾರೆ.

ಆದರೆ ವಿಧಾನಸಭಾ ಸ್ಪೀಕರ್ ಕೃಷ್ಣರವರೂ ಈ ಬಗ್ಗೆ ಮೌನ ತಾಳಿದ್ದಾರೆ ಯಾಕೆ?

ಕರ್ನಾಟಕದ ಶಾಸನಸಭೆಯ ಸದಸ್ಯನಾಗಿರುವ ರೇಣುಕಾಚಾರ್ಯ ಶಾಸಕಾಂಗದ ಘನತೆ, ಗೌರವಗಳಿಗೆಲ್ಲಾ ಈಗಾಗಲೇ ಚ್ಯುತಿ ತಂದಿದ್ದಾರೆ. ಗಲಾಟೆ, ದೌರ್ಜನ್ಯ, ಪುಂಡಾಟಿಕೆ ನಡೆಸಿಕೊಂಡು ಬಂದಿರುವುದೇ ಅಲ್ಲದೇ ಈಗ ಮಹಿಳೆಯೊಬ್ಬಳೊಂದಿಗೆ ಅನುಚಿತವಾಗಿ ವರ್ತಿಸಿ ಕೊನೆಗೆ ಆಕೆಗೆ ಬೆದರಿಸುವ, ಅಶ್ಲೀಲ ಫೋಟೋ ತೆಗೆದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುವ ರೀತಿ ನಡೆದುಕೊಂಡಿದ್ದಾರೆ.

ಹಾಲಿ ಶಾಸಕನೊಬ್ಬ ಹಾಡುಹಗಲೇ ಇಂಥ ದುಷ್ಟ ಕೆಲಸಗಳಲ್ಲಿ ತೊಡಗಿರುವಾಗಲೂ ಕೃಷ್ಣರವರು ಅದನ್ನು ನೋಡಿಕೊಂಡು ಸುಮ್ಮನಿದ್ದಾರೇಕೆ?

ಪ್ರಜಾಪ್ರಭುತ್ವದ ಘನತೆ, ಆಶಯಗಳನ್ನು ರಕ್ಷಿಸಿ ಎತ್ತಿ ಹಿಡಿಯಬೇಕಾದ ಜನಪ್ರತಿನಿಧಿಗಳೇ ಹೀಗೆ ಕ್ರಿಮಿನಲ್‌ಗಳಂತೆ ವರ್ತಿಸಿದರೆ ಜನರಿಗೆ ಈ ವ್ಯವಸ್ಥೆ ಬಗ್ಗೆ ನಂಬಿಕೆ ಉಳಿಯುತ್ತದೆಯೇ?

ಇಂಥ ಸಂದರ್ಭಗಳು ಎದುರಾದಾಗ ಸ್ಪೀಕರ್‌ಗಳೇ Suo moto action ತೆಗೆದುಕೊಂಡ ಸಂದರ್ಭಗಳಿವೆ. ಕೆಲ ತಿಂಗಳ ಹಿಂದೆ ಬಿಜೆಪಿಯ ಹಲವು ಸಂಸತ್ ಸದಸ್ಯರು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆಯುತ್ತಿದ್ದಾಗ ಸಿಕ್ಕಿಬಿದ್ದಿದ್ದರು. ಆಗ ಸ್ಪೀಕರ್ ಸೋಮನಾಥ್ ಚಟರ್ಜಿ ಅವರೆಲ್ಲರನ್ನು ಸಂಸತ್‌ನಿಂದ ಸಸ್ಪೆಂಡ್ ಮಾಡಿದ್ದರು.



ಆರೋಪಿ ಸಂಸದರು ಕೋರ್ಟಿಗೆ ಹೋದರಾದರೂ ಸ್ಪೀಕರ್ ಅದಕ್ಕೆ ಜಗ್ಗಿರಲಿಲ್ಲ.

ಕರ್ನಾಟಕ ಶಾಸಕಾಂಗದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಹಾಲಿ ಶಾಸಕನ ವಿರುದ್ಧ ಅತ್ಯಂತ ಗುರುತರವಾದ ಆರೋಪಗಳು ಕೇಳಿಬಂದಿವೆ. ಅದಕ್ಕೆ ಸಾಕ್ಷ್ಯಗಳಿರುವುದು ಕಂಡುಬರುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಪೊಲೀಸರು, ಮಹಿಳಾ ಆಯೋಗ ಹಾಗೂ ಕೋರ್ಟ್ ವಿಚಾರಣೆಗಳು ನಡೆಯುವುದು ಬೇರೆ ವಿಚಾರ. ಆದರೆ ಆರೋಪಿ ರೇಣುಕಾಚಾರ್ಯ ಆ ಕಳಂಕಗಳಿದ್ದಾಗಲೂ ಶಾಸನಸಭೆಗೆ ಬರುವುದು ಸದನದ ಗೌರವಕ್ಕೆ ಕುಂದಲ್ಲವೆ?

ಸ್ಪೀಕರ್ ಕೃಷ್ಣರವರು ಯೋಚಿಸಲಿ.



ಸಿನಿಮಾ ನಟಿಯರ ಲಿಂಕ್

ಯಡ್ಡಿಯ ಇನ್ನಿಬ್ಬರು ಶಿಷ್ಯರ ರಾಸಲೀಲೆ!

ಬಿಜೆಪಿಯ ಇನ್ನಿಬ್ಬರು ಶಾಸಕರ ಕಚ್ಚೆಹರಕುತನದ ಕತೆ ಇದು. ಒಬ್ಬ ರೇಣುಕಾಚಾರ್ಯನ ಸೆಕ್ಸ್ ಹಗರಣದಿಂದಲೇ ಮಾನ ಮರ್ಯಾದೆಗಳನ್ನೆಲ್ಲಾ ಕಳೆದುಕೊಂಡಿರುವ ಬಿಜೆಪಿಗೆ ಮುಂದಿನ ದಿನಗಳಲ್ಲಿ ಇನ್ನೂ ಕಷ್ಟಕಾಲ ಬರಲಿದೆ. ಏಕೆಂದರೆ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಆರಿಸಿ ಬಂದಿರುವ ಇನ್ನಿಬ್ಬರು ಬಿಜೆಪಿ ಶಾಸಕರ ರಾಸಲೀಲೆಗಳ ಬಗ್ಗೆ ಇನ್ನೇನು ಕೆಲವೇ ದಿನಗಳಲ್ಲಿ ಇನ್ನೊಂದು ಹಗರಣ ಸ್ಫೋಟಗೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ಈ ರಾಸಲೀಲಾ ಪ್ರವೀಣರಿಬ್ಬರೂ ಲಿಂಗಾಯತರು ಹಾಗೂ ಹಿಂದೂ ಸಮಾಜೋದ್ಧಾರಕರೆ. ಅದಿಷ್ಟೇ ಅಲ್ಲ, ಉಪಮುಖ್ಯಮಂತ್ರಿ ಶ್ರೀರಾಮನ ಅನುಯಾಯಿ ಶ್ರೀಮಾನ್ ಯಡಿಯೂರಪ್ಪನವರ ನಿಷ್ಠ ಹಿಂಬಾಲಕರೂ ಹಾಗೂ ಖಾಸಾ ಶಿಷ್ಯರಂತಿರುವ ಶಾಸಕರಿವರು. ಜೊತೆಗೆ ರಂಗೀಲಾ ರೇಣುಕಾಚಾರ್ಯನ ದೋಸ್ತಿಗಳೂ ಕೂಡಾ ಹೌದು.

ಲೇವಾದೇವಿ ನಡೆಸಿಕೊಂಡು ಅವರಿವರಿಗೆ ಟೋಪಿ ಹೊಲಿಯುತ್ತಾ ಕಾಲಾಯಾಪನೆ ಮಾಡಿಕೊಂಡಿದ್ದ ಇವರಿಬ್ಬರೂ ಇದೇ ಮೊದಲ ಬಾರಿಗೆ ಶಾಸಕರಾಗಿದ್ದಾರೆ.
ಈ ಪೈಕಿ ಒಬ್ಬಾತ ಈಗ ಸಚಿವನೂ ಆಗಿದ್ದಾನೆ. ಇನ್ನೊಬ್ಬ ಪಕ್ಕಾ ವ್ಯವಹಾರಸ್ಥ. ಯಡ್ಡಿ ಯಾವುದೋ ನಿಗಮ ಮಂಡಳಿ ಚೇರ್ಮನ್‌ಗಿರಿ ಆಫರ್ ಮಾಡಿದಾಗ 'ಬೇಡಾ ಸಾರ್ ನೀವು ಸಿಎಂ ಆದಮೇಲೆ ನನ್ನನ್ನು ಬಿಜಾಪುರ ಜಿಲ್ಲಾ ಉಸ್ತುವಾರಿ ಮಂತ್ರಿ ಮಾಡಿ ಸಾಕು' ಎಂದುಬಿಟ್ಟಿದ್ದಾನೆ.
ಸಕ್ಕರೆ ಕಾರ್ಖಾನೆ, ಸಿಮೆಂಟು ಫ್ಯಾಕ್ಟರಿಗಳ ದಂಧೆ ನಡೆಸುವ ಈತ ಸದ್ಯಕ್ಕೆ ಹೆಣ್ಣುಗಳ ಶಿಕಾರಿಯಲ್ಲೇ ಬ್ಯುಸಿ.

ಹೈ ಪಾಯಿಂಟ್ ಅಪಾರ್ಟ್‌ಮೆಂಟಲ್ಲಿ.....

ಬಿಜಾಪುರ, ಬಾಗಲಕೋಟೆ ಜಿಲ್ಲೆಗಳ ಕೆಲವು ಹೊಸ ಬಿಜೆಪಿ ಶಾಸಕರುಗಳಿಗೆ ಬೆಂಗಳೂರು ಹೊಸದೇನಲ್ಲ, ರಾಶಿರಾಶಿ ದುಡ್ಡಿರುವ ಇವರಿಗೆ ಶಾಸಕರಾಗಿ ಬೆಂಗಳೂರು ಪ್ರವೇಶಿಸಿದ್ದು ಮಾತ್ರ ಇದೇ ಮೊದಲ ಬಾರಿಯಾಗಿತ್ತು. ಈ ಸಿಮೆಂಟ್ ಫ್ಯಾಕ್ಟರಿ ಖದೀಮನ ವಿಚಾರವನ್ನೇ ತೆಗೆದುಕೊಳ್ಳಿ. ಈಗ್ಗೆ ಐದು ವರ್ಷಗಳ ಹಿಂದೆ ದೇಶದಲ್ಲೇ ಮೊಟ್ಟಮೊದಲ ಮಿನಿ ಶುಗರ್ ಮಿಲ್ ಸ್ಥಾಪಿಸಿದ ಈತ ಈಗ ಯಾವ ಲೆವೆಲ್‌ನಲ್ಲಿದ್ದಾನೆಂದರೆ ಹೆಣ್ಣುಗಳನ್ನು ಹುಡುಕಿಕೊಂಡು ಬಾಂಬೆ, ದೆಹಲಿವರೆಗೂ ಅಲೆದಾಡಿಕೊಂಡು ಬರುತ್ತಾನೆ. ತನ್ನ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಅನುಕೂಲ ಮಾಡಿಕೊಡಲು ಶುಗರ್ ಫ್ಯಾಕ್ಟರಿ ಮಾಡಿದೆ ಎಂದು ಹೇಳಿಕೊಳ್ಳುತ್ತಾನಾದರೂ ಖರೀದಿಸಿದ ಕಬ್ಬಿಗೆ ದುಡ್ಡು ಕೊಡದೆ ಸತಾಯಿಸಿ ಕೊನೆಗೆ ರೈತರೆಲ್ಲಾ ಗಲಾಟೆ ಮಾಡುವಂತ ಪರಿಸ್ಥಿತಿ ಸೃಷ್ಟಿಸಿದ್ದ. ಕಬ್ಬು ಅರೆದು ಸಕ್ಕರೆ ತಯಾರಿಸಿ ಮಾರಿಕೊಂಡು, ಬಂದ ದುಡ್ಡನ್ನು ಹೆಂಗಸರಿಗಾಗಿ ಖರ್ಚು ಮಾಡುತ್ತಿದ್ದಾನೆಯೇ ವಿನಃ ರೈತರ ಕಡೆ ಕಣ್ಣೆತ್ತಿಯೂ ನೋಡುತ್ತಿಲ್ಲ. ಬೆಂಗಳೂರಿನ ಹೈಗ್ರೌಂಡ್ಸ್ ಬಳಿ ಇರುವ ಹೈಪಾಯಿಂಟ್ ಅಪಾರ್ಟ್‌ಮೆಂಟ್‌ನಲ್ಲಿ ಇವನದೊಂದು ಫ್ಲಾಟ್ ಇದೆ. ಇವನು ಮತ್ತವನ ಗೆಣೇಕಾರರ ರಂಗೀಲಾ ಚಟುವಟಿಕೆಗಳ ಅಡ್ಡೆ ಅದು. ಈ ಜಾಗ ಬಿಜಾಪುರ ಜಿಲ್ಲೆ ಬೀಳಗಿ ವಿಧಾನಸಭಾ ಕ್ಷೇತ್ರದಿಂದ ನೇರ ದಕ್ಷಿಣ ದಿಕ್ಕಿನಲ್ಲಿದೆ.

ಯಡಿಯೂರಪ್ಪನವರಿಗೂ ಈ ಬೀಳಗಿ ವಿಧಾನಸಭಾ ಕ್ಷೇತ್ರದ ಮೇಲೆ ಎಲ್ಲಿಲ್ಲದ ಮಮತೆ. ಏಕೆಂದರೆ ಈ ಸಾಲಿನಲ್ಲಿ ಬೇರೆ ಯಾವ ಕ್ಷೇತ್ರಕ್ಕೂ ಕೊಟ್ಟಿರದಷ್ಟು ಅಂದರೆ 25 ಕೋಟಿ ರೂಪಾಯಿಗಳ ಇಡಗಂಟನ್ನು ಅಭಿವೃದ್ಧಿ ಕಾರ್ಯಗಳಿಗೆಂದು ಮಂಜೂರು ಮಾಡಿದ್ದಾರೆ. ಬೀಳಗಿ ಹಾಗೂ ಬಿಜಾಪುರ ಸುತ್ತಲಿನ ಯಾವುದೇ ಸರ್ಕಾರಿ ಕಾಮಗಾರಿಯಾಗಲಿ ಇಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರು 'ವಿಜಯ್ ಶಕ್ತಿ' ಸಿಮೆಂಟನ್ನೇ ಖರೀದಿಸಿ ಬಳಸಬೇಕೆಂಬ ಅಲಿಖಿತ ಫರ್ಮಾನೊಂದನ್ನು ಸ್ಥಳೀಯ ಬಿಜೆಪಿ ಮುಖಂಡನೊಬ್ಬ ಜಾರಿಯಲ್ಲಿಟ್ಟಿದ್ದಾನೆ.

ಸ್ವಾಮಿ ಕಾರ್ಯ ಜೊತೆಗೆ ಸ್ವಕಾರ್ಯವನ್ನೂ ಮಾಡಿಕೊಳ್ಳುತ್ತಿರುವ ಜಾಣನೀತ. ಸಾಕ್ಷಾತ್ ಆ ಮುರುಗೇಶ ದೇವರೇ ಬಂದರೂ ಈ ದಂಧೆ ನಿಲ್ಲುವುದಿಲ್ಲ. ನೀರಾನಿಯಂತೆ ಹಣದ ರಾಶಿ ದಿನೇದಿನೇ ಬೆಳೆದು ಈ ರಾಸಲೀಲಾ ಪ್ರವೀಣನ ಜೇಬು ತುಂಬಿಸುತ್ತಿದೆ.

ಅಪ್ಪೂ-ಬೆಪ್ಪು

ರೇಣುಕಾಚಾರ್ಯನ ಇನ್ನೋರ್ವ ಗೆಣೇಕಾರ ಹಾಲಿ ಚಿಲ್ಲರೆ ಖಾತೆಯೊಂದರ ಮಂತ್ರಿ ಕೂಡ. 'ಅಪ್ಪೂ'ವ ವಿದ್ಯೆಯಲ್ಲಿ ವಿಪರೀತ ಬ್ಯುಸಿಯಾಗಿ ಬಿಟ್ಟಿದ್ದಾನೆ. ಕೆಟ್ರು 'ಪಟ್ಟಣ' ಸೇರು, 'ಶೆಟ್ಟಿ' ಬೀಡು ಬಿಟ್ಟಲ್ಲೆ 'ಪಟ್ಟಣ' ಎಂಬ ಗಾದೆ ಮಾತನ್ನೇ ಸುಳ್ಳು ಮಾಡುವಂತೆ ಬೆಂಗಳೂರು ಪಟ್ಟಣ ಸೇರುವ ಮೊದಲೇ ಕೆಟ್ಟಿದ್ದನೀತ. ಬಿಜಾಪುರದಲ್ಲಿ ಟೀಚರ್ ಒಬ್ಬಾಕೆಯೊಂದಿಗೆ ಸೌಹಾರ್ದಯುತ ಒಡನಾಟವಿಟ್ಟುಕೊಂಡಿದ್ದ ಈ ಮಹಾನುಭಾವರು ಪಟ್ಟಣ ಸೇರಿದ್ದೇ ತಡ, ಎಲ್ಲೆಂದರಲ್ಲಿ ಪ್ಯಾಂಟು ಜಾರತೊಡಗಿತು. ರಾಜ್ಯ ಬಿಜೆಪಿಯ ಬಹುತೇಕರಿಗೆ ಇವರ ಪಕ್ಷೇತರ ಚಟುವಟಿಕೆಗಳ ವಾಸನೆ ಸಿಕ್ಕಿದೆ. ಆದರೆ ಯಥಾರಾಜಾ, ತಥಾ ಪ್ರಜಾ ಎಂದುಕೊಂಡು ಸುಮ್ಮನಾಗಿಬಿಟ್ಟಿದ್ದಾರೆ. ಇದರಿಂದ ಇನ್ನಷ್ಟು ಪ್ರೋತ್ಸಾಹ ಸಿಕ್ಕಂತಾಗಿ ಈ ಪಟ್ಟಣಿಗ ಧಾರವಾಡದತ್ತ ಮುಖ ಮಾಡಿ ನಿಂತುಬಿಟ್ಟ. ಬಿಜಾಪುರದಿಂದ ಹೊರಟು ಬೆಂಗಳೂರಿಗೆ ಬರುವಾಗ ಧಾರವಾಡದಲ್ಲೂ ಕೆಲಹೊತ್ತು ತಂಗಿದ್ದು ಬರುವ ಅಭ್ಯಾಸ ಶುರುವಾಯಿತು. ಪಾಪ, ಅಲ್ಲಿ ಈಗ ಮಾರ್ಕೆಟ್ ಇಲ್ಲದ ಕನ್ನಡ ನಟಿಯೊಬ್ಬಳ ನಿರುದ್ಯೋಗ ನಿವಾರಿಸುವ ಹೊಣೆಯನ್ನು ಇವರು ಹೊತ್ತುಕೊಂಡಿದ್ದಾರೆ. ಪದೇಪದೇ 'ಧಾ'ರವಾಡಕ್ಕೆ 'ಮಿನಿ' ಟೂರ್ ಹೋಗುವ ತಾಪತ್ರಯ ಯಾಕೆಂದು ಈಗ ಆ ನಿರುದ್ಯೋಗಿ ನಟಿಗೆ ಬೆಂಗಳೂರಲ್ಲೇ ಮನೆ ಮಾಡಿ ಇಟ್ಟುಕೊಂಡಿದ್ದಾರೆಂಬ ಪುರಾವೆಗಳಿವೆ. ರಾಜ್ಯ ಬಿಜೆಪಿಗಳಿಗೆ ರೇಣುಕಾಚಾರ್ಯನ ಹಗರಣಗಳೇ ಏಳು ಕೆರೆ ನೀರು ಕುಡಿಸುತ್ತಿರುವಾಗ ಅದೇ ಬಿಜೆಪಿಯ ಇನ್ನಿಬ್ಬರು ಪವಾಡ ಪುರುಷರ, ಸ್ತ್ರೀ ಸಮಾಜೋದ್ಧಾರದ ಕೆಲಸಗಳು ಪೂರ್ತಿ ಬಹಿರಂಗವಾದರೆ ಇನ್ಯಾವ ಸ್ಥಿತಿ ಬರಬಹುದೋ ಏನೋ?

ಆ ಕಾಲ ಇನ್ನೇನು ಹತ್ತಿರದಲ್ಲಿದೆ.

ರೇಣುಕ-ಜಯಲಕ್ಷ್ಮಿ ಹಾವು ಏಣಿಯಾಟ

ಹಾವಿನ ಹೆಡೆ ಜೊತೆ ವಿರಸ ಆದರೆ ಬಾಲದ ಜೊತೆ ಸರಸ ಅಂತಾರಲ್ಲ ಹಾಗಿದೆ ರೇಣುಕ-ಜಯಲಕ್ಷ್ಮಿ ನಡುವಿನ ಲೇಟೆಸ್ಟ್ ವಿದ್ಯಮಾನಗಳು. ಈ ಜಯಲಕ್ಷ್ಮಿಯೇನೋ ರೇಣುಕನ ವಿರುದ್ಧ ಹಠಕ್ಕೆ ಬಿದ್ದವಳಂತೆ ತಮ್ಮಿಬ್ಬರ ಫೋಟೋಗಳನ್ನು ರಿಲೀಸ್ ಮಾಡಿ 'ಈಗೇನ್ ಮಾಡ್ತಿಯಾ' ಎಂಬಂತೆ ಥರಗುಟ್ಟಿಸಿಬಿಟ್ಟಳು. ಆದಕ್ಕೆ ರೇಣುಕನು 'ಅದೆಲ್ಲಾ ಟ್ರಿಕ್ ಫೋಟೋ, ಯಾರೂ ನಂಬಬ್ಯಾಡಿ' ಅಂತ ಕಿರುಲಿಕೊಂಡನಾದರೂ ಜನ ರೇಣುಕನ ಮಾತನ್ನು ನಂಬಲಿಲ್ಲ. ಈಗ ಬೇರೆ ದಾರಿ ಕಾಣದೆ 'ನನ್ ತಾಕೂ ಎವಿಡೆನ್ಸ್ ಅದೆ, ಕೊಡ್ತೀನಿ' ಅಂತಾ ಹೇಳಿಕೊಂಡು ತಿರುಗಲು ಶುರು ಮಾಡಿದ್ದಾನೆ. ಜೂನ್ 4 ನೇ ತಾರೀಖು ತಾನು



ಹೇಳಿದಂತೆ ರೇಣುಕ ಜಯಲಕ್ಷ್ಮಿಗೆ ಸಂಬಂಧಿಸಿದ ವಿನಾದರೂ ಹೊಸ ವಿಚಾರ ಹೇಳಲೂಬಹುದು. ಆದರೆ ಅಷ್ಟರಿಂದಲೇ ಅವನ ಮೇಲಿರುವ ಲೈಂಗಿಕ ಕಿರುಕುಳ, ಬೆದರಿಕೆ ಆರೋಪಗಳೇನೂ ಬಿದ್ದು ಹೋಗುವುದಿಲ್ಲ, ಇದು ರೇಣುಕನಿಗೂ ಗೊತ್ತಿದೆ. ಹಾಗಾಗಿಯೇ ಈಗ ರೇಣುಕ ಕಾಂಪ್ರೂಮೈಸ್‌ಗಾಗಿ ಜಯಲಕ್ಷ್ಮಿ ಹತ್ತಿರ ಅಂಗಲಾಚುತ್ತಿದ್ದಾನೆ. ಮೊನ್ನೆ ಜೂನ್ ಒಂದನೇ ತಾರೀಖು ಜಯಲಕ್ಷ್ಮಿಯ ಬರ್ತ್‌ಡೇ ದಿನ. ಹೇಗೋ ಮಾಡಿ ಆಕೆಯ ಹೊಸ ಮೊಬೈಲ್ ನಂಬರ್ ಪತ್ತೆಹಚ್ಚಿ ಫೋನಾಯಿಸಿದ ರೇಣುಕ ರಾಜಿ ಮಾಡಿಕೊಳ್ಳೋಣವೆಂದು ಗೋಗರೆದಿದ್ದಾನೆ. "ನಾವೆಷ್ಟು ಚೆನ್ನಾಗಿದ್ವಿ, ಈಗಲೂ ಹಾಗೇ ಇರೋಣ.... ನನಗೆ ತೊಂದರೆ ಮಾಡಬೇಡ" ಎಂದು ಹಳೇ ಕನ್ನಡ ಸಿನಿಮಾದ ದುರಂತ ನಾಯಕನಂತೆ ಬೇಡಿಕೊಂಡಿದ್ದಾನೆ. ಆದರೆ ಜಯಲಕ್ಷ್ಮಿ ಮನಸ್ಸು ರೇಣುಕನ ಬಗ್ಗೆ ಈಗ ತೀರಾ ಕಹಿಯಾಗಿ ಬಿಟ್ಟಿದೆ. ಆಕೆಗೆ ಬರೀ ರೇಣುಕನ ಜಾತಕ ಮಾತ್ರವಲ್ಲ, ಬಿಜೆಪಿಗಳ ಇನ್ನಷ್ಟು ರಾಸಲೀಲೆಗಳ ವಿಚಾರಗಳೂ ಗೊತ್ತಿದ್ದಂತಿವೆ. ಒಂದು ವೇಳೆ ರೇಣುಕನು ತನ್ನ ಕಿತಾಪತಿಯನ್ನು ನಿಲ್ಲಿಸದೇ ಹೋದರೆ ಇನ್ನಷ್ಟು ಬಾನಗಡಿಗಳು ಹೊರಬಿದ್ದರೂ ಆಶ್ಚರ್ಯವಿಲ್ಲ. ಸದ್ಯಕ್ಕೆ ರೇಣುಕನ ಜುಟ್ಟು, ಶಿವದಾರ ಎರಡೂ ಜಯಲಕ್ಷ್ಮಿ ಕೈಲಿದೆ. ಸೆಕ್ಸ್ ಸಿಡಿಯೊಂದು ಅಂತಿಮ ಬ್ರಹ್ಮಾಸ್ತ್ರದಂತೆ ಆಕೆಯ ಬಳಿ ಇದೆ. ಅದು ಗೊತ್ತಿರುವುದರಿಂದಲೇ ರೇಣುಕ ಈಗಲೂ ಜಯಲಕ್ಷ್ಮಿಗೆ ಫೋನಾಯಿಸಿ "ನನ್ ಬಿಟ್‌ಬಿಡು ಆದರೆ ನನ್ ಕೈ ಬಿಡಬ್ಯಾಡ" ಎಂದು ಗೋಗರೆಯುತ್ತಿದ್ದಾನೆ.

ಈ ಹಾವು ಏಣಿಯಾಟದಲ್ಲಿ ಜಯಲಕ್ಷ್ಮಿಯೇ ಎರಡೂ ಆಗಿರುವುದರಿಂದ ರೇಣುಕನ ಮರ್ಯಾದೆಯನ್ನು ಆ ಭಗವಂತನೇ ಉಳಿಸ್ಬೇಕು [illegible].

ಸಂತ ನಟಿಯೂ, ಬಾಂಬೆ ಹುಡುಗಿಯರೂ

ಕೋ-ಜಾ ಸರ್ಕಾರದ ಸಂಪುಟ ವಿಸ್ತರಣೆ ವೇಳೆಯಲ್ಲೇ ಬೆಂಗಳೂರಿಗೆ ಮುಂಬೈನಿಂದ ಇಬ್ಬರು ಸಿನಿಮಾ ನಟಿಯರು ಬಂದುಹೋಗಿರುವ ವಿಚಾರ ಇದು. ಇವರನ್ನು ಕರೆಸಿದ್ದವನು ಈಗ ಕುಖ್ಯಾತನಾಗಿರುವ ಒಬ್ಬ ಬಿಜೆಪಿ ಶಾಸಕ. ಇವರಲ್ಲಿ ಒಬ್ಬಾಕೆ ಕನ್ನಡ ಸಿನಿಮಾ ಪ್ರೇಕ್ಷಕರಿಗೂ ಗೊತ್ತಿರುವಾಕೆ, ಈಗ ಓಡುತ್ತಿರುವ ರೌಡಿಸಂ ಕತೆಯ ಸಿನಿಮಾದಲ್ಲಿ ನಟಿಸಿದ್ದಾಳೆ. ಹೊರನೋಟಕ್ಕೆ 'ಸಂತ'ಳ ತರ ಕಾಣಿಸುತ್ತಾಳೆ. ಆದರೆ ಅನಿಲ್ ಲಾಡ್ ಸೇರಿದಂತೆ ಅನೇಕ ರಾಜಕಾರಣಿ, ಉದ್ದಿಮೆದಾರರ ಗುಂಪಿನಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಾಳೆ. ಕಾಸು ಕೊಟ್ಟರೆ ಯಾರ ಮುಖಕ್ಕೆ ಬೇಕಾದರೂ 'ಆರತಿ' ಎತ್ತಿ ಪೂಜೆ ಮಾಡಲು ತಯಾರಿರುತ್ತಾಳೆ.



ನಟಿಯಾದವಳಿಗೆ ಬಿಜೆಪಿ ಶಾಸಕರೊಂದಿಗೇನು ಕೆಲಸ ಎಂದರೆ ಅಸಲು ಬಿಜೆಪಿಗಳೇ ಮುಸಿಮುಸಿ ನಗುತ್ತವೆ. ಬಿಜಾಪುರದ ಶಾಸಕನೊಬ್ಬನನ್ನು ಮಂತ್ರಿಯಾಗಿಸುವ ಸರ್ಕಸ್‌ನಲ್ಲಿ ತೊಡಗಿದ್ದ ಕೆಲವರು ಈ ಸುಂದರಾಂಗಿಯನ್ನು 'ಮೋಹಿನಿ ಅಸ್ತ್ರ'ದಂತೆ ಬಳಸಿದರೆಂಬ ರೂಮರ್ರೂ ಇದೆ. ಪರಮ ಪರಿಶುದ್ಧ ಪವಿತ್ರ ಪಕ್ಷವಾದ ಬಿಜೆಪಿಯೊಳಗೂ ಇಂಥ ವಶೀಕರಣ ವಿದ್ಯೆಯ ಪ್ರಯೋಗವಾಗುತ್ತಿದ್ದುದನ್ನು ನೋಡಿ ನೋಡಿ ರೋಸಿ ಹೋದ ಶಾಸಕಿ ಶೋಭಾ ಕರಂದ್ಲಾಜೆ 'ಇದೆಲ್ಲಾ ತಪ್ಪು, ನೀವು ಹೀಗೆ ಮಾಡಬಾರದು' ಎಂದೂ ಜಗಳವಾಡಿದ್ದುಂಟು. ತನ್ನ 'ಪಾರ್ಟಿ'ಯ ಮೇಲೆ ಹೀಗೆ ಬಾಂಬೆ ಹುಡುಗಿಯರ ಪ್ರಭಾವ ಬೀಳುವುದನ್ನು ಸಹಿಸದೆ ಶೋಭಾ ಪ್ರತಿಭಟಿಸಿದ್ದು ನಿಜವಾಗಿದ್ದರೆ ಅದೊಂದು ಮೆಚ್ಚತಕ್ಕ ವಿಷಯ. ಅಷ್ಟೇ ಅಲ್ಲ, ಜಯಲಕ್ಷ್ಮಿ ಹಗರಣದಲ್ಲಿ ಸಿಕ್ಕಿಬಿದ್ದಿರುವ ರೇಣುಕಾಚಾರ್ಯನ ತಲೆ ಕಂಡರೂ ಈಗ ಶೋಭಾ ಕರಂದ್ಲಾಜೆಗೆ ಆಗಿಬರುವುದಿಲ್ಲ. ರೇಣುಕ ಯಡಿಯೂರಪ್ಪನವರ ಹತ್ತಿರ ತುಂಬಾ ಕ್ಲೋಸ್ ಆಗಿರುವುದು ಅಷ್ಟು ಒಳ್ಳೆಯದಲ್ಲ, ಮುಂದೆ ತೊಂದರೆಯಾಗಬಹುದೆಂಬ ಕಾಳಜಿಯೂ ಆಕೆಗಿದೆ.

ತನ್ನ 'ಪಾರ್ಟಿ' ಬಗ್ಗೆ ಶೋಭಾಗಿರುವಷ್ಟೇ ಕಾಳಜಿ ರೇಣುಕಚಾರ್ಯನಿಗೂ ಇದ್ದಿದ್ದರೆ ಇಷ್ಟೆಲ್ಲಾ ರಂಪಾಟಗಳೇ ಆಗುತ್ತಿರಲಿಲ್ಲವೇನೋ. ಜೊತೆಗೆ ಈಗ ಯಡ್ಡಿಯ ಇನ್ನಿಬ್ಬರು ಶಾಸಕ ಶಿಷ್ಯರ ಹಗರಣಗಳು ಬೇರೆ ಹೊರ ಬೀಳುತ್ತಿದೆ. ಬಿಜೆಪಿಗಳ 'ರಾಸಲೀಲೆ' ಎಂಬ ಧಾರಾವಾಹಿಗೆ ಕೊನೆ ಇದ್ದಂತಿಲ್ಲ.

ಕೆಂಗೇರಿ-ಜಾ ಸರ್ಕಾರದ ಶಿಕ್ಷಣ ಮಂತ್ರಿ ಬಸವರಾಜ್ ಹೊರಟ್ಟಿ ಬೆಂಗಳೂರಿನಲ್ಲಿ ಕುಳಿತು ಶಿಕ್ಷಣ ಸುಧಾರಣೆಯ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಬಿಗಿಯುತ್ತಲೇ ಇದ್ದಾರೆ. ಆಗೊಂದು ಈಗೊಂದು ಪತ್ರಿಕಾಗೋಷ್ಠಿ ಮಾಡಿ ತನ್ನ ಸಾಧನೆಯ ಬಗ್ಗೆ ಪತ್ರಕರ್ತರೆದುರು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಒಂದು ಬಾರಿ ಅವರ ತವರು ಜಿಲ್ಲೆಗೆ ಬಂದು ನೋಡಿದರೆ ಹೊರಟ್ಟಿಯ ಶಿಕ್ಷಣ ಸುಧಾರಣೆಯ ಅಸಲಿ ಚಿತ್ರಣ ಗೊತ್ತಾಗುತ್ತದೆ: ಶಿಕ್ಷಣ ಎಂಬುದು ಬೃಹತ್ ಷೋ ರೂಮ್‌ನಲ್ಲಿಯ ದುಬಾರಿ ವಸ್ತುವಂತೆ ಮಾರಾಟವಾಗುತ್ತಿರುವುದು ಮತ್ತು ಹೊರಟ್ಟಿಯೇ ಅದಕ್ಕೆ ಶಿಕ್ಷಣದ ವರ್ತಕನಂತೆ ಬೆಂಬಲವಾಗಿ ನಿಂತಿರುವುದು ಕಣ್ಣಿಗೆ ರಾಚುತ್ತದೆ.


ವಸಂತ ಹೊರಟ್ಟಿ

ಜೂನ್ ತಿಂಗಳು ಖಾಸಗಿ ಶಾಲಾ-ಕಾಲೇಜುಗಳಿಗೆ ಸುಗ್ಗಿಯ ಕಾಲ. ಆದರೆ ಬಡ ಮತ್ತು ಕೆಳ ಮಧ್ಯಮ ವರ್ಗದ ಜನರಿಗೆ ಒಂದು ರೀತಿಯ ಆತಂಕದ ಕಾಲ. ಫೀಸು, ಡೊನೇಷನ್, ಅದು-ಇದು ಎಂದು ಜನರನ್ನು ಹಿಂಡಿ ಹಿಪ್ಪೆಮಾಡಿ ಭಾರಿ ದುಡ್ಡು ಕಮಾಯಿಸುವ ಉತ್ಸಾಹದಲ್ಲಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳು ಇದ್ದರೆ, ತಮ್ಮ ಮಕ್ಕಳ ಶಿಕ್ಷಣಕ್ಕಾಗಿ, ಅವರ ಭವಿಷ್ಯಕ್ಕಾಗಿ ಹಣ ಹೊಂದಿಸಲಾಗದೇ ಮಕ್ಕಳ ಬದುಕು ಕಣ್ಣೆದುರಿಗೇ ಕಮರುತ್ತಿರುವುದನ್ನು ನೋಡುವ ದೌರ್ಭಾಗ್ಯ ಬಡ ಮತ್ತು ಮಧ್ಯಮ ವರ್ಗದ ಜನರದ್ದು. ಇಂತಹ ಒಂದು ಕ್ರೌರ್ಯಕ್ಕೆ ಸರ್ಕಾರ, ಮಂತ್ರಿಗಳೂ ಹಾಗೂ ವಿದ್ಯಾರ್ಥಿಪರ ಎಂಬ ಪೋಸು ನೀಡುವ ಕೆಲವು ವಿದ್ಯಾರ್ಥಿ ಸಂಘಟನೆಗಳೂ ಬೆಂಬಲವಾಗಿ ನಿಂತಿರುತ್ತಾರೆ ಎಂದರೆ ಭಾರತದ ಪ್ರಜಾತಂತ್ರದ ಸ್ಥಿತಿ ಎಲ್ಲಿಗೆ ಬಂದಿದೆ ಎಂದು ನೀವೇ ಯೋಚಿಸಿ. ರಾಜ್ಯದ ಶಿಕ್ಷಣ ಸಚಿವ ಬಸವರಾಜ್ ಹೊರಟ್ಟಿಯವರ ತವರು ಜಿಲ್ಲೆ ಧಾರವಾಡ ದೇಶದಾದ್ಯಂತ ನಡೆಯುತ್ತಿರುವ ಇಂತಹ ಕ್ರೌರ್ಯಗಳಿಗೊಂದು ಉಜ್ವಲ ಉದಾಹರಣೆ.

ಹುಬ್ಬಳ್ಳಿ ಮತ್ತು ಧಾರವಾಡ ಅವಳಿನಗರಗಳಲ್ಲಿ ಹಣ ಬಿಡುವ ಮರಗಳಂತೆ ಎಲ್ಲೆಂದರಲ್ಲಿ ತಲೆ ಎತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಹುತೇಕವು ವಿವಿಧ ರಾಜಕಾರಣಿಗಳ ಇಲ್ಲವೇ ಮಠ ಮಾನ್ಯಗಳ ಅಥವಾ ಕ್ರಿಶ್ಚಿಯನ್ ಮಿಷನರಿಗಳ ಒಡೆತನಕ್ಕೆ ಸೇರಿವೆ. ಇವುಗಳಲ್ಲೆಲ್ಲಾ ಲಿಂಗಾಯತರೇ ನಡೆಸುವ ಕರ್ನಾಟಕ ಲಿಂಗಾಯತ ಎಜುಕೇಶನ್ (ಕೆಎಲ್‌ಇ) ಎಂಬ ವಿದ್ಯಾಸಂಸ್ಥೆಯದೇ ಸಿಂಹಪಾಲು. ಈ ಸಂಸ್ಥೆಯ ಅಧ್ಯಕ್ಷ ಕೋರೆ ಮತ್ತು ಹುಬ್ಬಳ್ಳಿಯ ನಿರ್ದೇಶಕ ಶಂಕರಣ್ಣ ಮುನವಳ್ಳಿ ಎಂಬ ಕಾಂಗ್ರೆಸ್ ಕುಳಗಳೇ ಇಲ್ಲಿ ಶಿಕ್ಷಣ ಮಾರಾಟ ಎಂಬ ವ್ಯವಸ್ಥಿತ ದಂಧೆ ಶುರುವಿಟ್ಟುಕೊಂಡು ಬಡವರನ್ನು ಸುಲಿಯುತ್ತಾ ಬಲಿತು ಹೋಗಿದ್ದಾರೆ.


ಇದರ ನಂತರದ ಸ್ಥಾನ ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ಸೇರುತ್ತದೆ. ಇಂತಹ ಬಿಜಿನೆಸ್‌ಗೆ ತಾನೇನೂ ಕಡಿಮೆ ಇಲ್ಲವೆಂಬಂತೆ ಕಾಂಗ್ರೆಸ್ ಶಾಸಕ ಹೊನ್ನಳ್ಳಿ ಅಂಜುಮನ್ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಇವರೆಲ್ಲಾ ಹೀಗೆ ಕಣ್ಣೆದುರಿಗೇ ಭಾರಿ ಹಣ ಸಂಪಾದಿಸುತ್ತಿರುವಾಗ ಶಿಕ್ಷಣ ಸಚಿವ ಹೊರಟ್ಟಿಯ ಕುಲಬಾಂಧವರು ಸುಮ್ಮನಿರುತ್ತಾರೆಯೇ? ಅವರ ಸಂಬಂಧಿಗಳು ಇತ್ತೀಚೆಗೆ ಚೇತನ ಕಾಲೇಜು ಎಂಬ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿಕೊಂಡರೆ, ಖುದ್ದು ಸಚಿವರ ಮಗ ಆಕ್ಸ್‌ಫರ್ಡ್ ವಿದ್ಯಾಸಂಸ್ಥೆಗೆ ಒಡೆಯನಾಗಿದ್ದಾನೆ.

ಇನ್ನು ಧಾರವಾಡದ ಕೆಸಿಡಿ, ಕಿಟಲ್ ಕಾಲೇಜು, ಬಾಸೆಲ್ ಮಿಷನ್‌ನಂತಹ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರು ಕ್ರಿಶ್ಚಿಯನ್ ಮಿಷನರಿಗಳು. ಹಾಗೆಯೇ, ಎಸ್‌ಡಿಎಮ್, ಜೆಎಸ್‌ಎಸ್ ವಿದ್ಯಾಸಂಸ್ಥೆಗಳನ್ನು ಹಿಡಿತದಲ್ಲಿಟ್ಟುಕೊಂಡಿರುವವರು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು. ಇವರೆಲ್ಲರಿಗಿಂತ ತಾನೇನು ಕಡಿಮೆ ಇಲ್ಲ ಎಂಬಂತೆ ರಾಷ್ಟ್ರೋತ್ಥಾನ ಎಂಬ ಆರ್‌ಎಸ್‌ಎಸ್ ಗುರುಕುಲ ಕೂಡ ಶಿಕ್ಷಣ ಮಾರಾಟ ದಂಧೆಯಲ್ಲಿ ಭಾರಿ ಕಮಾಯಿಸುತ್ತಿದೆ. ಒಟ್ಟಿನಲ್ಲಿ ಬಡವರನ್ನು ಹಿಂಡಿ ದಪ್ಪಗಾಗುವ ಈ ಕಾರ್ಯದಲ್ಲಿ ಜಾತಿ, ಕುಲ, ಧರ್ಮ, ಪಕ್ಷ ಭೇದಗಳನ್ನು ಮರೆತು ಸರ್ವರೂ ಒಗ್ಗಟ್ಟಾಗಿರುವುದನ್ನು ನಾವಿಲ್ಲಿ ನೋಡಬಹುದು.

ಶಾಲಾ-ಕಾಲೇಜುಗಳು ವ್ಯಾಪಾರಿ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿರುವುದರಲ್ಲಿ ರಾಜಕಾರಣಿಗಳ ಪಾತ್ರ ಎದ್ದು ಕಾಣುತ್ತಿದೆ ಎಂದು ಹೈಕೋರ್ಟು ಮೇ 30ರಂದು ಖಾರವಾಗಿಯೇ ಹೇಳಿದೆ. ರಾಜಕಾರಣಿಗಳು ಶಾಲೆಗಳನ್ನು ನಡೆಸುತ್ತಿರುವುದರಿಂದ ಪರಿಸ್ಥಿತಿ ಹದ್ದುಮೀರಿ ನಿಲ್ಲುತ್ತಿದೆ ಎಂದು ನ್ಯಾಯಮೂರ್ತಿ ರಾಮಮೋಹನ್ ರೆಡ್ಡಿ ಅವರು ಕರ್ನಾಟಕ ರಾಜ್ಯ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಮಧ್ಯಂತರ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಹೇಳಿದ್ದಾರೆ. ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ನಡೆಯುತ್ತಿರುವ ಡೊನೇಷನ್ ಹಾವಳಿಯನ್ನು ನೋಡಿದರೆ ಹೈಕೋರ್ಟಿನ ಈ ಮಾತುಗಳು ಬಿಳಿಹಾಳೆಯಷ್ಟು ಸತ್ಯವಾಗಿವೆ ಎನಿಸದಿರದು.

ಎಬಿವಿಪಿ ಗಿಮಿಕ್


ಹುಬ್ಬಳ್ಳಿ ಮತ್ತು ಧಾರವಾಡ ಅವಳಿ ನಗರಗಳಲ್ಲಿ ಒಂದು ಪೆಡಂಭೂತವಾಗಿ ಬೆಳೆದಿರುವ ಡೊನೇಷನ್ ಹಾವಳಿಯ ವಿರುದ್ಧ ಹೋರಾಟ ನಡೆಸುತ್ತೇನೆಂದು ಎಬಿವಿಪಿ ಎಂಬ ಚೆಡ್ಡಿ ಸಂಘಟನೆ ಪೋಜು ನೀಡುತ್ತಾ ಓಡಾಡಿತು; ಗುಜರಾತ್ ಸರ್ಕಾರ ತನ್ನ ರಾಜ್ಯದಲ್ಲಿ ನಿಗದಿ ಮಾಡಿದ ಬೋಧನಾ ಶುಲ್ಕದ ನಾಲ್ಕು ಪಟ್ಟನ್ನು ಇಲ್ಲಿ ಕರ್ನಾಟಕದಲ್ಲಿ ವಸೂಲಿ ಮಾಡಲಾಗುತ್ತಿದೆ ಎಂದು ಅಂಕಿ ಅಂಶ ನೀಡಿತು; ಬೋಧನಾ ಶುಲ್ಕವಲ್ಲದೇ ಡೊನೇಷನ್ ಹೆಸರಿನಲ್ಲಿ ಬಡ ವಿದ್ಯಾರ್ಥಿಗಳನ್ನು ಶೋಷಿಸಲಾಗುತ್ತಿದೆ ಎಂದು ಹುಯಿಲೆಬ್ಬಿಸಿತು. ಡೊನೇಷನ್ ಪೀಕಿಸುವ ಅಂತಹ ಶಾಲಾ ಕಾಲೇಜುಗಳ ಪಟ್ಟಿಯೊಂದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿತು; ಇದನ್ನು ತಪ್ಪಿಸುವುದಕ್ಕಾಗಿ "ಓಡಾಡಿಸಿ ಹೊಡೆವ ಆಂದೋಲನ" ಎಂಬ ಚಳವಳಿಯನ್ನು ಪ್ರಾರಂಭಿಸುವುದಾಗಿ ಮೇ ತಿಂಗಳ ಎರಡನೇ ವಾರದಲ್ಲಿ ಭಾರಿ ಭಾಷಣ ಬಿಗಿಯಿತು. ಆದರೆ ಡೊನೇಷನ್ ಪೀಕಿಸಿ ಬಡವರನ್ನು ಹಿಂಡುವಲ್ಲಿ ನಿಷ್ಣಾತವಾಗಿರುವ ಚೆಡ್ಡಿ ಸಂಸ್ಥೆ ಆರ್‌ಎಸ್‌ಎಸ್‌ನ ಗುರುಕುಲವನ್ನು ತಾನು ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಸೇರಿಸಿರಲಿಲ್ಲ! ಇದರಿಂದಲೇ ಅರ್ಥವಾಗುತ್ತದೆ, ಎಬಿವಿಪಿ ನಿಂತಿರುವುದು ಬಡ ವಿದ್ಯಾರ್ಥಿಗಳ ಪರವಾಗಿಯೋ ಅಥವ ಬಡ ವಿದ್ಯಾರ್ಥಿಗಳನ್ನು ಶೋಷಿಸುವ ಆರ್‌ಎಸ್‌ಎಸ್‌ನ ಶಿಕ್ಷಣ ಸಂಸ್ಥೆಯ ಪರವಾಗಿಯೋ ಎಂದು. ಅದು ಹೋಗಲಿ ಬಿಡಿ. ಉಪ್ಪು ತಿಂದ ಮನೆಗೆ ಅದು ಹೇಗೆ ದ್ರೋಹ ಬಗೆದೀತು? ಆದರೆ ಉಳಿದ ಶಾಲಾ ಕಾಲೇಜುಗಳ ವಿರುದ್ಧವಾದರೂ ಅದು 'ಓಡಾಡಿಸಿ ಹೊಡೆವ ಆಂದೋಲನ'ವನ್ನು ಮಾಡಿತೆ? ಖಂಡಿತಾ ಇಲ್ಲ. ಯಾರನ್ನೂ ಓಡಾಡಿಸಿ ಹೊಡೆಯದೇ ವಿದ್ಯಾರ್ಥಿಗಳ ಅಡ್ಮಿಶನ್ ಪ್ರಾರಂಭವಾಗುವ ಮೊದಲೇ ಅವರ ಓಡಾಡಿಸಿ ಹೊಡೆಯುವ ನಾಟಕವೂ ಮುಗಿದುಹೋಗಿತ್ತು. ಯಾವ ಯಾವ ಕಾಲೇಜುಗಳ ಆಡಳಿತ ಮಂಡಳಿಯವರು ಎಬಿವಿಪಿಯ ನಾಯಕರಿಗೆ ಎಷ್ಟೆಷ್ಟು ಪ್ರಸಾದ ಕೊಟ್ಟರೋ ಗೊತ್ತಿಲ್ಲ, ಇದೇನಾದರೂ ಬೆಳಕಿಗೆ ಬಂದರೆ ಎಬಿವಿಪಿಯ ಕಾರ್ಯಕರ್ತರೇ ಅವರ ನಾಯಕರನ್ನು ಓಡಾಡಿಸಿಕೊಂಡು ಹೊಡೆಯುವುದರಲ್ಲಿ ಅಚ್ಚರಿ ಇಲ್ಲ.




ಹುಬ್ಬಳ್ಳಿ

ಶಿಕ್ಷಣ ಮಂತ್ರಿಯ ತವರಿನಲ್ಲಿ ಶಿಕ್ಷಣದ ಮಾರಾಟ!


ಹೊರಟ್ಟಿಯ ಆಕ್ಸ್‌ಫರ್ಡ್ ಕಾಲೇಜು


ರಾಜಾ ದೇಸಾಯಿ


ಕೌತಾಲ್


ಶೇಖರಣ್ಣ

ವಾಸ್ತವದಲ್ಲಿ ಎಬಿವಿಪಿಯ ಹೋರಾಟವಿದ್ದುದು ಇಡೀ ಡೊನೇಷನ್ ಎಂಬ ಸಾಮಾಜಿಕ ಪಿಡುಗನ್ನು ದೂರ ಮಾಡಬೇಕೆಂಬ ಮಾನವೀಯ ಕಾಳಜಿಗೋಸ್ಕ[illegible] ಅಲ್ಲ. ಅವರಿಗೆ ಬೇಕಾಗಿದ್ದೇನೆಂದರೆ ಶಿಕ್ಷಣ ಸಚಿ[illegible] ಹೊರಟ್ಟಿಯ ಸಂಬಂಧಿಗಳು ನಡೆಸುವ ಚೇತನ ಕಾಲೇಜು ಮತ್ತು ಅವರ ಮಗ ವಸಂತ ಹೊರಟ್ಟಿ ಸಾರಥ[illegible] ವಹಿಸಿಕೊಂಡಿರುವ ಆಕ್ಸ್‌ಫರ್ಡ್ ಶಾಲೆಗಳಿಗೆ ಒಂದಿಷ್ಟು ತೊಂದರೆ ಕೊಡಬೇಕಿತ್ತಷ್ಟೆ. ಆ ಮೂಲಕ ಜೆಡಿ(ಎಸ್)[illegible] ಒಂದಿಷ್ಟು ಕಳಂಕ ತಂದು ತನ್ನಂತೆಯೇ ಚೆಡ್ಡಿ ತೊಟ್ಟು[illegible] ಕೊಂಡಿರುವ ಬಜೆಪಿಯ ಸಾಮಾಜಿಕ ತಳಹದಿಯನ್ನು ವಿಸ್ತರಿಸಬೇಕು ಎಂಬುದು. ಆದಕ್ಕಾಗಿಯೇ ಅವರ[illegible] ಚೆಡ್ಡಿ ಸಂಸ್ಥೆಯಾದ ರಾಷ್ಟ್ರೋತ್ಥಾನ ಗುರುಕುಲ ವಿದ್ಯಾ[illegible] ಸಂಸ್ಥೆಯು ವರ್ಷಕ್ಕೆ 65000 ರೂಪಾಯಿಗಳನ್ನು ಬಡಜನರಿಂದ ಪೀಕಿಸುತ್ತಿದೆಯಾದರೂ ಅದರ ಬ[illegible] ತುಟಪಿಟಕ್ಕೆನ್ನಲಿಲ್ಲ. ಹಾಗೆಯೇ ಕೆಎಲ್‌ಇ ಸಂಸ್ಥೆ ನಡೆಸು[illegible] ಪಿಸಿ ಜಾಬೀನ್ ಹಾಗೂ ಕೊತಂಬ್ರಿ ಕಾಲೇಜ್‌ಗಳು[illegible] ಮೂರು ಸಾವಿರ ಮಠ ನಡೆಸುವ ಮಹಿಳಾ ಕಾಲೇಜು[illegible]ಗಳು ಹಾಗೂ ರಾಜಾ ದೇಸಾಯಿ ನಡೆಸುವ ರೋಟ[illegible] ಪಿಯುಸಿ ಕಾಲೇಜ್‌ಗಳು ಕೂಡ ಡೊನೇಷನ್ ಹಾವಳಿಯ[illegible] ದೊಡ್ಡ ಪಿಡುಗುಗಳಾಗಿದ್ದರೂ ಅವುಗಳ ವಿರುದ್ಧವ[illegible] ಎಬಿವಿಪಿ ದನಿ ಎತ್ತದಿರುವುದಕ್ಕೆ ತನ್ನದೇ [illegible] ರಾಜಕೀಯ ಕಾರಣಗಳ ಜೊತೆಗೆ ಅವರೆಲ್ಲರ ಪ್ರಸಾದವ[illegible] ಕಾರಣವಾಗಿಲ್ಲದಿಲ್ಲ ಎಂಬುದು ಅವಳಿ ನಗರಗ[illegible] ವಿದ್ಯಾರ್ಥಿಗಳ ಲೆಕ್ಕಾಚಾರ.

ನಿಜಹೇಳಬೇಕೆಂದರೆ ಎಬಿವಿಪಿ ನಾಯಕರು ಎ[illegible] ಬಿದ್ದು ಬಿಸ್ಕೆಟ್ ತಿಂದು, ಚಹಾ-ಕಾಫಿ ಕುಡಿಯುವುದ[illegible] ಕೆಎಲ್‌ಇ ಸಂಸ್ಥೆಯ ಶಂಕರಣ್ಣ ಮನವಳ್ಳಿಯ ಜೊತೆಯ[illegible]ಲ್ಲಿಯೇ. ಹೀಗಾಗಿ ಬಿಸ್ಕೆಟ್ ತಿಂದ ಮನೆಗೆ ದ್ರೋ[illegible] ಬಗೆಯುವುದೆಂತು ಎಂದು ಕೆಎಲ್‌ಇ ಸಂಸ್ಥೆಯ ಡೊನೇಷ[illegible] ಹಾವಳಿಯ ವಿರುದ್ಧ ಎಬಿವಿಪಿ ನಾಯಕರು ಚಕಾರವೆತ್ತು[illegible] ಅಲ್ಲದೇ ಈ ನಾಯಕರಿಗೆ ಕೃತಜ್ಞತೆ ಸಲ್ಲಿಸುವುದಕೊ[illegible] ಏನೋ ಈ ಸಂಸ್ಥೆಯೂ ಕೂಡ ತಾನು ನಡೆಸುವ ಎ[illegible] ಕಾಲೇಜುಗಳಲ್ಲಿ ಎರಡೆರಡು ಸೀಟುಗಳನ್ನು ಎಬಿವಿ[illegible] ನಾಯಕರಿಗೆ ಕೊಟ್ಟುಬಿಟ್ಟಿದೆ. ಅದನ್ನು ಅವರು ತಮ[illegible] ಬೇಕಾದವರಿಗೆ ಮಾರಿಕೊಂಡಿದ್ದಾರೆ.

ಇದೇ ಮಾದರಿಯನ್ನು ಎಬಿವಿಪಿ ನಾಯಕ[illegible] ಮೂರು ಸಾವಿರ ಮಠದ ಶಾಲಾ ಕಾಲೇಜುಗಳಲ್ಲಿಯ[illegible] ಅನುಸರಿಸಿ ಡೀಲ್ ಮಾಡಿಕೊಂಡಿದ್ದಾರೆ ಎಂಬ ಕೂ[illegible] ವಿದ್ಯಾರ್ಥಿಗಳಿಂದ ವ್ಯಾಪಕವಾಗಿ ಕೇಳಿಬರುತ್ತಿದೆ.

ಒಂದೆಡೆ ಪಕ್ಕಾ ರಾಜಕೀಯ ಪಕ್ಷದಂತೆ ಪಕ್ಷರಾ[illegible]ಕೀಯ ಮಾಡುವ ಹಾಗೂ ಇನ್ನೊಂದೆಡೆ ಪ[illegible] ಮಾರ್ವಾಡಿಯಂತೆ ಡೀಲ್ ಮಾಡುವ ಎಬಿವಿಪಿ [illegible] ಒಂದು ಬಡವಿದ್ಯಾರ್ಥಿ ಪರ ಸಂಘಟನೆಯೆಂಬ ಮು[illegible]ವಾಡ ಹಾಕಿಕೊಂಡು ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿ[illegible]ವುದು ಮಾತ್ರ ದುರಂತ.

ಎಬಿವಿಪಿಯ ಇಂತಹ ರಾಜಕೋರತನಕ್ಕೆ ಒಂದ[illegible] ಇತಿಹಾಸವೇ ಇದೆ. ಆದರೆ ತಾವು ಎಡ ಚಿಂತನೆ[illegible] ಸಿದ್ಧಾಂತವನ್ನಿಟ್ಟುಕೊಂಡಿರುವ ವಿದ್ಯಾರ್ಥಿ ಸಂಘಟ[illegible]ಗಳೆಂದು ಬೋರ್ಡು ತಗಲು ಹಾಕಿಕೊಂಡಿರು[illegible] AISF, SFI, AIDSU ಇಂತಹ ಸಂಘಟನೆಗಳಿಗೆ[illegible]

ಮೂರನೇ ಬಾರಿಗೆ ಮಠ ಬಿಟ್ಟ ನಂದೀಶ್ವರ ಸ್ವಾಮಿ

ವೃಷಭಗಿರಿ ಮತ್ತು ಪುಷ್ಪಗಿರಿ ಮಹಾಸಂಸ್ಥಾನದ ತಾಧೀಶ, ದಾವಣಗೆರೆ ಮತ್ತು ಹಾಸನ ಜಿಲ್ಲೆಗಳಲ್ಲಿನ ಟು ಮಠಗಳ ಮಠಾಧಿಪತಿ, ನೊಣಬ ಲಿಂಗಾಯತರ ಕ್ಯಕ ಜಗದ್ಗುರು ಶ್ರೀ ನಂದೀಶ್ವರ ಶಿವಾಚಾರ್ಯ ಮಿಗಳು ಸತತವಾಗಿ ಮೂರನೇ ಬಾರಿಗೆ ಮಠ ಟ್ಟು ಹೊರಟುಹೋಗುವಲ್ಲಿ ಯಶಸ್ವಿಯಾಗಿದ್ದಾರೆ. ರು ತಿಂಗಳುಗಳಿಂದ ನಿಗೂಢವಾಗಿ ನಾಪತ್ತೆಯಾಗಿದ್ದ ಂದೀಶ್ವರ ಸ್ವಾಮಿಗಳು ಕಳೆದವಾರ ಇದ್ದಕ್ಕಿದ್ದಂತೆ ತ್ಯಕ್ಷರಾಗಿ ಮಠದ ಅನುಯಾಯಿಗಳನ್ನು ಚಕಿತಗೊಳಿ ಸ್ದರು. ಆದರೆ ಹಾಗೆ ಪ್ರತ್ಯಕ್ಷರಾದವರು ಮತ್ತೆ ಪೀಠವನ್ನು ಟ್ಟುಹೊರಡುವುದಾಗಿ ಘೋಷಿಸಿ ಮತ್ತೊಮ್ಮೆ ತಮ್ಮ ಠದ ಭಕ್ತರಲ್ಲಿ ಗೊಂದಲವನ್ನು ಸೃಷ್ಟಿಸಿದ್ದಾರೆ.

ಹೀಗೆ ಮಠ ಬಿಟ್ಟು ಹೋಗುವುದು ನಂದೀಶ್ವರ ಮಿಗಳಿಗೆ ಹೊಸದೇನಲ್ಲ. ಈಗಾಗಲೇ ಎರಡು ರಿ ಅವರು ಯಾರಿಗೂ ಹೇಳದೆ, ಕೇಳದೆ ಮಠ ಟ್ಟು ಹೊರಟುಹೋಗಿದ್ದರು. ಆದರೆ ಈ ಬಾರಿಯ ತ್ಯಾಸ ಯಾವುದೆಂದರೆ, ಅವರು ತಮ್ಮ ಎಲ್ಲ ಭಕ್ತರನ್ನು ಸಿ, ಅವರೆಲ್ಲರಿಗೂ ತಾವು ಮತ್ತೆ ಹೋಗುತ್ತಿರುವ ಗ್ಗೆ ತಿಳಿಸಿ, ತಮ್ಮನ್ನು ತಡೆಯಬಾರ ದು ಆಗ್ರಹಿಸಿ ಮಠದಿಂದ ಹೊರ ಡೆದಿದ್ದಾರಲ್ಲದೆ, ಬೆಂಗಳೂರಿಗೆ ದು ದೆಹಲಿಗೆ ವಿಮಾನವನ್ನೇರಿ ೂರಟೇಹೋಗಿದ್ದಾರೆ.

ದಾವಣಗೆರೆ

ಮೊನ್ನೆ ಮಠ ಬಿಟ್ಟು ಹೋಗುವ ತಮ್ಮ ನಿರ್ಧಾರದ ಗ್ಗೆ ಸಮಜಾಯಿಷಿ ನೀಡುತ್ತಾ ತಮ್ಮ ಮನಃಶಾಂತಿಗೆ ತ್ತರ ಭಾರತಕ್ಕೆ ಹೋಗುತ್ತಿರುವುದಾಗಿ ಸ್ವಾಮಿಗಳು ಿಸಿದ್ದಾರೆ. ಹಾಗೆಯೇ ತಮ್ಮ ಈ ನಿರ್ಧಾರಕ್ಕೆ ಾರನ್ನೂ ದೂಷಿಸಬಾರದೆಂದೂ, ಅದಕ್ಕೆ ಮಠದ ಡಳಿತ ಮಂಡಳಿ ಕಾರಣವಲ್ಲವೆಂದೂ ಸ್ವಾಮಿಗಳು ಮ್ಮ ಭಕ್ತರ ಮುಂದೆ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಮಂಡಳಿಯಿಂದಾಗಿಯೇ ಮಠ ಅಭಿವೃದ್ಧಿಯಾಗಿದೆ ಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆದರೆ ಸ್ವಾಮಿಗಳ ಅಸಮಾಧಾನಕ್ಕೆ ಮಠದ ವಹಾರಗಳನ್ನು ನೋಡಿಕೊಳ್ಳುತ್ತಿದ್ದ ಮಂಡಳಿಯೇ ರಣ ಎಂಬುದು ಈಗ ಜಗಜ್ಜಾಹೀರುವ ವಿಚಾರ. ಲ್ಲವಾದರೆ ಸ್ವತಃ ಸ್ವಾಮಿಗಳೇ ಏಕೆ ಮೂರು ಬಾರಿ ಠವನ್ನು ಬಿಟ್ಟು ಹೋಗುತ್ತಿದ್ದರು? ತಮ್ಮ ಮನಃಶಾಂತಿಗೆ ೂರದ ಉತ್ತರ ಭಾರತಕ್ಕೆ ಹೋಗುವುದೆಂದು ನಿರ್ಧರಿ ದರು? ಈ ಪ್ರಶ್ನೆಗಳು ಇವತ್ತಿಗೂ ಆ ಮಠದ ಕ್ತರನ್ನು ಕಾಡುತ್ತಿದೆ.

ಅದೆಲ್ಲ ಏನೇ ಇರಲಿ, ನೊಣಬರ ಏಕೈಕ ಠಾಧಿಪತಿಯಾಗಿದ್ದ, ಪ್ರಗತಿಪರ ಚಿಂತನೆ ಳನ್ನು ಹೊಂದಿದ್ದ, ತನ್ನ ಮಠವನ್ನು ಲಿಷ್ಠವಾಗಿ ಬೆಳೆಸಬೇಕೆಂಬ ಆಶಯವನ್ನು ಕ್ತಪಡಿಸಿದ್ದ ನಂದೀಶ್ವರ ಸ್ವಾಮಿಗಳು ಕೊನೆಗೂ ಠವನ್ನು ನಿರ್ದಿಷ್ಟವಾಗಿ ತೊರೆದಿರುವುದಕ್ಕೆ ಠದಲ್ಲಿನ ವ್ಯವಸ್ಥೆಯೇ ಕಾರಣ ಎಂಬುದರ ಗ್ಗೆ ಯಾರಲ್ಲೂ ಅನುಮಾನಗಳು ಉಳಿದಿಲ್ಲ. ಂದರೆ, ಈಗ್ಗೆ ಆರು ತಿಂಗಳ ಹಿಂದೆಯೂ ವರು ಮಠವನ್ನು ಬಿಟ್ಟು ಹೊರಡುವ ುನ್ನ ಮಠದೊಳಗೆ ತಮಗೆ ಹೇಗೆ ಮನ ಂತಿ ಇಲ್ಲ ಎಂದೂ, ತಮಗೆಷ್ಟು ಅಸಮಾ ನವಿದೆ ಎಂದೂ ತಮ್ಮ ಆಪ್ತರ ಮುಂದೆ ಕ್ತಪಡಿಸಿದ್ದರು. "ಗಟ ಇದ್ದರೆ ಮಠ, ಗಟವೇ ಲ್ಲದಿದ್ದರೆ ಮಠವೇಕೆ?" ಎಂದೂ ಅವರು ಜಿಗುಪ್ಸೆ ಕ್ತಪಡಿಸಿದ್ದರು. ಆನಂತರ ಈ ಆಪ್ತರಿಗೂ ಹೇಳದೆ ಠವನ್ನು ತೊರೆದು ಅದೃಶ್ಯರಾಗಿದ್ದರು.


ನಂದೀಶ್ವರ ಸ್ವಾಮಿಗಳು ಹೀಗೆ ನಾಪತ್ತೆಯಾಗಿರು ದರ ಬಗ್ಗೆ ಪ್ರಥಮವಾಗಿ 'ಲಂಕೇಶ್' ವಾರ ಪತ್ರಿಕೆಯೇ ರದಿ ಮಾಡಿತ್ತು, ಮಾತ್ರವಲ್ಲ, ಹೇಗೆ ಯಾರಿಗೂ ಮಿಗಳು ಎಲ್ಲಿದ್ದಾರೆಂಬುದು ಗೊತ್ತಿಲ್ಲ ಎಂದು ರವಾಗಿ ಪ್ರಕಟಿಸಿದ್ದೆವು. ಆ ವರದಿಯಿಂದಾಗಿ ತಮ್ಮ

ಕುಂಭಕರ್ಣ ನಿದ್ದೆಯಿಂದೆದ್ದ ಮಠದ ಆಡಳಿತ ಮಂಡಳಿ ಯವರು ಸ್ವಾಮಿಗಳಿಗಾಗಿ ಹುಡುಕಲಾರಂಭಿಸಿದರು. ಸಭೆಸಮಾರಂಭಗಳನ್ನು ಏರ್ಪಡಿಸಲಾರಂಭಿಸಿದರು; ಸ್ವಾಮಿಗಳನ್ನು ವಾಪಸ್ಸು ಕರೆತರಲು ಪ್ರಯತ್ನಗಳನ್ನು ಮಾಡಿದರು.

ಇದೆಲ್ಲ ನಡೆಯುತ್ತಿರುವಾಗಲೇ ನಂದೀಶ್ವರ ಸ್ವಾಮಿ ಗಳು ಜನಸಾಮಾನ್ಯರಂತೆ ದೆಹಲಿಯಿಂದ ಹಾಸನದವರೆಗೆ ರೈಲಿನಲ್ಲಿ ಬಂದು, ಅಲ್ಲಿಂದ ಬಾಡಿಗೆ ವಾಹನವನ್ನು ಮಾಡಿ ಹೋತನಹಳ್ಳಿ ಮಠದ ಸ್ವಾಮಿಗಳೊಂದಿಗೆ ಇದೇ ಮೇ 23ರಂದು ಯಲಗುಂದ ಮಠದಲ್ಲಿ ಪ್ರತ್ಯಕ್ಷ ರಾದರು.

ಅವರು ಮಠಕ್ಕೆ ಮರಳಿದ ಸುದ್ದಿ ಹಾಸನ ಮತ್ತು ದಾವಣಗೆರೆಯ ನೊಣಬ ಲಿಂಗಾಯತ ಸಮುದಾಯ ದಲ್ಲಿ ಕಾಡ್ಗಿಚ್ಚಿನಂತೆ ಹಬ್ಬ ಅವರನ್ನು ನೋಡುವುದಕ್ಕೆ ಮರುದಿನ ನೂರಾರು ಜನ ಮಠದಲ್ಲಿ ಜಮಾಯಿಸಿದರು. ಆದರೆ ನೆರೆದ ಸಮೂಹದೆದುರು ಸ್ವಾಮೀಜಿಯವರು ತಾವು ಏಕೆ ನಾಪತ್ತೆಯಾಗಿದ್ದೆವು ಎಂದಾಗಲಿ, ಎಲ್ಲಿಗೆ ಹೋಗಿ ದ್ದೆವು ಎಂಬುದಾಗಲಿ, ಆಡಳಿತ ಮಂಡಳಿಯ ಕಾರ್ಯ ವೈಖರಿಯ ವಿರುದ್ಧವಾಗಲಿ ಏನನ್ನೂ ಮಾತನಾಡಲಿಲ್ಲ.

ಇಷ್ಟೆಲ್ಲ ಹೇಳಿದ ಸ್ವಾಮಿಗಳು ಮಠವು ನಿರ್ಮಿಸು ತ್ತಿರುವ ಶಾಲಾ-ಕಾಲೇಜುಗಳ ಕಟ್ಟಡಗಳ ಕಾಮಗಾರಿ ಯನ್ನು ವೀಕ್ಷಿಸಿದ್ದಾರೆ. ನಂತರ ನಂದಿಗುಡಿ ಹಾಗೂ ಉಕ್ಕಡಗಾತ್ರಿಗಳಿಗೆ ಭೇಟಿ ನೀಡಿ ಅಲ್ಲಿ ಒಂದು ಸರಳ ಸಮಾರಂಭವನ್ನು ಏರ್ಪಡಿಸಿ ನೆರೆದ ಭಕ್ತರಿಗೂ ತಾವು ಮನಶ್ಶಾಂತಿಗಾಗಿ ಉತ್ತರ ಭಾರತಕ್ಕೆ ಹೋಗುತ್ತಿರುವುದಾಗಿ ಹೇಳಿದ್ದಾರೆ. ಕೊನೆಗೆ, ಮೇ 29ರಂದು ಸಂಜೆ 4 ಗಂಟೆಗೆ ಸೀದಾ ದೆಹಲಿಗೆ ತೆರಳಿದ್ದಾರೆ.



ಭಕ್ತ ಸಮೂಹದೊಂದಿಗೆ ನಂದೀಶ್ವರ ಸ್ವಾಮೀಜಿ ಮತ್ತು ಸೋಮಶೇಖರ್ ಸ್ವಾಮೀಜಿ

ಆದರೆ, ಈ ಬಾರಿ ಹೊರಡುವ ಮುನ್ನ ತಮ್ಮ ಮೇಲಿನ ಜವಾಬ್ದಾರಿಗಳನ್ನು ಇತರರಿಗೆ ವಹಿಸಿಕೊಟ್ಟಿ ದ್ದಾರೆ. ಅತ್ತಿಕಟ್ಟೆ, ಉಕ್ಕಡಗಾತ್ರಿ, ಹೊಂಕಣ, ನಂದಿಗುಡಿ ಮಠಗಳ ನಿರ್ವಹಣೆಯನ್ನು ಯಲಗುಂದದಲ್ಲಿ ಟೀಚರ್ ಆಗಿ ಕೆಲಸ ನಿರ್ವಹಿಸುತ್ತಿರುವ ತಮ್ಮ ಶಿಷ್ಯ ಮುಮ್ಮಡಿ ಬಸವರಾಜೇಂದ್ರ ಸ್ವಾಮಿಯವರಿಗೆ ವಹಿಸಿಕೊಟ್ಟಿದ್ದಾರೆ. ಅದಕ್ಕೆ ಅನುಕೂಲವಾಗುವಂತೆ ಅಗತ್ಯ ಕಾಗದಪತ್ರಗಳನ್ನು ಹಸ್ತಾಂತರಿಸಿದ್ದಾರೆ. ಅಲ್ಲಿಂದ ಹಾಸನದ ಪುಷ್ಪಗಿರಿ ಮತ್ತು ಯಲಗುಂದ, ಗುಂಡಶೆಟ್ಟಿಹಳ್ಳಿ, ಚಿಲಕೂರು ಮಠಗಳ ವ್ಯವಹಾರವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಗಳನ್ನು ಮತ್ತೊರ್ವ ಕಿರಿಯ ಶಿಷ್ಯ ಸೋಮಶೇಖರ್ ಸ್ವಾಮೀಜಿ ಎಂಬುವವರಿಗೆ ವಹಿಸಿಕೊಟ್ಟಿದ್ದಾರೆ. ಅವರಿಗೆ ಬ್ಯಾಂಕ್‌ಗಳೊಂದಿಗೆ ವ್ಯವಹರಿಸಲು ಅನುಕೂಲವಾಗುವಂತೆ ಅಗತ್ಯ ದಾಖಲೆಗಳನ್ನು ಒದಗಿಸಿದ್ದಾರೆ. ಅಂದೇ ಹೋತನಹಳ್ಳಿ ಸ್ವಾಮೀಜಿಯವರೊಂದಿಗೆ ಬೆಂಗಳೂರಿಗೆ ತೆರಳಿ ಅಲ್ಲಿಂದ ನೇರವಾಗಿ ದೆಹಲಿಗೆ ಹೊರಟು ಹೋಗಿದ್ದಾರೆ.



ನೊಣಬ ಸ್ವಾಮೀಜಿ

ಸ್ವಾಮೀಜಿಯ ಪಲಾಯನ ಸೃಷ್ಟಿಸಿದ ಅನುಮಾನಗಳು

ತಮಗೆ ಮನಶ್ಶಾಂತಿ ತಂದುಕೊಳ್ಳಲು, ಅದಕ್ಕಾಗಿ ಮೌನವ್ರತ ಆಚರಿಸಲು ಉತ್ತರ ಭಾರತಕ್ಕೆ ಹೋಗುವು ದಾಗಿ ಸ್ವಾಮೀಜಿ ಹೇಳಿದಾಗಿನಿಂದ ನೊಣಬ ಲಿಂಗಾಯತ ಭಕ್ತ ಸಮುದಾಯದಲ್ಲಿ ಒಂದು ರೀತಿಯ ಗೊಂದಲದ ವಾತಾವರಣ ಸೃಷ್ಟಿಯಾಗಿದೆ. ಅಂದರೆ ತಾವೇ ಕಟ್ಟಿದ ಮಠದಲ್ಲಿ ತಮಗೆ ಮಾನಸಿಕ ನೆಮ್ಮದಿ ಇಲ್ಲವೆಂದಾ ಯಿತು. ಅಥವಾ ತಮ್ಮ ಮಾನಸಿಕ ಶಾಂತಿ ಮತ್ತು ನೆಮ್ಮದಿಯನ್ನು ಹಾಳುಮಾಡುವಂತಹ ವಾತಾವರಣ ಮಠದಲ್ಲಿ ಸೃಷ್ಟಿಯಾಗಿದೆ ಎಂದರೂ ಆದೀತು.

ಸ್ವಾಮೀಜಿಯ ಪಲಾಯನದ ಹಿಂದೆ ಹಾಗೂ ಅವರ ಈ ರೀತಿಯ ಮಾತುಗಳ ಹಿಂದೆ ಒಂದಷ್ಟು ವಾಸ್ತವಿಕ ಅಂಶಗಳಿರುವು ದಂತೂ ಸ್ಪಷ್ಟ. ಉದಾಹರಣೆಗೆ ಮಠದ ಆಡಳಿತ ಮಂಡಳಿಯವರು ಬಡ್ಡಿ ವ್ಯವಹಾರಕ್ಕೆ ಸರಿಸಮನಾದ ಚೀಟಿ ವ್ಯವಹಾರವನ್ನು ಮಾಡುತ್ತಿದ್ದಾರೆ. ಇದು ಕಾನೂನುಬಾಹಿರ ಎಂದು ಗೊತ್ತಿದ್ದರೂ ಮಠಕ್ಕೆ ಇದರಿಂದ ದೇಣಿಗೆ ಸಂಗ್ರಹವಾಗುತ್ತಿದೆ ಎಂಬ ಕಾರಣ ನೀಡಿ ಆ ದಂಧೆಯನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗಲಾಗುತ್ತಿದೆ. ಪ್ರತಿ ಪೌರ್ಣಿಮೆಯಲ್ಲಿ 50 ಸಾವಿರದಿಂದ ಹಿಡಿದು 5 ಲಕ್ಷದತನಕ ಇಂತಹ ವ್ಯವ ಹಾರ ಮಾಡಲಾಗುತ್ತಿದೆ. ಇದರಿಂದಾಗಿ ಮಠ ಇಂದು ಮಠವಾಗಿ ಉಳಿಯದೇ ವಾಣಿಜ್ಯ ಕೇಂದ್ರದಂತಾಗುತ್ತಿದೆ ಎಂಬ ಕೊರಗು ಕೂಡ ಸ್ವಾಮೀಜಿಗೆ ಇರಬಹುದು.

ಎರಡನೆಯದಾಗಿ, ಸ್ವಾಮೀಜಿಯವರ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಇಡೀ ರಾಜ್ಯಾದ್ಯಂತ ಭಕ್ತರಿಂದ ಕೋಟ್ಯಂ ತರ ರೂಪಾಯಿಗಳನ್ನು ಸಂಗ್ರಹಿಸಲಾಗಿತ್ತು. ಆದರೆ ಆಡಳಿತ ಮಂಡಳಿ ಕೊಡುತ್ತಿರುವ ಲೆಕ್ಕ ಮಾತ್ರ 16 ಲಕ್ಷಕ್ಕೆ. ಈ ರೀತಿಯಲ್ಲಿ ಮಠದಲ್ಲಿಯೂ ಭ್ರಷ್ಟಾಚಾರ ವ್ಯಾಪಕವಾಗಿ ಆವರಿಸಿದೆ ಎಂಬುದೂ ಸ್ವಾಮೀಜಿಯ ಅಸಮಾಧಾನಕ್ಕೆ ಕಾರಣ ಎಂದು ಕೆಲವು ಭಕ್ತರು ಮಾತನಾಡುತ್ತಿದ್ದಾರೆ.

ಒಟ್ಟಿನಲ್ಲಿ, ಕಾಯಕವೇ ಕೈಲಾಸ, ತಾವಿರುವ ಜಾಗವೇ ಕಾಶಿ ಎಂದೆಲ್ಲಾ ನಂಬಿದ್ದ ಸ್ವಾಮಿ ಅವುಗಳನ್ನೆಲ್ಲಾ ಮರೆತು ಖಾಯಂ ಆಗಿ ಹೊರಟುಹೋದಂತಿದೆ. ಆಧ್ಯಾತ್ಮ, ಕಾಯಕ ಮತ್ತು ಶಿಕ್ಷಣಗಳ ಕೇಂದ್ರಗಳನ್ನಾಗಿ ಮಠಗಳನ್ನು ರೂಪಿಸಬೇಕಿದ್ದ ಅವರು ಈ ಎಲ್ಲಾ ಕರ್ತವ್ಯಗಳಿಂದ ವಿಮುಖರಾಗಿ ಪಲಾಯನ ಮಾಡಿದ್ದಾರೆ. ಮಠದಲ್ಲಿ ಸಮಸ್ಯೆಗಳಿದ್ದರೆ, ಭ್ರಷ್ಟಾಚಾರವಿದ್ದರೆ ಅವುಗಳನ್ನು ಇಲ್ಲಿದ್ದುಕೊಂಡೇ ಸರಿಪಡಿಸಬೇಕಿತ್ತು. ಭ್ರಷ್ಟಾಚಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡು ಮಠವನ್ನು ಸುಧಾರಿಸಬೇಕಿತ್ತು, ಆ ಮೂಲಕ ನಂಬಿದ ಲಕ್ಷಾಂತರ ಭಕ್ತ ಸಮೂಹದ ಜೊತೆಗಿರಬೇಕಿತ್ತು, ಈ ರೀತಿ ಉತ್ತರ ಭಾರತಕ್ಕೆ ಮನಶ್ಶಾಂತಿಗೆಂದು, ತಪಸ್ಸಿಗೆಂದು ಹೋಗುವುದರಿಂದ ಮಠದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅವರ ಗೈರುಹಾಜರಿಯಲ್ಲಿ ಇವೆಲ್ಲ ಇನ್ನಷ್ಟು ಉಲ್ಬಣಗೊಳ್ಳಬಹುದು. ಇದು ಕರ್ತವ್ಯ ವಿಮುಖತೆಯಲ್ಲದೇ ಮತ್ತೇನು ಅಲ್ಲ.

ಒಂದು ವೇಳೆ ಸ್ವಾಮೀಜಿಗೆ ಮಠ-ಮಾನ್ಯಗಳ ಪರಿಕಲ್ಪನೆಯ ಬಗ್ಗೆ, ಭಕ್ತಿ, ಪೂಜೆ, ಆಧ್ಯಾತ್ಮ ಮುಂತಾದ ವಿಚಾರಗಳ ಬಗ್ಗೆ ನಂಬಿಕೆ, ವಿಶ್ವಾಸ ಹೊರಟು ಹೋಗಿದ್ದರೆ ಅದನ್ನಾದರೂ ಸ್ಪಷ್ಟಪಡಿಸಿ ಮಠದ ಎಲ್ಲಾ ಆಸ್ತಿಪಾಸ್ತಿಗಳನ್ನು ಯಾವುದಾದರೂ ಜವಾಬ್ದಾರಿಯುತ ವ್ಯಕ್ತಿಗೆ ಹಸ್ತಾಂತರಿಸಿ ಸಾಮಾನ್ಯ ಮನುಷ್ಯನ ಜೀವನವನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು. ಅವರು ಅದನ್ನೂ ಮಾಡಿಲ್ಲ. ಇಂದಿಗೂ ಮಠದ ಎಲ್ಲಾ ಆಸ್ತಿಪಾಸ್ತಿಗಳು ಅವರ ಹೆಸರಿನಲ್ಲಿಯೇ ಇವೆ.

ಸ್ವಾಮಿಗಳು ಅತ್ತ ಹೊರಡುತ್ತಿದ್ದಂತೆ ಇತ್ತ ಮಠವನ್ನು ತಿಂದು ಮುಕ್ಕುತ್ತಿರುವ ಕ್ರಿಮಿಗಳಿಗೆ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಾಗಿದೆ. ಇನ್ನು ಮುಂದೆ ಅವರ ರಾಜ್ಯಭಾರ ಯಾವ ಅಡೆತಡೆಯಿಲ್ಲದಂತೆ ಮುಂದುವರೆ ಯಲಿದೆ. ಹಿರಿಯ ಸ್ವಾಮಿಗಳಿಗೇ ಸರಿಯಾಗಿ ಸ್ಪಂದಿಸದೇ ತಮ್ಮ ದರ್ಬಾರನ್ನು ಮುಂದುವರೆಸಿಕೊಂಡು ಬಂದ ಈ ಕ್ರಿಮಿಗಳು ಸೋಮಶೇಖರ್‌ನಂತಹ ಇಪ್ಪತ್ತು ವರ್ಷದ ಕಿರಿಯ ಹಾಗೂ ಅನನುಭವಿ ಸ್ವಾಮಿಗಳಿಗೆ ಅದ್ಹೇಗೆ ಸ್ಪಂದಿಸುತ್ತಾರೆಂಬುದು ಭಕ್ತರ ಅಳಲು.

ಒಟ್ಟಿನಲ್ಲಿ ನೊಣಬ ಲಿಂಗಾಯತರ ಮಠಕ್ಕೀಗ ಒಬ್ಬ ಸಮರ್ಥ ಸ್ವಾಮಿ ಇಲ್ಲದಿರುವುದು ಹಾಗೂ ಸ್ವಾಮಿಗಳ ಅನುಪಸ್ಥಿತಿಯಲ್ಲಿ ಮಠದ ಆಡಳಿತಮಂಡಳಿ ಭ್ರಷ್ಟಾಚಾರ, ದಗಲ್ಬಾಜಿತನದಲ್ಲಿ ಮುಳುಗಿರುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಇದನ್ನು ಹೀಗೇ ಬಿಟ್ಟರೆ ಮಠ ಮುಂದೊಂದು ದಿನ ಅಧೋಗತಿಗಿಳಿದು ಹೋಗುವ ಅಪಾಯ ಇದೆ. ಹೀಗಾಗಿ ನೊಣಬ ಲಿಂಗಾಯತರು ಈಗಲಾದರೂ ಎಚ್ಚೆತ್ತುಕೊಂಡು ಮಠ ದಲ್ಲಿ ಠಿಕಾಣಿ ಹೂಡಿರುವ ಭ್ರಷ್ಟರನ್ನು ಒದ್ದೋಡಿಸಿ, ಶುದ್ಧಹಸ್ತ ಮತ್ತು ಸಮರ್ಥ ಜನರನ್ನೊಳಗೊಂಡ ಹೊಸ ಆಡಳಿತ ಮಂಡಳಿಯನ್ನು ರೂಪಿಸಬೇಕಿರುವುದು ಮತ್ತು ಮಠದ ವ್ಯವಹಾರವನ್ನೆಲ್ಲಾ ಸಮರ್ಥವಾಗಿ ನೋಡಿ ಕೊಂಡು, ಅನ್ನ ದಾಸೋಹ, ಶಿಕ್ಷಣ ದಾಸೋಹ ಮುಂತಾದ ಸಾಮಾಜಿಕ ಕೆಲಸದಲ್ಲಿ ಮಠವನ್ನು ತೊಡಗಿಸಬಲ್ಲ ಯೋಗ್ಯ ಸ್ವಾಮೀಜಿಯನ್ನು ಹುಡುಕ ಬೇಕಿರುವುದು ಇಂದಿನ ತುರ್ತು ಅಗತ್ಯ.

- ವೇಣುಕುಮಾರ್

ಿತ್ತು? ಅವೆಲ್ಲವೂ ಬಾಯಿ ಮುಚ್ಚಿಕೊಂಡಿದ್ದವು. ರೂ ಎಬಿವಿಪಿಯ ದಾರಿ ಹಿಡಿದಿದ್ದಾರೆಯೇ ಎಂಬ ಮಾನ ಅವಳಿ ನಗರಗಳ ವಿದ್ಯಾರ್ಥಿ ಸಮೂಹಗಳಲ್ಲಿ ಬರುತ್ತಿದೆ.

[illegible]

ಹಾಗೆಂದಮಾತ್ರಕ್ಕೆ, ಶಿಕ್ಷಣ ಸಚಿವರ ಕುಲಬಾಂಧ ೇನೂ ಸಾಚಾ ಏನಲ್ಲ. ಹೊರಟ್ಟಿಯ ಪುತ್ರ ರತ್ನ ತ ಹೊರಟ್ಟಿ ನಿರ್ದೇಶಕನಾಗಿರುವ ಆಕ್ಸ್‌ಫರ್ಡ್ ೇಜು ಪ್ರತೀ ಪಿಯುಸಿ ಪ್ರಥಮ ವರ್ಷದ ಪ್ರವೇಶಕ್ಕೆ 500 ರೂಪಾಯಿಗಳ ಶುಲ್ಕ, ಹಾಗೂ 25000 ಪಾಯಿಗಳ ತನಕ ಡೊನೇಷನ್‌ಗಳನ್ನು ಬಡಜನರಿಂದ [illegible]

ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಕಮ್ ಉಪನ್ಯಾಸಕ ಮಹೇಶ್ ದ್ಯಾವಪ್ಪನವರ್ 18,000 ರೂ. ಶುಲ್ಕ ಮತ್ತು 25 ರಿಂದ 30 ಸಾವಿರ ರೂ. ಡೊನೇಷನ್ ಕಕ್ಕಿಸುತ್ತಿದ್ದಾನೆ.

ದ್ಯಾವಪ್ಪನ ಡೊನೇಷನ್ ಹಾವಳಿಯ ವಿರುದ್ಧ ವಿದ್ಯಾರ್ಥಿಗಳು ಗಲಾಟೆ ಮಾಡಿದ್ದಕ್ಕೆ ಪತ್ರಕರ್ತರನ್ನು ಕರೆದ ದ್ಯಾವಪ್ಪ ತಾನು ಬೇಕಾಬಿಟ್ಟಿಯಾಗಿ ದುಡ್ಡು ಪಡೆದೇ ಇಲ್ಲ, ಅಗತ್ಯ ಪರಿಕರಗಳ ಸಮೇತ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುತ್ತಿರುವುದಕ್ಕೆ ಒಂದಿಷ್ಟು ಶುಲ್ಕ ವಸೂಲಿ ಮಾಡುತ್ತಿದ್ದೇವೆ ಎಂದೆಲ್ಲಾ ಸಮಜಾಯಿಷಿ ನೀಡಿ ಕೈತೊಳೆದುಕೊಂಡಿದ್ದಾನೆ. ಆತನ ಪ್ರಕಾರ ಒಂದಿಷ್ಟು ಡೊನೇಷನ್ ಎಂದರೆ 15ರಿಂದ 30 ಸಾವಿರ ರೂಪಾಯಿ ಗಳು! ಅದೂ ಕೇವಲ ಪ್ರಥಮ ಪಿಯುಸಿ ಪ್ರವೇಶಕ್ಕೆ!! ಆದರೆ ತನ್ನ ಪುತ್ರ ರತ್ನ ಶಿಕ್ಷಣದ ಹೆಸರಿನಲ್ಲಿ ಜನರಿಂದ ಹಣ ಕೀಳುತ್ತಿರುವ ಬಗ್ಗೆಯಾಗಲೀ ಅಥವಾ ತನ್ನ ಕುಲಬಾಂಧವನ ಶಿಕ್ಷಣದ ಬಿಜಿನೆಸ್ ಬಗ್ಗೆಯಾಗಲೀ ಸಚಿವ ಹೊರಟ್ಟಿ ಮಾತ್ರ ತುಟಿಪಿಟಕ್ಕೆನ್ನದೇ ಸುಮ್ಮನಿರು ವುದು ವಿಚಿತ್ರವಾಗಿದೆ.

ಹುಬ್ಬಳ್ಳಿ-ಧಾರವಾಡಗಳಲ್ಲಿ ಇರುವುದು ಒಂದೇ ಸರ್ಕಾರಿ ಪದವಿ ಪೂರ್ವ ಕಾಲೇಜು. ಸರ್ಕಾರದ ಅದರಲ್ಲೂ ವಿಶೇಷವಾಗಿ ಹೊರಟ್ಟಿಯ ದಿವ್ಯ ನಿರ್ಲಕ್ಷ್ಯ ದಿಂದಾಗಿ ಇದು ಯಾವ ಮೂಲಭೂತ ಸೌಕರ್ಯಗಳನ್ನೂ ಕಾಣದೆ ಒಂದು ರೀತಿಯ ದನದ ದೊಡ್ಡಿಯಂತೆ ಪರಿವರ್ತಿತವಾಗಿದೆ. ಸದ್ಯಕ್ಕಂತೂ ಅದು ಸುಧಾರಿಸುವ ಪರಿಸ್ಥಿತಿ ಕಾಣುತ್ತಿಲ್ಲ. ಈ ಕಾಲೇಜನ್ನೇನಾದರೂ ಅಭಿ ವೃದ್ಧಿಪಡಿಸಿದರೆ ವಿದ್ಯಾರ್ಥಿಗಳೆಲ್ಲಾ ಇಲ್ಲಿಗೆ ಪ್ರವೇಶಕೋರಿ ಬಂದುಬಿಟ್ಟರೆ ತನ್ನ ಮಗ ಮತ್ತು ಕುಲಬಾಂಧವರು ನಡೆಸುವ ಶಿಕ್ಷಣದ ಬಿಜಿನೆಸ್‌ಗೆ ಕಂಟಕವಾಗಬಹುದೆಂಬ ಭಯ ಪ್ರಾಯಶಃ ಹೊರಟ್ಟಿ ಸಾಹೇಬರಿಗಿರಬೇಕು. ಅಲ್ಲದೇ ಹುಬ್ಬಳ್ಳಿ ಧಾರವಾಡಗಳ ಖಾಸಗಿ ಶಿಕ್ಷಣ ಸಂಸ್ಥೆಗಳು ಹೊರಟ್ಟಿಯವರಿಗೆ ನೈವೇದ್ಯ ಅರ್ಪಿಸಿ ಸರ್ಕಾರಿ ಕಾಲೇಜನ್ನು ಅಭಿವೃದ್ಧಿಪಡಿಸಬಾರದು, ಹೊಸ ಸರ್ಕಾರಿ ಕಾಲೇಜನ್ನು ತೆರೆಯಬಾರದು ಎಂದು ಮನವಿ ಸಲ್ಲಿಸಿರಬೇಕು.

ಒಟ್ಟಿನಲ್ಲಿ ಶಿಕ್ಷಣ ಸಚಿವರ ತವರಿನಲ್ಲಿ ಬಡವರಿಗೆ ಶಿಕ್ಷಣವಿಲ್ಲ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿರುವು ದಂತೂ ಸತ್ಯ. ಹೊರಟ್ಟಿಯ ನಿರ್ಲಕ್ಷ್ಯ ಅಥವಾ [illegible] ನಿರ್ಲಕ್ಷ್ಯ ಹೀಗೇ ಮುಂದುವರಿದರೆ ತವರಿನ ಜನ ಅವರನ್ನು ಕ್ಷಮಿಸಲಾರರು. ಮುಂದಿನ ಬಾರಿ [illegible] ಆಗುವುದು ಹಾಗಿರಲಿ, ಎಮ್ಮೆಲ್ಲೆ ಆಗುವುದೂ [illegible] ದರೂ ಆಶ್ಚರ್ಯ [illegible]

-ವರದಿಗಾರ



ನತದೃಷ್ಟ ಹೆಂಗಸು, ಅದೃಷ್ಟವಂತ ತಾಯಿ

ಈ ನತದೃಷ್ಟ ಹೆಂಗಸು ಮತ್ತು ದಲ್ಯಾನಿಯಾದ ಆ ಅದೃಷ್ಟವಂತ ತಾಯಿಯ ವಿಷಯಕ್ಕೆ ಸಂಬಂಧಿಸಿದಂತೆ ಯೋಚಿಸಿದಾಗ ಈ ನರಭಕ್ಷಕಿಯ ಬಗ್ಗೆ ಒಂದು ಸಣ್ಣ ಅನುಮಾನ ಹುಟ್ಟಿಕೊಂಡಿತು. ಮರಿಯ ಸಾವಿನ ನಂತರ ಹಿಡಿಯಲು ಹೋದ ಇಬ್ಬರನ್ನೂ ಅದು ಕೊಂದು, ಎತ್ತಿಕೊಂಡು ಹೋಗಲಾಗಿಲ್ಲ. ಇದಕ್ಕೆ ಎರಡು ಅರ್ಥಗಳಿವೆ; ಒಂದು, ಈವರೆಗೂ ಅದು ನರ ಶಿಕಾರಿಗೆ ತನ್ನ ಮರಿಯನ್ನು ಅವಲಂಬಿಸಿತ್ತು. ಎರಡು, ಅದು ಮನುಷ್ಯರನ್ನು ಕೊಂದು, ಎತ್ತಿಕೊಂಡು ಹೋಗುವ ಸಾಮರ್ಥ್ಯ ಹೊಂದಿಲ್ಲ ಎಂಬುದು. ಹಾಗಾಗಿಯೇ ಮರಿಯ ಸಾವಿನ ನಂತರ ಅದು ದಾಳಿಮಾಡಿದ ಎಲ್ಲರೂ ಬಚಾವಾಗುತ್ತಿದ್ದಾರೆ. ಇದು ಗಾಯಗೊಳಿಸಿ ಬಿಡಬಲ್ಲುದೇ ವಿನಃ, ಸ್ಥಳದಲ್ಲೇ ಅವರನ್ನು ಕೊಲ್ಲಲಾಗುತ್ತಿಲ್ಲ. ಹಾಗಾಗಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆತರೆ ದಾಳಿಗೀಡಾದ ಮನುಷ್ಯರು ಬದುಕುಳಿಯಬಲ್ಲರು

ಈ ಹಿಂದೆ ನಾನು ಒಮ್ಮೆ ಹುಲಿಯ ಶಿಕಾರಿಗೆ ಹೋಗಿದ್ದಾಗ ನನ್ನೊಂದಿಗೆ ಒಬ್ಬ ವೈದ್ಯ ಮಿತ್ರ ಬಂದಿದ್ದ. ಅವನ ಮನವಿಯ ಮೇರೆಗೆ ಅವನನ್ನು ಕರೆದುಕೊಂಡು ಹೋಗಿದ್ದೆ. ನನ್ನೊಂದಿಗಿನ ಶಿಕಾರಿ ಅನುಭವದಿಂದ ಆತ ರೋಮಾಂಚಿತನಾಗಿದ್ದ. ಅವೆಲ್ಲಾ ಮುಗಿದ ನಂತರ ಹಿಂತಿರುಗುವಾಗ ಆತ ಹಳದಿ ದ್ರವವಿದ್ದ ಶೀಸೆಯನ್ನು ಕೊಡುಗೆಯಾಗಿ ನನಗೆ ಕೊಟ್ಟಿದ್ದ. ಸುಮಾರು ಎರಡು ಔನ್ಸುಗಳಷ್ಟು ಔಷಧಿಯಿದ್ದ ಆ ಶೀಸೆಯನ್ನು ನಾನು ಹುಲಿ ಶಿಕಾರಿಗೆ ಹೋಗುವಾಗಲೆಲ್ಲಾ ಜೊತೆಯಲ್ಲಿ ತೆಗೆದುಕೊಂಡು ಹೋಗುವಂತೆ ಸಲಹೆ ನೀಡಿದ್ದ. ಅಂದಿನಿಂದಲೂ ಅದು ನನ್ನ ಶಿಕಾರಿ ಉಡುಪಿನ ಒಂದು ಭಾಗವಾಗಿ ಬಿಟ್ಟಿತ್ತು. ಈವರೆಗೂ ಎಂದೂ ನನಗೆ ಅದು ಉಪಯೋಗಕ್ಕೆ ಬಂದಿರಲಿಲ್ಲ. ಈಗ ಅದರ ಬಳಕೆಗೆ ಸೂಕ್ತ ಸಮಯ ಒದಗಿಬಂದಿತ್ತು. ನಾನು ನನ್ನ ಶಿಕಾರಿ ಕೋಟಿನ ಒಳ ಜೇಬುಗಳಲ್ಲಿ ತಡಕಾಡಿದಾಗ ಅದೃಷ್ಟಕ್ಕೆ ಅದು ನನ್ನ ಕೈಗೆ ಸಿಕ್ಕಿಬಿಟ್ಟಿತು. ತೆಗೆದು ನೋಡಿದೆ, ಕಾಲುಭಾಗ ಆವಿಯಾಗಿದ್ದರೂ.... ಇನ್ನೂ ಮುಕ್ಕಾಲು ಭಾಗ ಔಷಧವಿತ್ತು. ನಾನು ಆ ಹುಡುಗಿಯ ತಲೆ ಹಾಗೂ ಗಾಯಗೊಂಡ ದೇಹದ ಭಾಗಗಳನ್ನು ತೊಳೆದು ಈ ಔಷಧವನ್ನು ಎಲ್ಲಾ ಕಡೆ ಹಚ್ಚಿದೆ. ನಂತರ ತಲೆಗೆ ಬ್ಯಾಂಡೇಜ್ ಕಟ್ಟಿದೆ. ಬುರುಡೆಯಿಂದ ಸಿಗಿದು ಪ್ರತ್ಯೇಕಗೊಂಡಿದ್ದ ಕೂದಲು ಸಹಿತವಾದ ಚರ್ಮವನ್ನು ಸ್ಥಿರವಾಗಿ ನಿಲ್ಲಿಸಬೇಕಿತ್ತು. ಇವೆಲ್ಲಾ ಮುಗಿದ ನಂತರ ಆಕೆಯನ್ನು ಅವಳ ಮನೆಗೆ ಎತ್ತಿತಂದು ಮಲಗಿಸಿದೆ.

ಆದರೆ ಇಲ್ಲೊಂದು ಹೊಸ ಸಮಸ್ಯೆ ಉದ್ಭವವಾಯಿತು. ಮನೆಗಂಟಿಕೊಂಡಿದ್ದ ಸಣ್ಣ ಕೊಠಡಿಯಲ್ಲಿ ಜಂತೆಗೆ ಒಂದು ತೊಟ್ಟಿಲನ್ನು ತೂಗುಹಾಕಲಾಗಿತ್ತು. ಅದರಲ್ಲಿ ಒಂದು ಪುಟ್ಟ ಮಗುವಿತ್ತು. ಅದು ಆ ಹೆಂಗಸಿನ ಕರುಳಕುಡಿ. ಈಗ ಆ ಮಗುವಿಗೆ ಹಾಲು ಕುಡಿಸಬೇಕೇ... ಬೇಡವೇ....? ಎಂದು ನನ್ನ ಹಿಂದಿದ್ದ ಹೆಂಗಸರಲ್ಲಿ ಚರ್ಚೆ ಶುರುವಾಯಿತು. ಇದು ತೀರಾ ಸಂಕೀರ್ಣ ಸಂದರ್ಭ, ನನಗೆ ಇದರ ಪರಿಹಾರದ ಬಗ್ಗೆ ಅರಿವಿರಲಿಲ್ಲ, ಹಾಗಾಗಿ ನಿರ್ಧಾರವನ್ನು ಅವರಿಗೇ ಬಿಟ್ಟು ಹಿಂತಿರುಗಿದೆ.


ನಾನು ಆ ಹರಯದ ತಾಯಿಗೆ ಚಿಕಿತ್ಸೆ ನೀಡುತ್ತಿದ್ದಾಗ ನಮ್ಮವರು ಒಂದು ಮೇಕೆಯನ್ನು ಹೊಂದಿಸಿಕೊಂಡಿದ್ದರು. ಆ ಹುಡುಗಿ ನಡೆದುಬಂದ ರಕ್ತದ ಜಾಡಿನಲ್ಲಿ ಹಿಂದಕ್ಕೆ ಹೋದಾಗ ಹುಲಿ ಆವಳನ್ನು ಹಿಡಿದ ಜಾಗ ಸಿಕ್ಕಿತು. ನಾನು ಸ್ವಲ್ಪ ದೂರದಲ್ಲಿದ್ದ ಪೊದೆಯ ಬಳಿ ಮೇಕೆಯನ್ನು ಕಟ್ಟಿ ಒಂದು ಓಕ್ ಮರವನ್ನು ಹತ್ತಿ ಕುಳಿತೆ. ಇದೊಂದು ದುರ್ಬಲವಾದ ಮರ. ಇದನ್ನು ಬಿಟ್ಟರೆ ಬೇರೊಂದು ಮರ ಅಲ್ಲಿರಲಿಲ್ಲ. ನೆಲಕ್ಕೆ ತೀರಾ ಹತ್ತಿರದಲ್ಲಿದ್ದ ನಾನು ಇಡೀರಾತ್ರಿ ಕಣ್ಣುಬಿಟ್ಟೇ ಕುಳಿತೆ. ಅದು ಬಿಳಿ ಹಸುವನ್ನು ಬಿಟ್ಟು ಓಡಿಹೋದಾಗಿನಿಂದ ಏನೂ ತಿಂದಂತಿರಲಿಲ್ಲ. ಹಾಗಾಗಿ ಇಲ್ಲಿಗೆ ಬರಬಹುದೆಂದು ನಿರೀಕ್ಷಿಸಿದ್ದೆ. ಆದರೆ ಇಡೀರಾತ್ರಿ ಅದರ ಸುಳಿವಿರಲಿಲ್ಲ.

ಬೆಳಿಗ್ಗೆ ಎದ್ದು ನಿನ್ನೆ ಹುಲಿ ಹೋದ ದಿಕ್ಕನ್ನು ಹುಡುಕಿ ಹೊರಟೆ. ಆ ಹುಡುಗಿಯ ಮೇಲೆ ಆಕ್ರಮಣ ಮಾಡಿ ಓಡಿಹೋದ ಹುಲಿ ಅರ್ಧ ಮೈಲಿಗಳಷ್ಟು ಕಣಿವೆಯ ಮೇಲಕ್ಕೇರಿ, ಅಲ್ಲಿಂದ ದನಗಳ ಜಾಡು ಹಿಡಿದು ನಾಂದೋರ್ ನದಿಯತ್ತ ಸಾಗಿತ್ತು. ಇದೇ ಜಾಡಿನಲ್ಲಿ ಎರಡು ಮೈಲಿಗಳಷ್ಟು ಮುಂದುವರಿದೆ. ಅಲ್ಲೊಂದು ಕಡೆ ದಲ್ಯಾನಿಯಾದಿಂದ ಹೊರಡುತ್ತಿದ್ದ ಕಾಡಿನ ದಾರಿಗೆ ಈ ಜಾಡು ಕೂಡಿಕೊಂಡಿತು. ಇಲ್ಲಿಂದ ಮುಂದಕ್ಕೆ ನೆಲ ತೀರಾ ಗಡುಸಾಗಿದ್ದರಿಂದ ನಾನು ಜಾಡು ತಪ್ಪಿದೆ.

ಎರಡು ದಿನಗಳಿಂದ ಹಳ್ಳಿಯ ಜನ ಮುಚ್ಚಿದ ಬಾಗಿಲುಗಳ ಹಿಂದೆ ಅಡಗಿದ್ದರು. ಮಲಮೂತ್ರಾದಿಗಳಿಗೂ ಹೊರಬಂದಂತಿರಲಿಲ್ಲ. ಎರಡನೆ ಸಂಜೆಯ ಹೊತ್ತಿಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತಿತ್ತು. ಆದರೆ ಮೂರನೇ ದಿನ ನಾಲ್ಕು ಜನ ಬಂದರು. ನನ್ನಲ್ಲಿಗೆ ಅವರು ಲೋಹಾಲಿಯ ಬಳಿ ಹುಲಿ ಒಬ್ಬರನ್ನು ಹಿಡಿದಿರುವ ವಾರ್ತೆ ತಂದಿದ್ದರು. ಲೋಹಾಲಿ ದಲ್ಯಾನಿಯಾದಿಂದ ದಕ್ಷಿಣಕ್ಕೆ ಹತ್ತು ಮೈಲಿಗಳ ದೂರದಲ್ಲಿತ್ತು. ಬಂದಿದ್ದವರು ಹೇಳಿದರು; ನಾವು ರಸ್ತೆಯ ಮೂಲಕ ಹೋದರೆ ಹತ್ತು ಮೈಲಿಗಳಾಗುತ್ತವೆ. ಅದರ ಬದಲು ಕಾಲುದಾರಿ ಹಿಡಿದರೆ ಅರ್ಧಕ್ಕರ್ಧದೂರ ಕಡಿಮೆಯಾಗುತ್ತದೆ ಎಂದು. ನಾನು ಕೂಡಲೇ ಸಿದ್ಧತೆಯಲ್ಲಿ ತೊಡಗಿ ಮಧ್ಯಾಹ್ನದ ಹೊತ್ತಿಗೆ ಕಾಲುದಾರಿಯಲ್ಲಿ ಅವರ ಬೆನ್ನುಹತ್ತಿ ಓಡ ತೊಡಗಿದೆ.

ಕಂಬದಷ್ಟು ಕಡಿದಾಗಿದ್ದ ಈ ಬೆಟ್ಟದ ದಾರಿಯಲ್ಲಿ ಎರಡು ಮೈಲಿ ಹತ್ತುವ ಹೊತ್ತಿಗೆ ನಾವು ದಲ್ಯಾನಿಯಾದಿಂದ ದಕ್ಷಿಣಕ್ಕಿದ್ದ ಕಣಿವೆಯ ನೆತ್ತಿಗೆ ಬಂದೆವು. ಅಲ್ಲಿಂದ ಕೆಳಗಿನ ಇಡೀ ಪ್ರದೇಶ ಕಾಣುತ್ತಿತ್ತು. ಹುಲಿ ಹಿಡಿದ ಜಾಗ ಕಣಿವೆಯ ಇಳಿಜಾರಿನಲ್ಲಿ ಮೂರು ಮೈಲಿಗಳ ಕೆಳಗಿತ್ತು. ನನ್ನನ್ನು ಕರೆಯಲು ಬಂದಿದ್ದವರಿಗೆ ಈ ಘಟನೆಯ ನಡೆದ ಸ್ಥಳದ ವಿವರಗಳು ಖಚಿತವಾಗಿ ತಿಳಿದಿರಲಿಲ್ಲ. ಇವರು ಲೋಹಾಲಿಯಿಂದ ಒಂದು ಮೈಲಿ ದೂರದಲ್ಲಿದ್ದ ಪುಟ್ಟ ಹಳ್ಳಿಯವರು. ಬೆಳಿಗ್ಗೆ ಹತ್ತು ಗಂಟೆಯ ಸುಮಾರಿಗೆ ಹುಲಿ ಹಿಡಿದ ತಕ್ಷಣ, ಈ ಸುದ್ದಿಯನ್ನು ನನಗೆ ತಲುಪಿಸುವ ಜವಾಬ್ದಾರಿ ಹೊರಿಸಿ ಅವರನ್ನು ಅಲ್ಲಿಂದ ಓಡಿಸಿದ್ದರು.

ಕಣಿವೆಯ ತುದಿಗೆ ಬಂದಾಗ ನಾವೆಲ್ಲಾ ಸುಸ್ತಾಗಿಬಿಟ್ಟಿದ್ದೆವು. ನಾನು ಇಳಿಜಾರಿನ ಕಡೆಗೆ ಮುಖಮಾಡಿ ಸಿಗರೇಟು ಸೇದುತ್ತಾ ಕುಳಿತೆ. ಕಣಿವೆಯುದ್ದಕ್ಕೂ ಮರಗಳು ಚಿತ್ತಲಾಗಿ ನಿಂತಿದ್ದವು. ನನ್ನ ಜೊತೆ ಇದ್ದವರು ನಾವು ಮುಂದೆ ಹೋಗಬೇಕಾದ ದಾರಿಯನ್ನು ತೋರಿಸುತ್ತಿದ್ದರು. ಆ ದಾರಿಯಲ್ಲಿ ನಾನು ಕುಳಿತಿರುವ ಸಮಕ್ಕೆ ಸುಮಾರು ದೂರದಲ್ಲಿ ಬೃಹತ್ತಾದ ಒಂದು ಬಂಡೆ ಎತ್ತರಕ್ಕೆ ಚಾಚಿಕೊಂಡು ಮಲಗಿತ್ತು. ಇದರಿಂದ ಸ್ವಲ್ಪ ಕೆಳಗೆ ಸುತ್ತಲೂ ಮುಳ್ಳಿನ ಪೊದೆಗಳಿಂದಾದ ದೊಡ್ಡ ಗೊಂಡಾರಣ್ಯವೇ ಇತ್ತು. ಇದರ ನಡುವೆ ಶಿಥಿಲಾವಸ್ಥೆಯಲ್ಲಿದ್ದ ಒಂದು ಗುಡಿಸಲು ಅನಾಥವಾಗಿ ನಿಂತಿತ್ತು. ನಾವು ಆದನ್ನು ಬಳಸಿಕೊಂಡು ಹೋಗಬೇಕಿತ್ತು. ನಾನು ಆ ಗುಡಿಸಲಿನತ್ತ ಬೆಟ್ಟು ಮಾಡಿ 'ಅದೇನು? ಯಾರದು?' ಎಂದು ಕೇಳಿದೆ. ಅದಕ್ಕೆ ಅವರು ಒಂದು ದೊಡ್ಡ ವೃತ್ತಾಂತವನ್ನೇ ಹೇಳಿದರು.



ಅದೊಂದು ಪರದೇಶಿಯ ಮನೆ. ಇವರ ಮಾತಿನಲ್ಲಿ ಪರದೇಶಿ ಅಂದರೆ ಪಕ್ಕದ ದೇಶದಿಂದ ಗಡಿದಾಟಿ ಬಂದವನು ಎಂದರ್ಥ. ಇವನು ಪರ್ವಗಳ ತಪ್ಪಲಿನ ಪೇಟೆಗಳಲ್ಲಿ ಉಪ್ಪು, ಹುಣಸೆ ಹಣ್ಣು, ಸಾಂಬಾರ ಪದಾರ್ಥ ಇತ್ಯಾದಿಗಳನ್ನು ತಂದು ಅವನ್ನು ಪರ್ವತದ ಮೇಲಿನ ಮತ್ತು ಒಳ ಪ್ರದೇಶಗಳ ಹಳ್ಳಿಗಳಲ್ಲಿ ಮಾರುತ್ತಿದ್ದ. ಹಾಗಾಗಿ ಪೇಟೆ ಮತ್ತು ಹಳ್ಳಿಗಳ ನಡುವಿನ ಪ್ರಯಾಣಾನುಕೂಲ ಮತ್ತು ಸರಕುಗಳ ದಾಸ್ತಾನಿಗಾಗಿ ಈ ಗುಡಿಸಲನ್ನು ಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಬೇಸಿಗೆ ಮತ್ತು ಮಳೆಗಾಲದಲ್ಲಿ ಒಂದಷ್ಟು ಮೇಕೆಗಳನ್ನು ಮೇಯಿಸಿಕೊಂಡು ಕಾಲಾಯಾಪನೆ ಮಾಡುತ್ತಿದ್ದು ಚಳಿಗಾಲ ಆರಂಭವಾಗುತ್ತಿದ್ದಂತೆ ವ್ಯಾಪಾರಕ್ಕಿಳಿಯುತ್ತಿದ್ದನಂತೆ. ಈ ನಡುವೆ ಏನಾಗಿದೆ ಎಂದರೆ... ಈಗ ನನ್ನೊಂದಿಗಿದ್ದ ಮಾಹಿತಿದಾರರ ಪೈಕಿ ಒಬ್ಬನ ಹೊಲಕ್ಕೆ ಅವನ ಮೇಕೆಗಳು ನುಗ್ಗಿ ಬೆಳೆಯನ್ನು ಹಾಳು ಮಾಡಿವೆ. ಕಳೆದ ಒಂದು ವಾರದಿಂದಲೂ ಅವು ಬೆಟ್ಟದ ಮೇಲಿನಿಂದ ಹಾಗೇ ಅಲೆಯುತ್ತಾ ಬರುತ್ತಿದ್ದುದನ್ನು ಜನ ನೋಡಿದ್ದಾರೆ. ಬೆಳೆ ಹಾನಿಯಿಂದ ಸಿಟ್ಟಿಗೆದ್ದ ಆ ಮನುಷ್ಯ ಆ ಪರದೇಶಿಯ ಬೇಜವಾಬ್ದಾರಿತನವನ್ನು ಬಯ್ಯುತ್ತಾ ಸೀದಾ ಅವನ ಗುಡಿಸಲಿನತ್ತ ಹೋಗಿದ್ದಾನೆ. ಅಲ್ಲಿ ನೋಡಿದರೆ ಗುಡಿಸಲು ಖಾಲಿ ಬಿದ್ದಿದೆ. ಅದರಲ್ಲಿ ಒಂದು ನರ ಪಿಳ್ಳೆಯೂ ಇಲ್ಲ. ಯಾವಾಗಲೂ ಅವನ ಮೇಕೆಯ ಹಿಂಡಿನೊಂದಿಗೆ ಕಾವಲಿಗೆ ಬರುತ್ತಿದ್ದ ನಾಯಿಯನ್ನು ಗುಡಿಸಲಿನ ಬಾಗಿಲಿನಲ್ಲಿ ಸರಪಳಿಯಲ್ಲಿ ಕಟ್ಟಿಹಾಕಿದ್ದಾನೆ. ಅದು ಕಟ್ಟಿದಲ್ಲೇ ಸತ್ತು ಹೋಗಿದೆ. ಇದರಿಂದ ವಿಚಲಿತನಾದ ಈ ವ್ಯಕ್ತಿ ಇದರ ಹಿಂದೆ ಏನೋ ಕರಾಮತ್ತಿದೆ ಎಂದು ಭಾವಿಸಿ, ರಾತ್ರಿ ಅಲ್ಲೇ ಕಾವಲು ಕಾದಿದ್ದಾನೆ. ಆದರೆ ಆ ಪರದೇಶಿಯ ಸುಳಿವಿಲ್ಲ. ಹಳ್ಳಿಗರಿಗೆ ಸಂದೇಹ ಬಂದಿದೆ. ಎಲ್ಲರೂ ಒಟ್ಟಾಗಿ ಹುಡುಕಾಟ ಆರಂಭಿಸಿದ್ದಾರೆ. ಬಹಳ ಹೊತ್ತಿನ ಹುಡುಕಾಟದ ನಂತರ ಗುಡಿಸಲಿನಿಂದ ನೂರಾರು ಗಜ ದೂರದಲ್ಲಿದ್ದ ಪೊದೆಗಳ ನಡುವೆ ಪರದೇಸಿಯ ಬಟ್ಟೆಗಳೂ, ಒಂದೆರಡು ತುಣುಕು ಮೂಳೆಗಳೂ ಹಾಗೂ ತಲೆ ಬುರುಡೆ ಸಿಕ್ಕಿದೆ. ಇದೇ ಚಾವಘರ್ ನರಭಕ್ಷಕಿಯ ಮೊಟ್ಟಮೊದಲ ನರಬಲಿ.

ನಾವು ನಿಂತ ಜಾಗದಿಂದ ಕೆಳಕ್ಕಿಳಿಯುವ ಯಾವ ಮಾರ್ಗಗಳೂ ಇರಲಿಲ್ಲ. ಕಂಬ ನಿಲ್ಲಿಸಿದಷ್ಟು ಕಡಿದಾಗಿದ್ದ ಈ ಕಮರಿಗಳ ನಡುವೆ ಇಳಿದು ಸಾಗುವುದು ಸಾಧ್ಯವೇ ಇರಲಿಲ್ಲ. ಆಗ ನನ್ನ ಮಾಹಿತಿದಾರರು ಇದೇ ಕಣಿವೆಯ ನೆತ್ತಿಯ ಮೇಲೆ ಅರ್ಧಮೈಲಿಗಳಷ್ಟು ನಡೆದು ಹೋದರೆ ಅಲ್ಲೊಂದು ಕಡಿದಾದ ಒರಟು ದಾರಿ ಇದೆಯೆಂದೂ, ಅದು ನಮ್ಮನ್ನು ಲೋಹಾಲಿಗೆ ತಲುಪಿಸುತ್ತದೆ ಎಂದೂ ಹೇಳಿದರು. ಕೈಯಳತೆಯ ದೂರದಲ್ಲಿ ಕಾಣುತ್ತಿದ್ದ ಲೋಹಾಲಿಯನ್ನು ತಲುಪಲು ಇಷ್ಟೆಲ್ಲಾ ಪರದಾಡಬೇಕಿತ್ತು.

ನಾವು ಈ ಕಣಿವೆಯ ಅರ್ಧದಾರಿಯನ್ನು ದಾಟಿ ಕಮರಿಯೆಡೆಗೆ ಇಳಿಯುತ್ತಿದ್ದೆವು. ಆಗ ಇದ್ದಕ್ಕಿದ್ದಂತೆ ನಾವು ಹಿಂಬಾಲಿಸಲ್ಪಡುತ್ತಿದ್ದೇವೆ ಎಂಬ ಗುಮಾನಿಗೆ ಒಳಗಾದೆ. ಮೊದಲು ಇದು ಭ್ರಾಂತಿಯಾಗಿರಬಹುದು ಎಂದು ಕೊಂಡೆ. ಆದರೆ ಈ ಭಾವನೆಯನ್ನು ನಿರಾಕರಿಸಲು ಸಾಧ್ಯವೇ ಆಗುತ್ತಿಲ್ಲ, ಹಾಗೇ ಇದಕ್ಕೆ ವಿವೇಕಪೂರ್ಣವಾದ ಕಾರಣವನ್ನೂ ಕೊಡಲಾಗುತ್ತಿಲ್ಲ. ಹೀಗಾಗಿ ನನ್ನೊಂದಿಗೆ ನಾನೇ ತರ್ಕಕ್ಕಿಳಿದೆ. ಈಗ ಈ ಪ್ರದೇಶದಲ್ಲಿರುವುದು ಒಂದೇ ನರಭಕ್ಷಕ. ಅದು ಈಗಾಗಲೇ ಒಬ್ಬರನ್ನು ಬಲಿತೆಗೆದುಕೊಂಡಿದೆ. ಅಲ್ಲಿನ ಪುಷ್ಕಳವಾದ ಊಟವನ್ನು ಬಿಟ್ಟು ಮೂರು ಮೈಲಿಗಳ ದೂರದಿಂದ ಬಂದು ನಮ್ಮ ಹಿಂದೇಕೆ ಬೀಳುತ್ತದೆ? ಎಂದು ಪ್ರಶ್ನಿಸಿಕೊಂಡೆ. ಆದರೂ ಆತಂಕ ಕಡಿಮೆಯಾಗುತ್ತಿಲ್ಲ. ಈ ಗುಮಾನಿಯ ಗೋಳೇ ಬೇಡವೆಂದು, ನನ್ನ ಜೊತೆಯಲ್ಲಿದ್ದ ನಾಲ್ವರನ್ನೂ ದಾರಿಯ ಪಕ್ಕದಲ್ಲಿ ಸುರಕ್ಷಿತವಾದ ಜಾಗವೊಂದನ್ನು ಹುಡುಕಿ ಕುಳಿತಿರುವಂತೆಯೂ, ನಾನು ಬರುವವರೆಗೂ ಅಲ್ಲಿಂದ ಕದಲಬಾರದೆಂದೂ ಹೇಳಿ, ನಾನು ಬಂದ ದಾರಿಯಲ್ಲಿಯೇ ಸ್ವಲ್ಪ ಹಿಂದಕ್ಕೆ ಹೋಗಿ ಅಲ್ಲಿಂದ ಕಾಡಿನೊಳಕ್ಕಿಳಿದೆ. ಕಲಿತ ವಿದ್ಯೆಯನ್ನೆಲ್ಲಾ ಬಳಸಿ ಹುಲಿಯ ಕುರುಹುಗಳಿಗಾಗಿ ಹುಡುಕಾಡಿದೆ. ಉಳಿದ ಪ್ರಾಣಿಪಕ್ಷಿಗಳೂ ಶಾಪ ಕೊಟ್ಟಂತೆ ಮೌನವಾಗಿದ್ದವು. ನನಗೇನೂ ಹೊಳೆಯಲಿಲ್ಲ. ಸಾವಕಾಶವಾಗಿ ಹಿಂತಿರುಗಿ ಕಾದಿದ್ದವರನ್ನು ಕೂಡಿಕೊಂಡೆ. ಅಲ್ಲಿಂದ ಅವರನ್ನು ಮುಂದೆ ಬಿಟ್ಟು, ಬಂದೂಕವನ್ನು ಸಿದ್ಧಮಾಡಿ ಸೇಫ್ಟಿಕ್ಯಾಚಿನ ಮೇಲೆ ಹೆಬ್ಬೆರಳನ್ನಿಟ್ಟುಕೊಂಡೇ ಮುಂದುವರಿದೆ.

ಸ್ವಲ್ಪ ಹೊತ್ತಿನಲ್ಲಿ ನಾವು ಒಂದು ಸಣ್ಣ ಹಳ್ಳಿಯನ್ನು ತಲುಪಿದೆವು. ನನ್ನೊಂದಿಗಿದ್ದವರು 'ಇದೇ ನಮ್ಮ ಹಳ್ಳಿ, ನಾವು ನಮ್ಮ ಮನೆಗಳಿಗೆ ಹೋಗುತ್ತೇವೆ' ಎಂದು ಹೇಳಿ ನನ್ನಿಂದ ಬೀಳ್ಕೊಂಡರು. ನಾನು ಇನ್ನೂ ಒಂದು ಮೈಲಿ ದಟ್ಟಪೊದೆಗಳಿಂದ ಕೂಡಿದ ದಾರಿಯ ನಡುವೆ ನಡೆದು ಹೋಗಬೇಕಿತ್ತು. ಮೊದಲೇ ಹಿಂಬಾಲಿಸಲ್ಪಡುತ್ತಿರುವ ಗುಮಾನಿಗೊಳಗಾಗಿದ್ದ ನನಗೆ ನಿಜಕ್ಕೂ ಸಂತೋಷವಾಗಿತ್ತು. ನಾಲ್ಕು ಜನರ ಬದಲು ನನ್ನೊಬ್ಬನ ಜೀವ ಉಳಿಸಿಕೊಳ್ಳುವುದು ಸುಲಭವಾಗಿತ್ತು. ನಾನು ಅಲ್ಲಿಂದ ಹೊರಟು ಅಡ್ಡಬಂದ ಹೊಲಗಳನ್ನು ದಾಟಿ

ದಟ್ಟವಾದ ಪೊದೆಗಳಿಂದಾವೃತವಾಗಿದ್ದ ದಾರಿಗೆ ಬಂದೆ. ಆ ಪೊದೆಗಳ ಆರಂಭದಲ್ಲಿಯೇ ಒಂದು ಗುಮ್ಮಿ ಇತ್ತು. ಅದರಲ್ಲಿ ಸ್ಫಟಿಕ ಶುದ್ಧವಾದ ತಿಳಿನೀರು ತುಂಬಿತ್ತು. ಇದು ಅಕ್ಕಪಕ್ಕದ ಹಳ್ಳಿಗಳ ನೀರಿನ ಮೂಲವೂ ಆಗಿತ್ತು. ನಾನು ನೀರಿನ ಗುಂಡಿಯತ್ತ ಹೋದೆ. ಅದರ ಸುತ್ತ ವಿಶಾಲವಾಗಿ ಹರಡಿದ್ದ ಮೆದು ಮಣ್ಣಿನ ಮೇಲೆ ಇದೀಗತಾನೆ ಬಂದಿದ್ದ ಹುಲಿಯ ಹೆಜ್ಜೆ ಗುರುತುಗಳು ಮೂಡಿದ್ದವು.

ಹುಲಿ ನಾನು ಹೋಗಬೇಕಿದ್ದ ಹಳ್ಳಿಯ ಕಡೆಯಿಂದಲೇ ಕಣಿವೆಯನ್ನು ಇಳಿದುಬಂದಿತ್ತು. ಇದು ಎರಡು ಅಂಶಗಳನ್ನು ಸೂಚಿಸುತ್ತಿದ್ದವು. ಈವರೆಗೂ ಹುಲಿ ನಮ್ಮನ್ನು ಹಿಂಬಾಲಿಸಿ ಬಂದಿರುವುದು ನಿಜ, ಹಾಗೂ ಇದು ಬೆಳಿಗ್ಗೆ ಕೊಂದಿರುವ ಬಲಿಯ ವಿಷಯದಲ್ಲಿ ಬೇರೇನೋ ಸಂಭವಿಸಿದೆ. ನಾನು ಇನ್ನಷ್ಟು ಅನುಮಾನಗಳಿಂದ ಅಲ್ಲಿಂದ ಹೊರಟು ಎಚ್ಚರಿಕೆಯಿಂದ ಪೊದೆಗಳ ನಡುವೆ ಹಾದು ಹೊರಬರುತ್ತಿದ್ದಂತೆ ಎದುರಿಗೆ ಲೋಹಾಲಿ ಕಾಣಿಸಿತು. ಅದು ಐದಾರು ಮನೆಗಳ ಹಳ್ಳಿ. ಅದರಲ್ಲಿ ಒಂದು ಮನೆಯ ಮುಂದೆ ಅನೇಕರು ಗುಂಪುಗಟ್ಟಿ ನಿಂತಿದ್ದರು.



ನಾನು ಬರುತ್ತಿರುವುದನ್ನು ಅವರು ಬಹಳ ದೂರದಿಂದಲೇ ಗುರುತಿಸಿದ್ದರು. ಹಾಗಾಗಿ ಮುಂಚಿತವಾಗಿಯೇ ಎಲ್ಲರೂ [illegible]ಟ್ಟಾಗಿ ನನಗಾಗಿ ಕಾಯುತ್ತಾ ನಿಂತಿದ್ದರು. ನಾನು ಅಲ್ಲಿಗೆ ಹೋಗುತ್ತಿದ್ದಂತೆ ಆ ಗುಂಪಿನಲ್ಲಿ ಹೆಚ್ಚು ವಯಸ್ಸಾಗಿದ್ದ ಹಿರಿಯರೊಬ್ಬರು ಹಠಾತ್ತಾಗಿ ಬಗ್ಗಿ ನನ್ನ ಕಾಲುಗಳನ್ನು ಹಿಡಿದುಕೊಂಡು "ನನ್ನ ಮಗಳನ್ನು ಹೇಗಾದರೂ ಮಾಡಿ ಕಾಪಾಡಿ" ಎಂದು ಬೇಡಿಕೊಂಡರು. ನಾನು ಅವರನ್ನೆತ್ತಿ ನಿಲ್ಲಿಸಿದೆ. ಅವರ ಕೆನ್ನೆಗಳ ಮೇಲಿಂದ ನೀರು ನಿಶ್ಶಬ್ದವಾಗಿ ಇಳಿಯುತ್ತಿತ್ತು. ನಾನು 'ಏನಾಯಿತು?' ಎಂದು ಕೇಳಿದೆ. ಅವರು ನಡೆದ ಕತೆ ಹೇಳಿದರು. ಆ ಕತೆ ಎಷ್ಟು ಸಂಕ್ಷಿಪ್ತವಾಗಿತ್ತೋ ಅಷ್ಟೇ ದುರಂತಮಯವಾಗಿತ್ತು.

ಈತನ ಮಗಳು ಒಬ್ಬ ವಿಧವೆ. ಇವಳೊಬ್ಬಳೇ ಆ ಭೂಮಿಯ ಮೇಲೆ ಈತನಿಗಿರುವ ಸಂಬಂಧಿ. ಈಕೆ ಮಧ್ಯಾಹ್ನದ ಅಡುಗೆ ಮಾಡಲು ಹತ್ತು ಗಂಟೆಯ ಹೊತ್ತಿಗೆ ಸೌದೆ ತರಲು ಕಣಿವೆಯ ಕಡೆಗೆ ಹೋಗಿದ್ದಾಳೆ. ಇವಳು ಹೋಗಿದ್ದ ಕಣಿವೆಯ ತಳದಲ್ಲಿ ಮೇಲಿಂದ ಹರಿದು ಬಂದ ಹಳ್ಳವೊಂದು ಮುಂದೆ ಸಾಗುತ್ತದೆ. ಹಳ್ಳದ ಎದುರಿನ ದಂಡೆಗೆ ಕಡಿದಾದ ಬೆಟ್ಟವಿದೆ. ಈ ಬೆಟ್ಟದ ತಳಭಾಗದ ಇಳಿಜಾರಿನಲ್ಲಿ ಕೆಲವು ಸೋಪಾನ ಮಾದರಿಯ ಗದ್ದೆಯ ತುಂಡುಗಳಿವೆ. ಈಕೆ ಇದರ ಕೊನೆಯ ತುಂಡದ ಕೆಳಗೆ ಸೌದೆ ಆಯುತ್ತಿದ್ದಾಳೆ. ಈ ಜಾಗ ಅವಳ ಮನೆಯಿಂದ ಕೇವಲ ನೂರೈವತ್ತು ಗಜಗಳ ದೂರದಲ್ಲಿದೆ. ಇಷ್ಟು ಸಮೀಪದಲ್ಲಿ ಇದ್ದಕ್ಕಿದ್ದಂತೆ ಪಕ್ಕದ ಗದ್ದೆಯ ಏಣಿನ ಕಡೆಯಿಂದ ಹುಲಿ ಅವಳ ಮೇಲೆ ನೆಗೆದಿದೆ. ಇದು ನೆಗೆಯುವುದನ್ನು ಆ ಹಳ್ಳದ ಸ್ವಲ್ಪ ಮೇಲ್ಭಾಗದಲ್ಲಿ ಬಟ್ಟೆ ಒಗೆಯುತ್ತಿದ್ದ ಇನ್ನೊಬ್ಬ ಹೆಂಗಸು ನೋಡಿ ಕೂಗಿಕೊಂಡಿದ್ದಾಳೆ. ಕೂಡಲೇ ಹಳ್ಳಿಗೆ ಓಡಿ ಬಂದು, ಸುದ್ದಿ ಮುಟ್ಟಿಸಿದ್ದಾಳೆ. ಹಳ್ಳಿಗರೆಲ್ಲಾ ಜೋರಾಗಿ ಕೂಗಿ ಪಕ್ಕದ ಹಳ್ಳಿಯವರನ್ನು ಕರೆದಿದ್ದಾರೆ. ಅದರಲ್ಲಿ ನಾಲ್ಕು ಜನರನ್ನು ನನ್ನನ್ನು ಹುಡುಕಿ ಕರೆತರುವಂತೆ ಸೂಚಿಸಿ ಅಲ್ಲಿಂದಲೇ ಓಡಿಸಿದ್ದಾರೆ. ಉಳಿದವರು ಅವಳ ರಕ್ಷಣೆಗೆ ಹೋಗಲು ಹೆದರಿ, ನನಗಾಗಿ ಕಾಯುತ್ತಾ ಕುಳಿತಿದ್ದಾರೆ. ಇದಕ್ಕೂ ಮುಂಚೆ ನೆಟ್ಟಗೆ ನಿಂತಿದ್ದ ದಿಬ್ಬದಿಂದ ಹುಲಿ ಜಿಗಿಯುವಾಗ ಸೌದೆ ಆಯುತ್ತಿದ್ದ ಹೆಂಗಸು ಅದನ್ನು ನೋಡಿದ್ದಾಳೆ. ತಕ್ಷಣ ಅವಳ ಜಂಘಾಬಲವೇ ಉಡುಗಿ ಹೋಗಿ, ಏನು ಮಾಡಬೇಕೆಂದು ಹೊಳೆಯುವಷ್ಟರಲ್ಲಿ ಹುಲಿ ಅವಳನ್ನು ಕಚ್ಚಿಕೊಂಡು ಹಳ್ಳವನ್ನು ದಾಟಿ ಮುಳ್ಳಿನ ಪೊದೆಗಳತ್ತ ನುಗ್ಗಿದೆ. ಈಕೆಗೆ ಇಷ್ಟು ಮಾತ್ರ ನೆನಪಿದೆ. ಅನಂತರ ಏನಾಯಿತೆಂದು ಗೊತ್ತಿಲ್ಲ. ಈಕೆಗೆ ಮತ್ತೆ ಪ್ರಜ್ಞೆ ಬಂದಾಗ ಹಳ್ಳದಾಚೆಯ ಪೊದೆಗಳ ನಡುವೆ ಬಿದ್ದಿದ್ದಾಳೆ. ಅಲ್ಲಿಂದ ಅವಳಿಗೆ ಕೂಗಿಕೊಳ್ಳಲೂ ಸಾಧ್ಯವಾಗಿಲ್ಲ. ದಿಕ್ಕು ತೋಚದಂಥ ಸ್ಥಿತಿಯಲ್ಲಿ ಕಾಲು-ಕೈಗಳನ್ನು ನೆಲಕ್ಕೆ ಊರಿಕೊಂಡು, ಪ್ರಾಣಿಯಂತೆ ತೆವಳುತ್ತಾ ಹಳ್ಳಿಯನ್ನು ತಲುಪಿದ್ದಾಳೆ.

ಈ ಕತೆಯನ್ನು ಹೇಳಿ ಮುಗಿಸುವಲ್ಲಿಗೆ ನಾನು ಆ ಹೆಂಗಸಿನ ಮುಂದಿದ್ದೆ. ಅದು ಕೇವಲ ಒಂದು ಬಾಗಿಲು ಮಾತ್ರವಿದ್ದ ಕೊಠಡಿ. ನಾನು ಒಳಹೊಕ್ಕಾಗ ಇಡೀ ಕೊಠಡಿ ಧಗೆಯಿಂದ ಬೇಯುತ್ತಿತ್ತು. ನಾನು ಆಕೆಗೆ ಹೊದಿಸಿದ್ದ ರಕ್ತಮಯವಾದ ಬಟ್ಟೆಗಳನ್ನು ಮೊದಲು ತೆಗೆದು ಹಾಕಿದೆ. ಆಗ ನನ್ನ ಕಣ್ಣಿಗೆ ಬಿದ್ದ ಅವಳ ಗಾಯಗಳನ್ನು ನೋಡಿ ಮರಗಟ್ಟಿ ಹೋದೆ. ಆ ಯಾತನಾಮಯ ಸ್ಥಿತಿಯನ್ನು ಇಲ್ಲಿ ವರ್ಣಿಸುವುದು ಬೇಡ. ನಾನೊಬ್ಬ ಸೂಕ್ತ ವೈದ್ಯಕೀಯ ಶಿಕ್ಷಣ ಪಡೆದ ವ್ಯಕ್ತಿಯಾಗಿದ್ದರೆ, ನನ್ನ ಬಳಿ ಚಿಕಿತ್ಸೆಗೆ ಅಗತ್ಯವಾದ ಉಪಕರಣ ಹಾಗೂ ಔಷಧಿಗಳಿದ್ದ ಪಕ್ಷದಲ್ಲಿ ಏನಾದರೂ ಮಾಡಬಹುದಿತ್ತೇನೋ?! ಈಗ ನನ್ನ ಬಳಿ ಒಂದಿಷ್ಟು ಪೊಟಾಷಿಯಂ ಪರ್ಮಾಂಗನೇಟಿನ ಪುಡಿಯನ್ನು ಬಿಟ್ಟರೆ ಬೇರೊಂದಿಲ್ಲ. ಹುಲಿಯ ಕೋರೆ-ಪಂಜಗಳಿಂದ ಹರಿದಿರುವ ಅವಳ ದೇಹದ ಬಹುಪಾಲನ್ನು ಕಾಪಾಡುವ ಸಾಮರ್ಥ್ಯ ಈ ಪುಡಿಗಿಲ್ಲ ಎಂಬುದು ನನಗೆ ಗೊತ್ತಿದೆ. ಅಲ್ಲದೆ ಈಗಾಗಲೇ ಅವಳ ಗಾಯಗಳು ಕೊಳೆಯಲು ಆರಂಭಿಸಿವೆ. ಆಕೆ ಅರೆ ಪ್ರಜ್ಞಾವಸ್ಥೆಯಲ್ಲಿದ್ದಾಳೆ. ನನಗೆ ಏನು ಮಾಡಬೇಕೆಂದು ಹೊಳೆಯುತ್ತಿಲ್ಲ. ಅಷ್ಟರಲ್ಲಿ ಆಕೆಯ ತಂದೆ ಒಳಕ್ಕೆ ಬಂದರು. ನಾನು ಅವರ ಸಮಾಧಾನಕ್ಕೆಂದು ನನ್ನ ಕರವಸ್ತ್ರವನ್ನು ತೆಗೆದು ಗಾಯಗಳ ಮೇಲೆ ಹೆಪ್ಪುಗಟ್ಟಿದ್ದ ರಕ್ತವನ್ನು ಸಾಧ್ಯವಾದ ಮಟ್ಟಿಗೆ ಒರೆಸಿ, ಸಾಧ್ಯವಿರುವ ಕಡೆ ಪರ್ಮಾಂಗನೇಟಿನ ಪುಡಿಯನ್ನು ಹಾಕಿದೆ. ಇದರಿಂದಾಚೆಗೆ ನಾನು ಅಸಹಾಯಕನಾಗಿದ್ದೆ.

ಇವೆಲ್ಲಾ ಮುಗಿಯುವ ಹೊತ್ತಿಗೆ ನಾನು ಕ್ಯಾಂಪಿಗೆ ಹಿಂತಿರುಗುವ ಸಾಧ್ಯತೆ ಕಳೆದುಹೋಗಿತ್ತು. ರಾತ್ರಿಗೆ ಉಳಿದುಕೊಳ್ಳಲು ಜಾಗ ಹುಡುಕಿಕೊಳ್ಳಬೇಕಿತ್ತು. ನಾನು ಸೀದಾ ಆ[illegible]ದ ಕಡೆಗೆ ನಡೆದೆ. ಹೆಂಗಸು [illegible]ಟ್ಟೆ ಒಗೆಯುತ್ತಿದ್ದ ಜಾಗದಲ್ಲಿ ನಿಂತು ಸಮೀಕ್ಷಿಸಿದೆ. ಅಲ್ಲೊಂದು ದೊಡ್ಡ ಅರಳೀಮರವಿತ್ತು. ಅದರ ಸುತ್ತ ಕಟ್ಟೆ ಕಟ್ಟಲಾಗಿತ್ತು. ಮರವೂ ಬಲಿಷ್ಠವಾಗಿತ್ತು. ನಾನು ನನ್ನ ಬಟ್ಟೆಗಳನ್ನು ಬಿಚ್ಚಿ ಕಟ್ಟೆಯ ಮೇಲಿಟ್ಟು ಸ್ನಾನಕ್ಕಿಳಿದೆ. ಸ್ನಾನದ ನಂತರ ಟವಲ್ಲಿನ ಕೆಲಸವನ್ನು ಗಾಳಿಯೇ ಮಾಡುವವರೆಗೆ ಕಾದಿದ್ದು, ಬಟ್ಟೆಹಾಕಿಕೊಂಡು, ಸಿದ್ಧವಾಗಿದ್ದ ಬಂದೂಕವನ್ನು ಪಕ್ಕದಲ್ಲಿಟ್ಟುಕೊಂಡು ಮಲಗಿದೆ. ಹಾಗೆ ನೋಡಿದರೆ ಇದು ರಾತ್ರಿ ಕಳೆಯುವಂಥ ಜಾಗವಲ್ಲ. ಆದರೆ ಆ ಹಳ್ಳಿಯ ಧಗೆ ತುಂಬಿದ... ವಾಸನಾಮಯ... ಮುಚ್ಚಿದ ಕೊಠಡಿಗಳಿಗಿಂತ ಹಾಗೂ ಎಚ್ಚರವಾಗಿದ್ದರೂ ಇರುವ ರಕ್ತವನ್ನೆಲ್ಲಾ ಹೀರಿ ಬಿಡುವ ಸೊಳ್ಳೆಗಳ ಕಾಟಕ್ಕಿಂತ ಇದು ಎಷ್ಟೋಪಾಲು ಮೇಲಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಹರಿದ ದೇಹದೊಂದಿಗೆ ಉಸಿರಿಗಾಗಿ ಹೋರಾಡುತ್ತಿರುವ ಆ ಹೆಂಗಸಿನ ನರಕ ಸದೃಶ ಹಿಂಸೆಗೆ ಅಷ್ಟು ಹತ್ತಿರದಲ್ಲಿ ಇರುವುದಕ್ಕಿಂತ ಇದು ಬೇರೆಯಾಗಿತ್ತು.

ನಡುರಾತ್ರಿಯ ಹೊತ್ತಿಗೆ ಆ ಹೆಂಗಸು ತನ್ನೆಲ್ಲಾ ಯಾತನೆಗಳಿಂದ ಮುಕ್ತಳಾದಳು ಎಂದು ಹಳ್ಳಿಗರು ಘೋಷಿಸಿದರು. ಈ ಮುಂಚೆಯೇ ಶವಸಂಸ್ಕಾರಕ್ಕೆ ಸಿದ್ಧತೆಗಳು ನಡೆದಿದ್ದ ಕಾರಣ ಬೆಳಿಗ್ಗೆ ನಾನು ಹೊರಡುವ ಹೊತ್ತಿಗೆ ಆಕೆಯ ಅಪರ ಕರ್ಮಗಳು ಮುಕ್ತಾಯದ ಹಂತದಲ್ಲಿದ್ದವು.

ಈ ನತದೃಷ್ಟ ಹೆಂಗಸು ಮತ್ತು ದಲ್ಕಾನಿಯಾದ ಆ ಅದೃಷ್ಟವಂತ ತಾಯಿಯ ವಿಷಯಕ್ಕೆ ಸಂಬಂಧಿಸಿದಂತೆ ಯೋಚಿಸಿದಾಗ ಈ ನರಭಕ್ಷಕಿಯ ಬಗ್ಗೆ ಒಂದು ಸಣ್ಣ ಅನುಮಾನ ಹುಟ್ಟಿಕೊಂಡಿತು. ಮರಿಯ ಸಾವಿನ ನಂತರ ಹಿಡಿಯಲು ಹೋದ ಇಬ್ಬರನ್ನೂ ಅದು ಕೊಂದು, ಎತ್ತಿಕೊಂಡು ಹೋಗಲಾಗಿಲ್ಲ. ಇದಕ್ಕೆ ಎರಡು ಅರ್ಥಗಳಿವೆ; ಒಂದು, ಈವರೆಗೂ ಅದು ನರ ಶಿಕಾರಿಗೆ ತನ್ನ ಮರಿಯನ್ನು ಅವಲಂಬಿಸಿತ್ತು. ಎರಡು, ಅದು ಮನುಷ್ಯರನ್ನು ಕೊಂದು, ಎತ್ತಿಕೊಂಡು ಹೋಗುವ ಸಾಮರ್ಥ್ಯ ಹೊಂದಿಲ್ಲ ಎಂಬುದು. ಹಾಗಾಗಿಯೇ ಮರಿಯ ಸಾವಿನ ನಂತರ ಅದು ದಾಳಿಮಾಡಿದ ಎಲ್ಲರೂ ಬಚಾವಾಗುತ್ತಿದ್ದಾರೆ. ಇದು ಗಾಯಗೊಳಿಸಿ ಬಿಡಬಲ್ಲುದೇ ವಿನಃ, ಸ್ಥಳದಲ್ಲೇ ಅವರನ್ನು ಕೊಲ್ಲಲಾಗುತ್ತಿಲ್ಲ. ಹಾಗಾಗಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆತರೆ ದಾಳಿಗೀಡಾದ ಮನುಷ್ಯರು ಬದುಕುಳಿಯಬಲ್ಲರು ಎನಿಸಿತು. ಆದರೆ ಚಿಕಿತ್ಸೆಗೆ ಹೋಗಬೇಕೆಂದರೆ ತೀರಾ ಹತ್ತಿರದ ಆಸ್ಪತ್ರೆ ಇರುವುದು ನೈನಿತಾಲ್‌ನಲ್ಲಿ. ಅದು ಇಲ್ಲಿಂದ ಐವತ್ತು ಮೈಲಿಗಳ ದೂರದಲ್ಲಿದೆ. ಹೀಗಾಗಿ, ನಾನು ನೈನಿತಾಲಿಗೆ ಹಿಂತಿರುಗುತ್ತಿದ್ದಂತೆ ಈ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದೆ. ಮನವಿಯನ್ನು ಮನ್ನಿಸಿ ಅವರು ಈ ಪ್ರದೇಶದ ಎಲ್ಲ ಹಳ್ಳಿಗಳ ಮುಖ್ಯಸ್ಥರ ಮನೆಯಲ್ಲಿ ಪ್ರಥಮ ಚಿಕಿತ್ಸೆಯ ಔಷಧ-ಸಲಕರಣೆಗಳು ದೊರೆಯುವಂತೆ ಮಾಡಿದ್ದರು. ಇದರಲ್ಲಿ ಆಂಟಿಸೆಪ್ಟಿಕ್ ಔಷಧಿಯೂ ಇತ್ತು. ನಾನು ಮತ್ತೆ ಈ ಹಳ್ಳಿಗಳಿಗೆ ಭೇಟಿಕೊಟ್ಟಾಗ ಈ ಔಷಧಗಳು ಅನೇಕರ ಜೀವ ಉಳಿಸಿದ್ದನ್ನು ಹಳ್ಳಿಗರು ತಿಳಿಸಿದರು.

(ಮುಂದುವರೆಯುತ್ತದೆ)

"ಹೇಳದೆಕೇಳದೆ ಸತ್ರೆ ನಾನೇನು ಮಾಡಕಾಗುತ್ತೆ!

ಥೂತ್ತೇರಿ

ಯಾಹೂ

ಈ ಧರ್ಮಭೂಮಿಯಲ್ಲಿ ಹೊಟ್ಟೆಪಾಡಿನವರ ಅವತಾರಗಳು ಅಸಂಖ್ಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆಯಂತಲ್ಲಾ. ಒಂದೇ ಒಂದು ಸ್ಟಾಂಪಲ್ಲು ಕೊಡುವುದಾದರೆ "ಕರ್ನಾಟಕದಲ್ಲಿ ದುಡ್ಡು, ಕಾಸು ಮತ್ತು ರಾಜಕೀಯ ಪ್ರಭಾವವಿರುವ ಮಠಗಳು ಮತ್ತು ಮಠಾಧಿಪತಿಗಳ ಫೋಟೋ ಇರುವ ಪುಸ್ತಕ ತಂದರೆ ಹೇಗೆ" ಎಂಬ ದುರಾಲೋಚನೆ ಯಾವ ತಲೆಯಲ್ಲಿ ಚಿಗುರೊಡೆಯಿತೊ ಏನೊ. ಅದಕ್ಕೊಬ್ಬ ಮಾರ್ಗದರ್ಶಕನೂ ಸಿಕ್ಕಲಾಗಿ ಮಠ ಪೀಠಗಳ ದರ್ಶನವೊಂದು ರೆಡಿಯಾಗುವ ಮುನ್ನ ಜಾಹೀರಾತು ತಂಡಗಳು ನಾಡಿನಾದ್ಯಂತ ಅಲೆದು ಸುಲಿಗೆಯನ್ನೆ ಮಾಡಿದವಂತಲ್ಲಾ. ನಿಜಕ್ಕೂ ಇದು ಮಠ-ಪೀಠದರ್ಶನವೊ, ಅಥವಾ ಜಾಹೀರಾತು ವಸೂಲಿಯೋ ಎಂಬ ಚರ್ಚೆಯು ಧರ್ಮಭೂಮಿ ವಿಶೇಷಾಂಕದೊಳಕ್ಕೆ ಸೇರಲಾಗದ ಬಡ ಮಠಾಧಿಪ[illegible]ಯುತ್ತ "ಅಂತೂ ಮಠಾಧಿಪತಿಗಳು ತಮ್ಮನ್ನು ಜಾಗೀರು ಮಾಡಿಕೊಳ್ಳಲು ಜಾಹೀರಾತು ಕೊಡುವಂತಾಯ್ತು. ಇದೇ ಈ ಧರ್ಮಭೂಮಿಯ ಕರ್ಮಕಾಂಡ" ಎಂದು ಆಡಿಕೊಳ್ಳುತ್ತ ಕುಳಿತಿದ್ದಾರಂತಲ್ಲಾ, ಥೂತ್ತೇರಿ!

* * * * *

ಪೀಠಾಧಿಪತಿಗಳು ಜಾಹೀರಾತಿನಿಂದ ತಮ್ಮ ಜಾತಕವನ್ನು ಅವರ ಜಗತ್ತಿಗೆ ತಿಳಿಸಿಕೊಡುತ್ತಿರುವಾಗಲೇ, ನಮ್ಮ ಭಯಂಕರ ಕಾದಂಬರಿಕಾರ ಭೈರಪ್ಪ ಕಾದಂಬರಿಕಾರನೇ ಅಲ್ಲ ಎಂದು ಅನಂತಮೂರ್ತಿ ಹೇಳಿದ್ದು ಭೈರನ ಜಾಹೀರಾತಿನ ವಿಭಾಗದಂತಿರುವ ಚೆಡ್ಡಿಗಳಿಗೆ ಶಾನೆ ಚುರುಕು ಮುಟ್ಟಿಸಿತಂತಲ್ಲಾ. ಇದರಿಂದ ಏನೂ ವಿಚಲಿತರಾಗದ ಭೈರಪ್ಪ "ನನ್ನ ಕಾದಂಬರಿಯನ್ನು ಅನಂತಮೂರ್ತಿ ಮೆಚ್ಚದಿದ್ದರೇನು. ನಮ್ಮ ಶಂಕರಮೂರ್ತಿ ಮೆಚ್ಚಿದ್ದಾರಲ್ಲ, ಅಷ್ಟೇ ಸಾಕು" ಎಂದರಂತಲ್ಲಾ. ಈ ಹೊಗಳಿಕೆಯಿಂದ ಶೆಟ್ಟಿ ಉತ್ಸಾಹಗೊಂಡು "ಭೈರಪ್ಪ ನೀನೇನು ಬೇಜಾರಾಗಬೇಡ. ಕಾದಂಬರಿ ಬರಿ. ಅದರ ವ್ಯಾಪಾರಕ್ಕೆ ನಮ್ಮ ಹುಡುಗರಿದ್ದಾರೆ. ಅದರ ವಿಮರ್ಶೆಗೆ ನಮ್ಮದೇ ಆದ ಪತ್ರಿಕೆಗಳೂ ಇವೆ. ಆದ್ದರಿಂದ ಆ ಟಿಪ್ಪುಸುಲ್ತಾನ್ ಏನು ಮಾಡಿದ, ಅವನ ಮಕ್ಕಳೆಷ್ಟು ಅವಾಂತರಕಾರಿಗಳು, ಅವರಿಂದ ಶ್ರೀರಂಗಪಟ್ಟಣ ಹೇಗೆ ಹಿಂದುಳಿದಿದೆ, ಅಲ್ಲಿ ಹೇಗೆ ಕನ್ನಡ ಹಾಳಾಗಿ ಪಾರಸಿ ಭಾಷೆ ಬೆಳೆದಿದೆ ಅನ್ನೊದನ್ನೆಲ್ಲಾ ಕೂಡಲೇ ಬರಿ. ಇಂಕು ಪೆನ್ನು ಬೇಕಾದ್ರೆ, ನಾನೇ ಕನ್ಸಸನ್ ರೇಟಲ್ಲಿ ಕೊಡುಸ್ತಿನಿ" ಎಂದಿಲ್ಲವಂತಲ್ಲಾ, ಥೂತ್ತೇರಿ!

* * * * *

ನಮ್ಮ ಹಳ್ಳಿಮುಖದ ಮುಖ್ಯಮಂತ್ರಿ ಹಂದಿಗೋಡು ಕಾಯಿಲೆ ಜನರನ್ನು ನೋಡಲೆಂದು ಹೋಗಿದ್ದರ ಪರಿಣಾಮ ಕುರಿತು ಒಂದೆರಡು ಮಾತನಾಡಬೇಕೆನಿಸಿತಲ್ಲಾ, ಅನುಮಾನದಿಂದಲೇ ಫೋನ್ ಮಾಡಿದರೆ ಫೋನ್ ರಿಂಗಾಯ್ತು, "ಕರಿಯಾ ಐ ಲವ್ ಯು....."

"ಹಲೋ ಸಾರ್, ನಾನು ಯಾಹೂ."

"ಏನೇಳಿ ಯಾಹೂ ಅವರೆ?"

"ಹ್ಯಂಗಿದೆ ಸಾರ್ ಉಳ್ಳಾಲದಲ್ಲಿ?"

"ಅಲ್ಲಿ ನಾವೇನು ಗೆಲ್ಲಬೇಕು ಅಂತ ಕ್ಯಾಂಡೇಟ್ ಹಾಕಿರಲಿಲ್ಲ. ಒಂದೈದಾರು ಸಾವಿರ ಓಟನ್ನ ಕಿತ್ತು ಬಿಜೆಪಿಗೆ ಹೆಲ್ಪ ಮಾಡನ ಅಂತ ಪ್ರಯತ್ನ ಮಾಡಿದ್ದಿವಿ."

"ಶಿವಮೊಗ್ಗದ ಚುನಾವಣೆ ತರ ಅನ್ನಿ?"

"ಹೌದು. ನಾವು ಗೆಲ್ಲಕ್ಕಾಗದೆಯಿದ್ರು ನಮ್ಮ ಜೊತೆ ಇರತಕ್ಕಂತಾ ಅಭ್ಯರ್ಥಿಗಳೇನವುರೆ, ಅವುರು ಗೆಲ್ಲಿ ಅನ್ನೊದು ನಮ್ಮ ಭಾವನೆ."

"ಒಳ್ಳೆ ರಾಜಕಾರಣ ಸಾರ್. ದೇವೇಗೌಡ್ರು ಕೂಡ ಇಂತ ರಾಜಕಾರಣ ಮಾಡಿ ಸದಾನಂದಗೌಡನ್ನ ಗೆಲ್ಸಿಸಿದ್ರು."

"ನಮಗೆ ಬೇಕಾದವರನ್ನ ಗೆಲ್ಸಿಕೊಬೇಕಾದ್ರೆ ಇವೆಲ್ಲ ಮಾಮೂಲು."

"ಇನ್ನೊಂದು ವಿಷಯ ಸಾರ್, ಹಂದಿಗೋಡು [illegible]ಯಿರೊ ಊರಿಗೋಗಿದ್ರಿ, ಅಲ್ಲೇನು [illegible]ದ್ರಿ ಸಾರ್?"

"ಬಾಳ ವಿಚಿತ್ರ ಕಾಯಿಲೆ ಕಂಡ್ರಿ ಅದು. ಪೋಲಿಯೋ ತರನೂ ಕಾಣಲ್ಲ, ಹ್ಯಳವರಂಗೂ ಕಾಣಲ್ಲ. ಅದೇನು ಅಂತ ಗೊತ್ತಾಗಲಿಲ್ಲ."

"ನೀವು ಪರೀಕ್ಷೆ ಮಾಡಿದ್ರ?"

"ಎಲ್ಲಾರ್ನು ಸಾಲಗೆ ನಿಲ್ಸಿ ನೋಡಿದೆ. ಏನೂ ಅಂತ ತಿಳಿಲಿಲ್ಲ, ಏನೇಳಬೇಕು ಅಂತ್ಲೂ ಗೊತ್ತಾಗಲಿಲ್ಲ."

"ಮತ್ತೆ ಪರಿಯಾರ ಹೆಂಗೆ ಸಾರ್?"

"ಪರಿಯಾರ ಏನು ಅಂತ್ಲೆ ತಿಳಿತಾಯಿಲ್ಲ ಕಂಡ್ರಿ"

"ಮತ್ತೆ ನೀವು ಹೋಗಿದ್ದು ವೇಸ್ಟಾಯಿತಲ್ಲ ಸಾರ್?"

"ಅಂಗೆ ಅನ್ನುಸ್ತಾಯಿದೆ."

"ಈ ಕಾಯಿಲೆ ವಿಷಯದಲ್ಲಿ ಕಾಂಗ್ರೆಸ್ಸಿನವರ ಕೈವಾಡ ಏನಾರ ಕಾಣ್ತಾಯಿದಿಯಾ?"

"ಕಾಣದೇನು, ಸ್ಪಷ್ಟವಾಗೆ ಇದೆ. 1974 ರಿಂದ ಅಲ್ಲಿ ಕಾಂಗ್ರೆಸ್ಸಿನವುರೆ. ಒಂದು ಸಾರಿ ಏನೊ ಜನತಾದಳ ಬಂದಿತ್ತಂತೆ. ಆಗ ಈ ಕಾಯಿಲೆ ಅಷ್ಟು ತೊಂದರೆ ಕೊಟ್ಟಿರಲಿಲ್ಲವಂತೆ. ಏನೇ ಆಗ್ಲಿ ತುಂಬ ಹಳೆ ಕಾಯಿಲೆ ಕಂಡ್ರಿ ಅದು."



"ಆದ್ರು ಜನ ನಿಮ್ಮ ಕಡೆ ನೋಡ್ತ ಅವುರೆ?"

"ಕರ್ನಾಟಕದ ಪ್ರತಿ ಕುಟುಂಬಕ್ಕೂ ನಮ್ಮ ಸಹಾಯ ದೊರಿಬೇಕು ಅನ್ನೊದು ನಮ್ಮ ಒಂದು ಅಪೇಕ್ಷೆ. ಆದ್ರೆ ಇಂತ ಕಾಯಿಲೆಗೆಲ್ಲ ಏನು ಮಾಡದೂ ಅನ್ನದೇ ತಿಳಿತಾಯಿಲ್ಲ."

"ಇನ್ನೊಂದು ವಿಷಯ ಸಾರ್..."

"ಅದೇನೇಳ್ರಿ ಬೇಗ."

"ರೈತರು ಆತ್ಮಹತ್ಯೆ ಮಾಡಿಕೊಂಡ್ರೆ ರಾಜೀನಾಮೆ ಕೊಡ್ತಿನಿ ಅಂದಮೇಲೆ ಮೂರು ಜನ ರೈತರು ಸತ್ರು ಸಾರ್."

"ಹೇಳದೆಕೇಳದೆ ಅಂಗೆ ಸೂಸೈಡ್ ಮಾಡಿಕೊಂಡ್ರೆ ನಾನೇನು ಮಾಡಕಾಗುತ್ತೇರಿ? ನನ್ನ ಕೇಳಬೇಕಾಗಿತ್ತು. ನಾನು ಅಧಿಕಾರದಲ್ಲಿ ಇರೋವರಿಗಾದ್ರು ಸುಮ್ಮನಿರಿ ಅಂತ ನಮ್ಮ ತಂದೆ ಕೈಲಾದ್ರು ಹೇಳುಸತಿದ್ದೆ."

"ಥೂ, ಥೂ, ಥೂತ್ತೇರಿ!!!

ಕುಮಾರಸ್ವಾಮಿ ರೈತರಿಗ್ಯಲ್ಲ ಬೋದನಂತೆ ಯಾಕ್ಲ?

ಮುಂಗಾರು ಮಳೆ ಬಿದ್ದ ಕೂಡಲೇ ಎಲ್ಲರೂ ಆರೂಡಬೇಕು. ಅಕಸ್ಮಾತ್ ಆರೂಡದೆ ಊರ ಮುಂದಿನ ತೋಟೆಲಿನಲ್ಲಿ ಕುಳಿತವರು ರೈತಾಪಿ ಜನರಿಂದ ಅಗೌರವಕ್ಕೆ ತುತ್ತಾಗುತ್ತಿದ್ದರು. ಅಂತಹ ಕಾಲವೊಂದು ಮೊನ್ನೆ ಮೊನ್ನೆಯವರೆಗೂ ಇತ್ತು. ಆದರೀಗ ಅಂತಹ ಆತಂಕ ಯಾರಿಗೂ ಇಲ್ಲ. ದನಗಳಿದ್ದವನೇ ಪಜೀತಿ ಪಡುವಂತೆ ಕಾಣುತ್ತಿದ್ದಾನೆ. ಕೇವಲ ನಾನೂರು ರೂ. ಜೋಡಿಸಿ ಟ್ರ್ಯಾಕ್ಟರಿದ್ದವನಿಗೆ ಕೊಟ್ಟರಾಯ್ತು, ಆತ ಸೀಳುಕ್ಕೆ ಕೆರೆದುಬಿಡುತ್ತಾನೆ. ಈ ಸೀರನ ಬಳಿ ನಾನೂರು ರೂಪಾಯಿಗಳೂ ಇರಲಿಲ್ಲ. ಆದ್ದರಿಂದ,

"ಲೇ ಉಗ್ರಿ, ನಿಂತಯಿರೂ ಹೋರಿಗರ ಕೊಡ್ಡ. ನನ್ನ ಹುಸಿನ ಜ್ವತೆ ಹೂಡಿ ದರೆವಲ ಕ್ಯರಿತಿನಿ" ಎಂದ.

ಬಯಲು ಸೀಮೆಯ ಕಟ್ಟೆಪುರಾಣ

■ಬಿ. ಚಂದ್ರೇಗೌಡ

"ಅದಕಿನ್ನು ನೇಗ್ಲು ಪಾಠ ಮಾಡಿಲ್ಲ ಕಣೊ."

"ಪಾಠ ಮಾಡದಿದ್ರೇನ್ಲ, ಅನುಭವಿರೊ ಹಸ ಥೊನಿಕೊಂಡೋಯ್ತದೆ. ಈ ಕರ ಸುಮ್ಮನೆ ಕಾಲಾಕಿದ್ರಾಯ್ತು."

"ಆದ್ರು ನೇಗಲೂಡಿದಾಗ ಹೆದರತದೆ ಕಣೊ. ಯಾರಾರ ಕೊಳ್ಳುರಿ ಹಿಡಕಂಡು ಪಾಠ ಮಾಡಬೇಕು."

"ಒಂದತ್ತು ಸುತ್ತು ಬಂದ್ರು ಸಾಕು ಕಂದ್ಯ ಅಮ್ಯಾಲದೇ ಹೋಯ್ತದೆ. ನೀನು ಸುಮ್ಮನೆ ಕೊಡು ಹೇಳ್ತಿನಿ."

"ಆಯ್ತು ಹಿಡಕಂಡೋಗಿ ಹೂಡು, ವಳ್ಳೆ ಕುಮಾರ ಸ್ವಾಮಿನೂ ಎಡೂರಪ್ಪನ್ನೂ ಹೂಡಿದಂಗಾಯ್ತದೆ."

"ಸರಕಾರ ಮಾಡಿದಾಗ ಅವುರಿಗ್ಯಾವ ಅನುಭವಿತ್ತೂ? ಈಗ ಯಂಗೊ ಯಳಕಂಡೋಯ್ತಾಯಿಲವೆ, ಅಂಗಾಯ್ತದೆ ತಗೊ" ಎಂದಳು ಜುಮ್ಮಿ.

"ಸರಕಾರ ನ್ಯಡಕಂಡೋಯ್ತಾ ಅದೆ ಅಂದ್ರೆ, ಮೇಣಿ ಹಿಡದಿರೋನ ಹಿಡತ ಅಂಗದೆ ಕಣೇ."

"ಮೇಣಿ ಹಿಡದಿರೋನ್ಯಾರ್ಲ?"

"ಇನ್ಯಾರೆ, ದ್ಯಾವೇಗೌಡನೆ ಅಲವೆ? ಯಡಗೋಲ್ಯಾವಾಗ ಮಿಸುಗಬೇಕು, ಬಲಗೋಲ್ಯಾವಾಗ ಬಾಲ ತಿರುವುಬೇಕು ಅಂತ ಗೊತ್ತವುನಿಗೆ. ಅದ್ಕೆ ನೋಡು ಉಳ್ಯಾಲಕೋಗಿ ಯಂತ ಉಳ್ಯಾಕ್ಯವುನೆ."

"ಉಳ್ಯಾಲದಲ್ಲೇನು ಉಳ್ಯಾಕಿದ್ವನ್ಲ?"

"ಅಲ್ಲಿ ಚುನಾವಣೆ ನ್ಯಡಿತಯಿದ್ರೆ ಅನ್ಸಾರಿ ಅನ್ನೊ ಸಾಬಿ ಕೈಲಿ ಕುಮಾರಣ್ಣ ಮುಂದಕೂ ಮುಖ್ಯಮಂತ್ರಿಯಾಗಿ ಮುಂದುವರಿತನೆ ಅಂತ ಅನ್ನಿಸ್ಯವುನೆ. ಈ ಮಾತು ಬಿಜೆಪಿ ಕೊರಳಿಗೆ ಉರುಳಾಗಿ ಅವು ಮಾತಾಡಕ್ಯಾಗದೆ ಡಲ್ಲಾಗಿದ್ದವಂತೆ."

"ಅಂಗರೆ ಬಿಜೆಪಿಗಳು ಮಂಕಾಗಿದ್ದೊ ಅನ್ನು?"

"ಊ, ಎಡೂರಪ್ಪಾಗಲೇ ನನ್ನಣೆ ಬರ ಇದ್ದಂಗಾಯ್ತದೆ ಅಂತ ಅವುನೆ. ಕುಮಾರಸ್ವಾಮಿನೂ ನನ್ನಣೆಲಿ ಏನು ಬರದದೊ ಅದಾಯ್ತದೆ ಅಂದವುನೆ."

"ಅವುರಣೆಲಿ ಬರಿದಿರೋನು ಬ್ರಹ್ಮಲ್ಲ ಕಣೊ ಉಗ್ರಿ, ದ್ಯಾವೇಗೌಡನೆ ಅಲವೆ ಅವುರಿಗ್ಯಲ್ಲ ಹಣೆಲಿ ಬರಿಯೋನು" ಎಂದು ವಾಟಿಸ್ಸೆ ಬಂದ.

"ವಳ್ಳೆ ಟೇಮಿಗೆ ಬಂದೆ ಬಾ, ನಿನ್ನೇ ಕೇಳಬೇಕು ಅಂತಿದ್ದೆ" ಎಂದ ಸೀರ.

"ಏನು ಕೇಳಬೇಕು ಚಿಗಪ್ಪ?"

"ರೇವಣ್ಣ ಅದ್ಯಾವುದೋ ಊರಿನ ಟಿಬಿಲಿ ಉಳಕಂಡು ಹಂದಿಬಾಡಿನ ಅಡುಗೆ ಮಾಡಿಕ್ಯಲಿಲ್ಲ ಅಂತ ಅಧಿಕಾರಿನೆ ವರ್ಗ ಮಾಡಿದ್ದನಂತೆ ನಿಜವೇನ್ಲ?"

"ಯಾರು ಚಿಗಪ್ಪ ಹೇಳಿದೋರು ನಿಂಗೆ?"

"ಅಲ್ಲಾರಾರೊ ಮಾತಾಡತಯಿದ್ರು, ಕಂದ್ಯ, ಕೇಳಿಸಿ ಗಂಡೆ."

"ಹಂದಿಬಾಡಲ್ಲ ಚಿಗಪ್ಪ ಕಾಡಂದಿ ಬಾಡು ಮಾಡು ಅಂತ ಇಂಜಿನಿಯರ್‌ಗೇಳಿದ್ನಂತೆ. ಕಾಡಂದಿ ಸಿಗಲಿಲ್ಲ, ಇನ್ನ ಊರಂದಿ ಬಾಡನೆ ಬೇಸ್ಯಾಕನ ಅಂದ್ರೆ, ಅದೂ ರೇವಣ್ಣನಿಗೆ ಗೊತ್ತಾದ್ರೆ ಗತಿಯೇನು ಅಂತ ಸುಮ್ಮನಿದ್ದನಂತೆ. ಅದ್ಕೆ ರೇವಣ್ಣ ಅವುನ್ನ ವರ್ಗ ಮಾಡಿದನಂತೆ, ಒಂದು ವರ್ಷದ ಹಳೆ ಕತೆ ನಿನಿಗಿವತ್ತು ಸಿಕ್ಯದಲ್ಲ ಹೇಳು."

"ಅಂತು ನಿಜ ಅನ್ನು?"

"ನನಿಗೂ ನಿನ್ನಂಗೆ ಯಾರೋ ಹೇಳಿದ್ರು. ಅಂತು ರೇವಣ್ಣ ಸಿಟ್ಯಾಗಿ ಮುಖವ ಹಂದಿಯಂಗೇ ಮಾಡಿಕಂಡು ಜೊಲ್ಲು ಸುರಿಸಿಗಂಡು ಜೋರು ಮಾಡಿದನಂತೆ."

"ಕುಮಾರಸ್ವಾಮಿನೂ ಅಂಗೆ ರೈತರಿಗ್ಯಲ್ಲ ಬೋದನಂತೆ. ಯಾಕ್ಲ?" ಎಂದ ಸೀರ.

"ಎಲ್ಲಿ ಬೋದ್ನೊ?" ಎಂದ ಕಾಳಮಾವ.

"ಎಲಿಕಾಬುಟ್ರಲ್ಲಿ ಇಳದೇಟಗೆ ಬೋದನಂತೆ" ಎಂದ ಉಗ್ರಿ.

"ಅದು ವೆರಿ ಇಂಟರೆಸ್ಟಿಂಗ್ ಸ್ಟೋರಿ, ಹೇಳ್ತಿನಿ ಕೇಳು ದ್ವಡಪ್ಪ."

"ಅದೇನೇಳ್ಲ?"

"ಈ ಕುಮಾರಸ್ವಾಮಿ ಎಲಿಕಾಪ್ಟರಲ್ಲಿ ಹೋಯ್ತಾಯಿ ದ್ನಂತೆ. ಆಗ ಹೆಲಿಕಾಪ್ಟರು ಕೆಟ್ಟೋಗಿ ಕೊಡತಿ ಹುಳ ಕ್ಯಳಿಕಳದಂಗೆ ಇಳದೇಬುಡ್ತು. ಕುಮಾರಸ್ವಾಮಿ ಅಂತೂ ಬದುಕಿದನಲ್ಲಾ ಅಂತ ದೇವರು ದಿಂಡ್ರು ನ್ಯನಿಸಿಗಂಡು



ಪೀಠಾಪಹರಣ ಪ್ರಸಂಗ ಎಂಬ ಆಧುನಿಕ ಪ್ರಹಸನವೂ

ಸಿಡಿ ಮಾರಾಟದ ಅಂಗಡಿಯ ಮುಂದೆ ಠಳಾಯಿಸಿದೆ. ಪರಿಚಯಸ್ಥರು ಯಾರೂ ಇಲ್ಲ ಅನ್ನುವುದು ಖಾತರಿಯಾದಾಗ ಒಳಕ್ಕೆ ನುಗ್ಗಿದೆ. ಅಂಗಡಿಯವನೂ ಅನುಭವಸ್ಥ. ಹೀಗೆ ಅಂಜುತ್ತಾ ಅಳುಕುತ್ತಾ ಬರಬೇಕಾದರೆ ಯಾವ ರಖಂ ಸಿಡಿಗಳು ಇವರಿಗೆ ಬೇಕಾಗಿದೆ ಅನ್ನುವುದನ್ನು ಊಹಿಸಿದ್ದ. ಪಕ್ಕದಲ್ಲಿದ್ದ ಯಾರಿಗೂ ಕೇಳಿಸದಂತೆ ನನ್ನ ಕಿವಿಯ ಹತ್ತಿರ ಪಿಸುಗುಟ್ಟಿದ- 'ಯಾವ ಸಿಡಿ ಬೇಕು ಸಾರ್.' 'ಸೆಕ್ಸ್ ಸಿಡಿನಪ್ಪ' ಅಂದೆ. 'ಅದು ತಿಳೀತು ಸಾರ್. ಎಕ್ಸೋ, ಡಬ್ಬಲ್ ಎಕ್ಸೊ, ತ್ರಿಬ್ಬಲ್ ಎಕ್ಸೋ' ಅಂತ ಕೇಳಿದ. ಸೆಕ್ಸ್ ಸಿಡಿನಲ್ಲೂ ಇಂತಹ ರಖಂವಾರು ಇಧಾವೆ ಅನ್ನೋದೆ ಗೊತ್ತಿರಲಿಲ್ಲ, ನನ್ನ ದಡ್ಡತವ ಯಾಕೆ ಅವನ ಮುಂದೆ ಪ್ರದರ್ಶಿಸೋದು ಅಂತ ನೇರವಾಗಿ ವಿಷಯಕ್ಕೆ ಬಂದೆ. 'ಜಯಲಕ್ಷ್ಮಿ-ರೇಣುಕಾಚಾರ್ಯ' ಬೇಕು ಅಂದೆ. 'ಅದಿನ್ನೂ ಮಾರ್ಕೆಟ್‌ಗೆ ಬಂದಿಲ್ಲ ಸಾರ್' ಅಂದ ಅವ ಸ್ವಲ್ಪ ಯೋಚಿಸಿದಂತೆ ಮಾಡಿ 'ಬಿಜೆಪಿ ಕಚೇರೀಲಿ ವಿಚಾರಿಸಿ ಸಾರ್' ಅಂತ ಸಲಹೆ ನೀಡಿದ.



ಏನೋ ಒಂದಷ್ಟು ಹಣ ಬಿಸಾಕಿ, ಸಿಡಿ ತಗೊಂಡು ಸ್ನೇಹಿತರ ಸಂಗಡ ನೋಡುತ್ತ ಕಣ್ಣು ತುಂಬಿಸಿಕೊಳ್ಳೋಣ; ಅದನ್ನು ನೋಡುತ್ತಾ ಆಪ್ತ ಗೆಳೆಯರ ನಡುವೆ ಹೊರಡುವ ಪೋಲಿ ಮಾತುಗಳನ್ನು ಕೇಳಿ ಮುದಗೊಳ್ಳೋಣ ಅಂದರೆ ಇವನು ಹೀಗಂತಿದಾನೆ. ಆದರೂ ಚಪಲ ನೋಡಿ. ಭಾಜಪ ಕಚೇರಿಗೆ ಹೋದೆ. ಅಲ್ಲಿ ನೋಡಿದರೆ ಮೈತ್ರಿ ಉದ್ದ ಕ್ಯೂ ಇದೆ. ಅಧಿಕಾರದಲ್ಲಿರೋ ಪಕ್ಷ, ಯಾರು ಯಾರಿಗೆ ಏನೇನು ತಾಪತ್ರಯವೋ ಏನೋ. ಹೀಗೆ ನಿಂತಿದಾರೆ ಅಂತ ಯೋಚಿಸಿ 'ಏನಪ್ಪ ಇದು ಕ್ಯೂ' ಅಂತ ಅಲ್ಲೇ ಇದ್ದವರನ್ನು ಒಬ್ಬರನ್ನ ಕೇಳಿದೆ. 'ಜ-ರೇ' ಸಿಡಿಗೆ ಸಾ' ಅಂದ ಅವ!

ಥಕ್ಕನೆ ಎಚ್ಚರ ಆಯಿತು. ದೈನಿಕ ಧಾರಾವಾಹಿಯಂತೆ ಬರುತ್ತಿರುವ ಹಾಳಾದ ಜಯಲಕ್ಷ್ಮಿ-ರೇಣುಕಾಚಾರ್ಯ ಸೆಕ್ಸ್ ಹಗರಣ ನೋಡಿ ನೋಡಿ ಮುದಿ ಮನಸ್ಸು ಏನೇನೋ ಕಲ್ಪಿಸಿಕೊಂಡು ಇಂತಹ ಕನಸಿಗೆ ಕಾರಣ ಆಗಿತ್ತು.

ಹಾಗೇ ಯೋಚಿಸಿದೆ. ನರ್ಸ್ ಜಯಲಕ್ಷ್ಮಿ ಈ ಸೆಕ್ಸ್ ಸಿಡಿಯನ್ನು ಅಡ್ವಾಣಿ ಅವರಿಗೆ ಕಳುಹಿಸಿದ್ದಾರಂತೆ. ಇಂತಹ ವಿಷಯಗಳಲ್ಲಿ ಇದೊಂದು ಗೊಡ್ಡು ಪ್ರಾಣಿ. ಅವರ ಬದಲು ವಾಜಪೇಯಿ ಅವರಿಗಾದರೂ ಕಳುಹಿಸಿದ್ದರೆ ನೈಂಟಿ ಎಂಎಲ್ ಸ್ಕಾಚ್ ಜೊತೆಗೆ ಇದನ್ನ ನೋಡ್ತ ರೇಣುಕಾಚಾರ್ಯರ ಲೈಂಗಿಕ ಆಸಕ್ತಿ ಕುರಿತು ತಾರೀಫ್ ಮಾಡುತ್ತಿದ್ದರೋ ಏನೋ. ಅಡ್ವಾಣಿಯವರು ಇದನ್ನು ಮುಖ ಸಿಂಡರಿಸಿಕೊಂಡೇ ನೋಡಿರಬಹುದು. ಕೋಪಾನೂ ಮಾಡಿಕೊಂಡಿರಬಹುದು. ಅದಕ್ಕೇ ಈ ಕಿಲಾಡಿ ನರ್ಸ್ ಅದನ್ನು ಅವರಿಗೆ ಕಳಿಸಿರಬಹುದು!

ಇದು ರಾಷ್ಟ್ರಮಟ್ಟದ ಕೇಸಾಯಿತು. ರಾಜ್ಯಮಟ್ಟದಲ್ಲಿ ಪಕ್ಷದ ಯಾರಿಗೂ ಈ ಸೆಕ್ಸ್ ಸಿಡಿ ಬಗ್ಗೆ ತಿಳಿದೇ ಇಲ್ಲವಂತೆ! ಪಕ್ಷದ ರಾಜ್ಯಾಧ್ಯಕ್ಷ ಸದಾನಂದಗೌಡರನ್ನು ಕೇಳಿದರೆ (ಹಾಳಾದ್ದು ಕೋಪ ಬರಲಿ, ದುಃಖ ಆಗಲಿ ಅವರ ಮುಖದಲ್ಲಿ ಮಾತ್ರ ನಗು ತಾಂಡವವಾಡುತ್ತೆ) ನಗುಮುಖ ಹೊತ್ತು 'ಇಂತಹ ಯಾವ ಸಿಡಿಯೂ ನನ್ನ ಗಮನಕ್ಕೆ ಬಂದಿಲ್ಲ' ಸಿಟ್ಟಿನ ದನಿಯಲ್ಲಿ ಸಿಡುಕುತ್ತಾರೆ. ಹಾಳಾಗಿ ಹೋಗಲಿ ಇದಕ್ಕೆ ಕಾರಣೀಭೂತವಾದ ವ್ಯಕ್ತಿಯನ್ನೇ ಕೇಳೋಣ ಅಂದರೆ ಆ ಮಹಾಶಯರು 'ನನಗೆ ಇದನ್ನೆಲ್ಲ ಯೋಚಿಸಲು ಸಮಯ ಇಲ್ಲ, ನನ್ನದೇನಿದ್ದರೂ ಅಭಿವೃದ್ಧಿ, ಅದರ ಬಗ್ಗೇನೆ ನನ್ನ ಗಮನವೆಲ್ಲ' ಎನ್ನುತ್ತಾರೆ. ಅದೇನು ಅಭಿವೃದ್ಧಿಯೋ, ಯಾರ ಅಭಿವೃದ್ಧಿಯೋ ಏನು ಕತೆಯೋ ತಿಳಿಯಲ್ಲ.

ಈ ಪ್ರೇಮ ಪ್ರಕರಣ ರಾದ್ಧಾಂತದಿಂದ ಕಂಗೆಟ್ಟಿರುವವರು ಜಯಲಕ್ಷ್ಮೀನೂ ಅಲ್ಲ, ರೇಣುಕಾಚಾರ್ಯನೂ ಅಲ್ಲ, ಪರಂತು ಉಪಮುಖ್ಯಮಂತ್ರಿ ಯಡಿಯೂರಪ್ಪನವರಂತೆ! ಇಂತಹ ಶಿಷ್ಯನನ್ನು ಬೆಳೆಸಿದ್ದು ಅದೆಂತದ್ದೋ ದೆವ್ವವನ್ನು ಬೆನ್ನಿಗೆ ಕಟ್ಟಿಕೊಂಡ ನೆನಪು ಅವರನ್ನು ಬಾಧಿಸುತ್ತಿದೆಯಂತೆ. ಮುಖ್ಯಮಂತ್ರಿಯಾಗುವ ತಮ್ಮ ಕನಸಿಗೆ ಇಂತಹ ಇನ್ನೆಷ್ಟು ತೊಡರುಗಳಿವೆಯೋ ಎಂಬುದಾಗಿ ಚಿಂತಿಸುತ್ತಾ ಇದ್ದಾರಂತೆ. ಹಾಗೇ ಫ್ಲಾಷ್‌ಬ್ಯಾಕ್‌ಗೆ ಸರಿದರೆ ಹೀಗಿರಬಹುದಾ....

ಪೀಠಿಕೆ: ದೇವೇಗೌಡರು ಎಣೆದಿದ್ದ ಬಲೆ ಗೋಚರಿಸಿತು.

'ಕರ್ನಾಟಕದ ಅಭಿವೃದ್ಧಿಗೆ ಮಾತ್ರ ಈ ಮೈತ್ರಿ' ಗುಡುಗಿದರು ಗೌಡರು.

ಬಾಲ ಅಲ್ಲಾಡಿಸಿತು ಭಾಜಪ ಗಣ.

'ರಾಜಧರ್ಮ ಮರೆಯಬಾರದು' ಎಚ್ಚರಿಸಿದರು.

ಇದರ ಮೂಲ ತಮ್ಮ ಗುರುಗಳೇ ತಾನೇ? ಹೂಂಗುಟ್ಟಿತು ಈ ಗಣ.

'ಲಕ್ಷ್ಮಣರೇಖೆ ಮೀರಬಾರದು.'

ಶ್ರೀರಾಮಚಂದ್ರನ ಉತ್ತರಾಧಿಕಾರರಲ್ಲವೆ? ಆಗಲಿ ಎಂದಿತು.

ಮುಖ್ಯಮುಂತ್ರಿ ಪದವಿ ವಿಚಾರ ಎತ್ತಿದರು. 'ಭಾರತೀಯ ಜನತಾ ಪಕ್ಷದ ಯಾರಿಗೂ ಮುಖ್ಯಮಂತ್ರಿಯಾಗಲು ಅನುಭವ ಇಲ್ಲ' ಎಂದು ಬಹಿರಂಗವಾಗಿ ಸಾರಿದರು.

ಕುಮಾರಸ್ವಾಮಿಗೆ ಯಾವ ಅನುಭವ ಇತ್ತು? ಯಡಿಯೂರಪ್ಪಗೆ ವಿರೋಧ ಪಕ್ಷದ ನಾಯಕನಾಗಿಯಾದರೂ ಅನುಭವ ಇತ್ತು, ಅವರಿಗೆ ಅದೂ ಇರಲಿಲ್ಲವಲ್ಲ? ಅವರೇ ಮುಖ್ಯಮುಂತ್ರಿಯಾಗಬಹುದಾದರೆ ಯಡ್ಡಿ ಯಾಕಾಗಬಾರದು?

ಇಂತಹ ಪ್ರಶ್ನೆಗಳನ್ನು ಯಾರೂ ಕೇಳಲೇ ಇಲ್ಲ!

ತನ್ನೆಲ್ಲ ರಂಧ್ರಗಳಿಗೂ ಹೀಗೆ ಫೆವಿಕಾಲ್ ಸೀಲ್ ಹಾಕಿಕೊಂಡಿರಲು ಕಾರಣ ಏನಿರಬಹುದು?

ರಾಜೀವ್‌ಗಾಂಧಿ ಪ್ರಧಾನಿಯಾಗಲು ಏನು ಅನುಭವ ಇತ್ತು?

ಇಂದಿರಾಗಾಂಧಿಯ ಮಗ ಎಂಬುದೇ ಅವರ ಅನುಭವ!

ಅಂಬಾನಿ ಪುತ್ರನಿಗೆ ಯಾವ ಅನುಭವ ಇತ್ತೆಂದು ತಂದೆಯ ಸ್ಥಾನವನ್ನು ಆಕ್ರಮಿಸಿದರು?

ಅಂಬಾನಿ ಪುತ್ರರಾಗಿದ್ದು ಸಾಲದೆ?

ಅನಾಕ್

■ಎಚ್.ಎಲ್. ಕೇಶವಮೂರ್ತಿ

ಹಾಗೆಯೇ ಕುಮಾರಸ್ವಾಮಿ. ಅವರು ಮಾಜಿ ಪ್ರಧಾನಿ ಮಾಜಿ ಮುಖ್ಯಮಂತ್ರಿ ದೇವೇಗೌಡರ ಪುತ್ರ! ಅನುಭವ ತಾನಾಗಿ ಬಂದಿರುತ್ತೆ!

ವಂಶಪಾರಂಪರ್ಯ ಆಳ್ವಿಕೆಯಲ್ಲಿ ಅನುಭವವೂ ವಂಶಪಾರಂಪರ್ಯ!

ಇದನ್ನು ಯೋಚಿಸಿಯೋ ಏನೋ ಯಾರೂ ಇದರ ವಿರುದ್ಧ ಉಸಿರೆತ್ತಲಿಲ್ಲ!

ಗೌಡರು ಒಂದೊಂದಾಗಿ ಗಾಳ ಎಸೆದು ನೋಡಿದರು. ಇವು ತಾವು ಎಸೆದ ಗಾಣದ ಸುತ್ತ ಸುತ್ತುತ್ತವೆ ಅಂತ ಖಾತರಿಯಾಯಿತು. ಯುದ್ಧ ರಂಗಕ್ಕೆ ಸಜ್ಜಾದರು.

ಪೀಠಾಪಹರಣ ಪ್ರಸಂಗವು:

ಉಳ್ಳಾಲ ಚುನಾವಣೆ ಬಂದಿತು.

'ಕುಮಾರಸ್ವಾಮಿಯವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ.'

-ಕಾರ್ಮಿಕ ಸಚಿವ ಇಕ್ಬಾಲ್ ಅನ್ಸಾರಿ, ಮುಖ್ಯಮಂತ್ರಿ ಸಮ್ಮುಖದಲ್ಲಿ!

ಇದಕ್ಕೆ ದೇವೇಗೌಡರ ಪ್ರತಿಕ್ರಿಯೆ ಏನು?

ಅವರು ಗೋವಾದಲ್ಲಿದ್ದಾರೆ!

...ಳಿದ್ರೆ ಓದಿಬಂದ ಜನ ಅರ್ಜಿ ಕೊಟ್ಟು ಕಷ್ಟ ಹೇಳಿಕಂಡ್ರಂತೆ. ಅದ್ಕೆ ಇವುನು ...ಬೋದನಂತೆ."

"ಅದ್ಯಾಕ್ ಬೋದುನ್ನಾ?"

"ಒಂಚೂರೆಚ್ಚುಕಮ್ಮಿಯಾಗಿದ್ರೆ ನಾನೆ ಸತ್ತೋಯ್ತಿದ್ದೆ, ಅಂತೂ ಉಳಕಂಡಲ್ಲಪ್ಪ ...ಅಂತ ಕೇಳದಬುಟ್ಟು ಅರ್ಜಿ ಕೊಟ್ರಲ್ಲ ಅಂತ ಸಿಟ್ಟು ಬತ್ತು, ಬೋದ ಅತ್ತಗೆ."

"ಅಲ್ಲಾ ಕಣೊ ವಾಟಿಸ್ಸೆ, ಇವುನೆಲಿಕಾಪುಟ್ಟು, ಕೆಟ್ಟರದು ಜನಕೇನು ಗೊತ್ತೂ? ನಮ್ಮ ನೋದಿದೇಟಗೆ ಕ್ಯಳಿಕಳಿದ ಅಂತ ಅರ್ಜಿ ಹಿಡುದು ಕಷ್ಟ ಹೇಳಿಕಂಡ್ರು. ಅವುರದೇನು ತಪ್ಪೂ?"

"ಅದು ಇವುನಿಗೆ ಗೊತ್ತಾಗಬೇಕಲ್ಲೋ, ಜನ ಅರ್ಥ ಮಾಡಿಕಳದೆಯಿದ್ರೆ ಹಿಂಗೆ ಆಗದು. ಅಷ್ಟಕ್ಕೂ ಇವುನಿಗೆ ಕೊಡೋ ಅರ್ಜಿ ಕತೆ ಏನು ಅಂತ ನಮಿಗ್ಗೊತ್ತಿಲವೆ. ಆ ದ್ಯಾವೇಗೌಡರ ಕಾಲ್ದಲ್ಲಿ ತಗಂಡರ್ಜಿನೆ ಮೂಟಗಟ್ಟಿ ಬಿದ್ದವಪ್ಪ."

"ನೀನಂಗಂತಿ, ಜನಗಳೇನು ತಿಳಕಂಡವುರೆ ಅಂತೀ? ಬ್ಯಟ್ಟಕೊಂದು ಕೂದ್ಲು ಕಟ್ಟಿದೇ ಹೋದ್ರು ಕೂದ್ಲು ಬಂದ್ರು ಬ್ಯಟ್ಟ ಅಂತ ಒಂದರ್ಜಿ ಕೊಡ್ತರೆ."

"ಅಂಗಾದ್ರೆ ಸರಿ, ಅರ್ಜಿ ಬಗ್ಗೆ ನೋ ಅಬ್‌ಜಕ್ಸನ್."

"ನಮ್ಮ ಸಂತೆ ಶಿವುರದ ಭೈರಣ್ಣನಿಗೆ ಅನಂತಮೂರ್ತಿ ಏನೋ ಅಬ್‌ಜಕ್ಷನ್ ಮಾಡ್ಯವುರಂತೆ ತಿಳಕಂಡ್ಯಾ?"

"ತಿಳಕಂಡೆ. ಆದ್ರೆ ಆ ಅಬ್‌ಜಕ್ಷನ್ ಭೈರಪ್ಪನ ಒಂದೇ ಒಂದು ಕಾದಂಬರಿಗೆ ಮಾತ್ರ."

"ಅದ್ಯಾವುದು?"

"ಅವುನು ಇತ್ತೀಚೆಗೆ ಆವರಣ ಅಂತ ಕಾದಂಬರಿ ಬರದವುನೆ. ಅದನ್ನ ಅವುನೇ ಬರಿಬೇಕಾಗಿರಲಿಲ್ಲ. ಆ ಚಿದಾನಂದಮೂರ್ತಿನೊ ಈಶ್ವರಪ್ಪನೊ ಎಡೂರಪ್ಪನೊ ಅಥವಾ ತೊಗಾಡಿಯ, ಮುಥಾಲಿಕ್ ಇಂತ ಯಾವನೋ ಮೂರ್ಖ ಬರಿಬವುದಿತ್ತು."

"ಅಂಗಿದ್ದತದು?"

"ಥೂ, ಓದಕ್ಕೆ ಆಗದಿಲ್ಲ ಕಣೊ. ಇದೇನು ಚೆಡ್ಡಿ ಭೈರಪ್ಪ ಸಾಯಕಡೇ ಸತಿ ಇಂತ ಕಾದಂಬರಿ ಬರದನಲ್ಲಾ ಅನ್ನಂಗದೆ. ಅದ ಈ ಅನಂತಮೂರ್ತಿ ಓದಿ ಭೈರಪ್ಪ ಕಾದಂಬರಿಕಾರಲ್ಲ ಅಂದವುರೆ. ಆ ಮಾತ ತಗಂಡು ಕೆಲುವುರು ಚೆಡ್ಡಿವಳಿಕೆ ಚೊಣಚ ಹೊಕ್ಕಿಸಿಗಂಡವುರೆ, ಅಷ್ಟೆಯಾ."

"ಆ ಪುಸ್ತಕ ಸಿಕ್ಕಿದ್ರೆ ಕೊಡೊ ಓತ್ತಿನಿ."

"ಸುಮ್ಮನೆ ಯಾಕೆ ಟೈಮು, ಮನಸ್ಸು ಹಾಳು ಮಾಡಿಕತ್ತಿ, ಸುಮ್ಮನಿರೊ ಅತ್ತಗೆ."

"ಅಷ್ಟೆ ಅಂತಿಯಾ?" ■

ಮುಖ್ಯಮಂತ್ರಿ ಹೇಳಿದ್ದೇನು?

'ಇದು ಚುನಾವಣಾ ತಂತ್ರ!'

(ಅಧಿಕಾರದ ಹಸ್ತಾಂತರ ಇಲ್ಲ ಎನ್ನುವುದೂ ರಾಜಕೀಯ ತಂತ್ರ ಅಂದರೆ ಏನು ಗತಿ?)

ಇದಕ್ಕೆ ಭಾಜಪ ಏನು ಹೇಳುತ್ತದೆ?

'ಇಕ್ಬಾಲ್ ಅನ್ಸಾರಿ ಯಾರು ಹೀಗೆ ಹೇಳುವುದಕ್ಕೆ? ನಮಗೂ ಅವರಿಗೂ ಯಾವ ಸಂಬಂಧವೂ ಇಲ್ಲ, ಮುಖ್ಯಮಂತ್ರಿ ನಮ್ಮ ನಡುವೆ ಮಾತ್ರ ಒಪ್ಪಂದ ಆಗಿರುವುದು'-ಸದಾನಂದಗೌಡರು.

'ಮಠಾಧೀಶರ ಎದುರು ಮಾತುಕತೆಯಾಗಿದೆ. ಅಧಿಕಾರ ಹಸ್ತಾಂತರದ ಬಗ್ಗೆ ನನಗೆ ವಿಶ್ವಾಸ ಇದೆ.'-ಯಡಿಯೂರಪ್ಪ

ಮಠಗಳಿಗೆ ಬೊಕ್ಕಸದ ಹಣ ಹರಿಸಲು ಇದೇ ಕಾರಣ ಇರಬೇಕು!

ಇಷ್ಟಕ್ಕೇ ನಿಲ್ಲಲಿಲ್ಲ. ಅನ್ಸಾರಿ ಮಹಾಶಯರು 'ಭಾಜಪದ 39 ಶಾಸಕರು ಪಕ್ಷಾಂತರ ಮಾಡಲು ಸಿದ್ಧರಿದ್ದಾರೆ' ಎಂಬ ಇನ್ನೊಂದು ಬಾಂಬು ಎಸೆದರು. 'ಅವರನ್ನು ಹೆಸರಿಸಲಿ' ಎಂದು ಕೂಗಾಡಿದರು ಸದಾನಂದಗೌಡರು. ಹಾಗೆ ಹೆಸರಿಸೋಕೆ ಇದು ಟೂ ಅರ್ಲಿ ಅಲ್ವಾ ಗೌಡರೆ! ಯಡಿಯೂರಪ್ಪನವರು ಮುಖ್ಯಮಂತ್ರಿ ಮಾಡುವ ಹೊಣೆಯನ್ನು ಆ ಬ್ರಹ್ಮನ ಮೇಲೆ ಹೇರಿದರು. 'ಮುಖ್ಯಮಂತ್ರಿ ಆಗೋದು ನನ್ನ ಹಣೇಲಿ ಬರೆದಿದ್ದರೆ ಯಾರಿಗೂ ತಡೆಯಲು ಸಾಧ್ಯ ಇಲ್ಲ' ಅಂದರು!

ಇಲ್ಲಿಗೆ ಒಂದು ಅಂಕದ ನಾಟಕ ಮುಗಿಯಿತು. ಎರಡನೆ ಅಂಕ ಪ್ರಾರಂಭ ಆಯಿತು.

ಚಾಮರಾಜನಗರದ ಶಾಪ ವಿಮೋಚನೆಗಾಗಿ ಕುಮಾರಸ್ವಾಮಿಯವರು ಅಲ್ಲಿಗೆ ಭೇಟಿ. ಹೆಲಿಕಾಪ್ಟರ್ ಅಡಚಣೆಯಿಂದ ಕೆರೆಯ ಅಂಗಳದಲ್ಲಿ ಇಳಿತ. ಸ್ಥಳ ಮಹಾತ್ಮೆ ಇರಬೇಕು! ಅಲ್ಲಿಂದ ಹೊರಟಾಗ ದಾರಿ ಮಧ್ಯೆ ಯಾವ ಅಡಚಣೆಯೂ ಆಗದಂತೆ ಪುರೋಹಿತರು ಹೆಲಿಪ್ಯಾಡಿನಲ್ಲಿ ಹೋಮ, ಹವನ ಮಾಡಿದರಂತೆ! ಎಲ್ಲ ಗ್ರಹಗಳನ್ನೂ ಹದ್ದುಬಸ್ತಿಗೆ ತೆಗೆದುಕೊಂಡರು ಅಂತ ಕಾಣುತ್ತೆ, ಯಾವುದೇ ಅಪಾಯ ಆಗಲಿಲ್ಲ.

ಅದು ಹಾಗಿರಲಿ. ಚಾಮರಾಜನಗರಕ್ಕೆ ಅವರು ಹೋದದ್ದಾದರೂ ಯಾಕೆ?

ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲು!

ಅದಕ್ಕೂ, ಇದಕ್ಕೂ, ಏನು ಸಂಬಂಧ? ಅಲ್ಲಿ ಕೆಲವರು ನೀವೇ ಮುಂದುವರೆಯಿರಿ ಎಂದು ಒತ್ತಾಯಿಸಿದ್ದರೆ?

ಅದೂ ನಿಜ. ಇನ್ನೊಂದು ಇದೆ.

ಚಾಮರಾಜನಗರಕ್ಕೆ ಇವರು ಹೋದದ್ದು ಯಾಕೆ? ಶಾಪ ವಿಮೋಚನೆಗಾಗಿ ತಾನೆ? ಆದರೆ ಅವರ ಅಧಿಕಾರದ ಅವಧಿ ಇರುವುದೇ ನಾಲ್ಕು ತಿಂಗಳು! ಅಂದರೆ ಶಾಪಕ್ಕೆ ಮತ್ತೊಂದು ಅಧಿಕೃತ ಮುದ್ರೆ ಬಿದ್ದಂತಾಯಿತಲ್ಲ!

ಇದು ಆಗಬಾರದು ಎಂದಾದರೆ ಏನು ಮಾಡಬೇಕು?

ಕುಮಾರಸ್ವಾಮಿಯವರೇ ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕು!

ಇದು ಸಾಧ್ಯವೆ?

'ದೇವರ ದಯೆಯಿದ್ದರೆ ಸಾಧ್ಯ' ಎಂದಿದ್ದಾರೆ ಮುಖ್ಯಮಂತ್ರಿಗಳು! ■

ಮರೆಯುವ ಮುನ್ನ



ಪಿ. ಲಂಕೇಶ್ -ಡಿಸೆಂಬರ್ 25, 1988

ಅಪಪ್ರಚಾರ

ನಿಮಗೆ ಗೊತ್ತು, ವಿಷ ಕಾರುವ ಜನರನ್ನು ನಾನು ನಿರ್ಲಕ್ಷಿಸುತ್ತೇನೆ. ನೂರು ಕೆಲಸಗಳ ನಡುವೆ ಇದಕ್ಕೆಲ್ಲ ನನಗೆ ಸಮಯವೇ ಇರುವುದಿಲ್ಲ, ಅಲ್ಲದೆ ನನಗೆ ಉಳಿದಿರಬಹುದಾದ ಸಮಯದ ಬಗ್ಗೆ ಸ್ವಾರ್ಥಿ ನಾನು. ಸರಿಯಾಗಿ ಲೆಕ್ಕಹಾಕಿ ಈ ಸಮಯ ಖರ್ಚು ಮಾಡಿದರೆ ಮಾತ್ರ ನನ್ನ ನೆಚ್ಚಿನ ಪುಸ್ತಕ ಓದಲು, ನನ್ನ ಪ್ರೀತಿಯ ಮರಗಿಡಗಳೊಂದಿಗೆ ಕೆಲವು ಗಂಟೆಯಾದರೂ ಇರಲು ಸಾಧ್ಯವಾಗುತ್ತದೆ. ನನ್ನ ಸೂರ್ಯೋದಯದ ಜೊತೆಗೆ, ನನ್ನ ನೆನಪುಗಳ, ನೋವುಗಳ ಜೊತೆಗೆ ಕೂಡ. ಆದರೆ ಸುತ್ತ ದಟ್ಟವಾಗುತ್ತಿರುವ ಕತ್ತಲು, ವ್ಯೂಹ ರಚಿಸುವ ಕಪ್ಪು ಶಕ್ತಿಗಳು ನನ್ನನ್ನು ಖಿನ್ನನನ್ನಾಗಿಸುತ್ತವೆ; ದೀರ್ಘ ಅಳಲಿಗೆ ನನ್ನನ್ನು ತಳ್ಳುತ್ತವೆ. ನಿಮ್ಮ ಈ ಸರಳ 'ಪತ್ರಿಕೆ'ಯ ವಿರುದ್ಧ ನೇರ ಸಣ್ಣತನ ತೋರುವವರು; ಈ ಪತ್ರಿಕೆ ಹುಟ್ಟಿದಂದಿನಿಂದ ಅಂಗಡಿಯಲ್ಲಿ ಇಟ್ಟುಕೊಂಡು ಮಾರಲು ಕೂಡ ನಿರಾಕರಿಸುವ ವ್ಯಾಪಾರಿಗಳು; ಬಹಿರಂಗವಾಗಿಯೇ ಸುಳ್ಳು ಬೊಗಳಿ ಇದನ್ನು ಜನರಿಂದ ದೂರ ಮಾಡಲು ಯತ್ನಿಸುವ ರಾಜಕಾರಣದ ಖದೀಮರು; ಬಳಲಿದ ಬಡವರು, ದಲಿತರನ್ನು ನೇರವಾಗಿ ಮುಟ್ಟುವ ಪತ್ರಿಕೆಯ ಎದುರು ಗೋಡೆಗಳನ್ನೇ ಕಟ್ಟುವ ಖಳರು. ಕರ್ನಾಟಕಕ್ಕೆ ವಿಚಾರವಂತ, ದಕ್ಷ, ಪ್ರಾಮಾಣಿಕ ಜನರು ತರಬಲ್ಲ ನೆಮ್ಮದಿ, ಸಂಪತ್ತಿನ ಕನಸನ್ನು ಕಂಡು ಬೆಚ್ಚಿ ಇದರ ವಿರುದ್ಧ ಚೀರಾಡುತ್ತಿರುವ ಖೂಳರು.


ಕೋಲಾರದಲ್ಲಿ ಮತೀಯ ಜಗಳ ಅಗತ್ಯವಿಲ್ಲ. ತುಮಕೂರಿನ ಸಹನೆಯ ಜನ ಮುಸ್ಲಿಮರು, ಹಿಂದೂಗಳ ಗೋಳನ್ನೆಲ್ಲ ಬಲ್ಲ ಪ್ರಾಜ್ಞರು. ಕನ್ನಡಿಗರ ಆತ್ಮಗೌರವ, ಉದ್ಯೋಗದ ಸಾಧ್ಯತೆ ಮೈಮರೆತು ಘೋಷಣೆ ಕೂಗಿ ಪಂಜು ಹತ್ತಿಸುವುದರಿಂದ ಆಗುವುದಿಲ್ಲ. ಶಿವಮೊಗ್ಗೆಗೆ ಬೇಕಾದದ್ದು ಮಾನವಂತ, ಜನರೆಲ್ಲರಿಗೆ ಸೇರಿದ ವೈದ್ಯಕೀಯ ಕಾಲೇಜು -ರಾಜಕಾರಣಿಗಳ ತುಚ್ಛ ದುರಾಸೆಯಿಂದ ರೂಪುಗೊಂಡು ಎಲ್ಲರ ಮಾನಹರಣ ಮಾಡಲಿರುವ ಕ್ಯಾಪಿಟೇಶನ್ ಮೆಡಿಕಲ್ ಕಾಲೇಜಲ್ಲ. ಕರ್ನಾಟಕದ ನೆಲ ಮೊದಲು ಸೇರಬೇಕಾದ್ದು ಕಡುಬಡವರಿಗೆ-ನಿವೇಶನ, ಕೃಷಿ ಭೂಮಿಯಾಗಿ. ಆದರೆ ಅದು ಸಮಾಜ ದ್ರೋಹಿಗಳ ಪಾಲಾಗುತ್ತಿದೆ. ಕರ್ನಾಟಕದ ವರ್ತಮಾನ, ಭವಿಷ್ಯದೊಂದಿಗೆ ಸ್ಪಂದಿಸುವ 'ಪತ್ರಿಕೆ' ನಿಜಕ್ಕೂ ಆಗುತ್ತಿರುವುದನ್ನು ನೋಡಿ ದುಗುಡದಿಂದ ತುಂಬುತ್ತದೆ.




ನಮ್ಮ ತರುಣ ತರುಣಿಯರ ದಿಟ್ಟತನ, ಶೌರ್ಯ ನ್ಯಾಯದ ಪರವಾಗಿ, ಮನಗಳ ಮಿಲನದ ಪರವಾಗಿ, ಸರಳ ಸುಖಗಳ ಪರವಾಗಿ ವ್ಯಕ್ತವಾಗಬೇಕಾಗಿದೆ.

ವೇಳೆಗೆ ಬದ್ಧ

ಹತ್ತನೆ ತಾರೀಖು ಶನಿವಾರ. ಶಿವಮೊಗ್ಗೆಯಲ್ಲಿ. ನನ್ನ ಊರು ಇದು. ಕಲಿತದ್ದು, ಪಾಠ ಹೇಳಿದ್ದು, ಇಲ್ಲಿಯ ಸಾರ್ವಜನಿಕ ಲೈಬ್ರರಿಯಲ್ಲಿ ಓದಿದ್ದು, ನನ್ನ ಪ್ರೀತಿಯ ಮೊದಲ ಮುಖಗಳನ್ನು ನೋಡಿದ್ದು, ಸಾಹಿತ್ಯದಲ್ಲಿ ಕುತೂಹಲ ಕೆರಳಿದ್ದು; ಇಲ್ಲಿ ಸರಿಯಾಗಿ ಹನ್ನೊಂದು ವರ್ಷದ ಹಿಂದೆ ಸಾರ್ವಜನಿಕ ಸಭೆಯಲ್ಲಿ ಮಾತಾಡಿದ್ದೆ. ಸುತ್ತಿ ಸುಸ್ತಾಗಿದ್ದ ನಾನು ಆಗ ಏಳು ನಿಮಿಷ ಮಾತಾಡಿದ್ದೆ. ಈ ಸಲ ಅಷ್ಟೇ ಜನ. ಅನೇಕ ಹೊಸ ಮುಖಗಳು. ಕುತೂಹಲ ತುಂಬಿದ ತರುಣ ತರುಣಿಯರು. ಈ ವಿಚಿತ್ರ ಹುಚ್ಚ ಹೇಗಿರಬಹುದು? ಎಂಬ ಕುತೂಹಲ. ಇದೆಲ್ಲ ಆದಮೇಲೆ ಬಂದ ಕಾಗದಗಳಲ್ಲಿ ಏನಿತ್ತು ಗೊತ್ತೆ? ನಾನು ಅವುಗಳನ್ನು ಓದಿ ನಕ್ಕೆ. ಸಂತೋಷಗೊಂಡೆ. ಸಭೆಯ ಬಗ್ಗೆ, ಭಾಷಣಗಳ ಬಗ್ಗೆ ಮೆಚ್ಚುಗೆ. ಅದಕ್ಕಿಂತ ಹೆಚ್ಚಾಗಿ ವೇಳೆಗೆ ಸರಿಯಾಗಿ, ನಿಮಿಷ ಕೂಡ ಆಚೀಚೆ ಆಗದಂತೆ ಸಭೆ ಆರಂಭಿಸಿದ ಬಗ್ಗೆ ಸಂತೋಷ. ಇದನ್ನು ದಾವಣಗೆರೆಯಲ್ಲಿ ಗಮನಿಸಿದ್ದೆ. ಸಭೆಗೆ ಕೇವಲ ಮೂರು ನಿಮಿಷ ಇದೆ ಎನ್ನುವಾಗ ಸಭಾಂಗಣದಲ್ಲಿದ್ದೆವು. ನಿಗದಿತ ವೇಳೆ 5.30 ಕ್ಕೆ (ದಾವಣಗೆರೆಯಲ್ಲಿ) ಸಭೆ ಶುರುವಾದಾಗ ನೀವು ನೋಡಬೇಕಿತ್ತು. ವಿಚಿತ್ರ ಹರ್ಷೋದ್ಗಾರ ಹೊರಟಿತ್ತು. ಶಿವಮೊಗ್ಗೆಯಲ್ಲೂ ಅಷ್ಟೆ. ನಾವು ಕೊಟ್ಟ ಮಾತನ್ನು ನಮ್ಮದೇ ಆದ ರೀತಿಯಲ್ಲಿ ಉಳಿಸಿಕೊಂಡಿದ್ದೆವು. ಅದು ಸಭಿಕರನ್ನು ನಮ್ಮ ಸಂಬಂಧಿಗಳಾಗಿಸಿದ ಕ್ಷಣ. ತೋರಣ, ಚಪ್ಪರ ಇತ್ಯಾದಿ ಇಲ್ಲದ ಅಸ್ಥಿಪಂಜರದಂತೆ ನಿಂತ ವೇದಿಕೆ! ಜನ ಎಲ್ಲ ನಿರೀಕ್ಷೆಯಲ್ಲೂ ಹತಾಶರಾಗಿ ಸೂಡಿದಂತಿದ್ದ ಸುಂದರ ಚೌಕಟ್ಟುಗಳು. ತಿಂಗಳುಗಳ ಹಿಂದೆ ದಾವಣಗೆರೆಯಲ್ಲಿ ಸಭಿಕರು ನಮ್ಮವರಾಗಿ, ನಮ್ಮ ಗೆಳೆಯ ಗೆಳತಿಯರಾಗಿ ನೆಲದ ಮೇಲೆ ಕೂತು 'ಮಾತಾಡಿ' ಎಂದು ಸ್ಫೂರ್ತಿ ನೀಡಿದಂತೆಯೇ ಶಿವಮೊಗ್ಗೆಯಲ್ಲಿ, ನಾವು ಹೇಳುವ ಎಲ್ಲವೂ ಜನಕ್ಕೆ ಗೊತ್ತಿತ್ತು. ನನ್ನ ಪಾಲಿಗಂತೂ ಭಾಷಣ ಕಲೆಯಲ್ಲ, ಕಸುಬಲ್ಲ; ಆದಷ್ಟೂ ಪ್ರಯತ್ನಿಸಿ ಅಂತರಂಗಕ್ಕೆ ಮಾತಾಡುವುದು. ಜನರು ಮತ್ತು ನಾನು ಯೋಚಿಸಿದ್ದನ್ನು ಮತ್ತೊಮ್ಮೆ ಹೆಣೆಯುವುದು, ಕಲೆಯಿಂದ ಮೆಚ್ಚಿಸುವುದು ನನ್ನ ಉದ್ದೇಶವಲ್ಲ. ಅನ್ನಿಸಿಕೆಯನ್ನು ಹಂಚಿಕೊಳ್ಳುವುದು ನನ್ನ ಖುಷಿ.



'ಮಾಧುರಿ' ಅಥವಾ ಕರ್ಕಶ?



ಬೇರೆ ವಿಷಯ ಅಪಾರವಾಗಿವೆ. ನಿಮ್ಮ ಈ ವೇದಿಕೆ, ಪಕ್ಷ ಅಥವಾ ಗುಂಪಿನ ಬಗ್ಗೆಯೇ ಹೇಳುತ್ತಿರುವುದಕ್ಕೆ ಕ್ಷಮಿಸಿ. ಈ ಟಿಪ್ಪಣಿಗಳಲ್ಲಿ ಈ ಗಳಿಕೆಯಲ್ಲಿ ಮನಸ್ಸಿನಲ್ಲಿ ತುಡಿಯುತ್ತಿರುವುದನ್ನೇ ಹೊರಗಿಡಲು ನನಗೆ ಇಷ್ಟ. ಬೇರೆಯದನ್ನು ಬರೆದರೆ ಪ್ರಯತ್ನಪೂರ್ವಕವಾಗಿ ಬರೆದಂತಾಗುತ್ತದೆ. ಅದೆಲ್ಲ ಬೇಡ. ನನ್ನೆದುರು ಒಂದು ಆಹ್ವಾನ ಪತ್ರಿಕೆ ಇದೆ. ಸಿ. ಅಶ್ವತ್ಥ್ ಮತ್ತು ಗೆಳೆಯರು ಇದೇ 19ನೇ ತಾರೀಖು ಏರ್ಪಡಿಸಲಿರುವ ಸುಗಮ ಸಂಗೀತಕ್ಕೆ ಆಹ್ವಾನ ಪತ್ರಿಕೆ. ಇದರ ಹೆಸರು "ಗೀತ ಮಾಧುರಿ." ಇದರ ಪೋಷಕರು ಜೆ.ಎಚ್.ಪಟೇಲ್, ಹರಿಖೋಡೆ ವಗೈರೆ ವ್ಯಕ್ತಿಗಳು. ಇದರ ಅಧ್ಯಕ್ಷ (ಟೆಕ್ಸ್ಟ ಬುಕ್ ಖ್ಯಾತಿಯ) ಎನ್.ಎಸ್. ಲಕ್ಷ್ಮಿನಾರಾಯಣಭಟ್ಟ. ಹಾಡುವವರಲ್ಲಿ, ಕವಿಗಳಲ್ಲಿ ಅನೇಕರು ಆಸ್ಥಾನ್ ವಿದ್ವಾನ್‌ಗಳು; ಭಟ್ಟ, ಲಕ್ಷ್ಮಣರಾವ್ ವೆಂಕಟೇಶಮೂರ್ತಿ ಇತ್ಯಾದಿಗಳು.

ಸಿ.ಅಶ್ವತ್ಥ್ ಮುಂತಾದವರು ಎಷ್ಟು ಕೆಟ್ಟಿದ್ದಾರೆಂದರೆ, "ನಾನು ಆಗಾಗ ಫುಟಾಣಿ ಕಚೇರಿ ನಡೆಸುತ್ತೇನೆ" ಅಂದರು ಅಶ್ವತ್ಥ್- "ಏನ್ರಿ, ಅದು?" ಅಂದೆ. ಶ್ರೀಮಂತರು ತಮ್ಮ ಮನೆಯಲ್ಲಿ ಪಾರ್ಟಿ, ಊಟ ಇದ್ದಾಗ ನನ್ನನ್ನು ಕರೆಸ್ತಾರೆ, ಅವರೆಲ್ಲ ಊಟ, ಪಾನ, ಹರಟೆ ಹೊಡೀತಿದ್ರೆ ನಾನು ಮತ್ತು ಗೆಳೆಯರು ಹಾಡ್ತೇವೆ. ಒಂದೊಂದುವರೆ ಸಾವಿರ ರೂಪಾಯಿಯವರೆಗೆ ಕೊಡ್ತಾರೆ. ಇದು ನಾರ್ತ್‌ಇಂಡಿಯಾದಲ್ಲಿ ಬಹಳ ಪಾಪ್ಯುಲರ್ ಗೊತ್ತಾ ಲಂಕೇಶ್-ಹೇಗಿದೆ ಐಡಿಯಾ?" ಅಂದರು.

ಈತ ಇನ್ನೂ ಕೆಳಗೆ ಹೋಗುವ ಸೂಚನೆಗಳೇ ಹೆಚ್ಚಾಗಿವೆ.

ರೆಡ್ಡಿ 'ಸಿಡಿ'ಗೂ, ಜಯಲಕ್ಷ್ಮಿ ಸಿಡಿಗೂ ವ್ಯತ್ಯಾಸವೇನು?

ಕಣ್ಣಾಮುಚ್ಚಾಲೆ

ಕೆ.ಎಸ್. ರಾಜಲಕ್ಷ್ಮಿ, ಬೆಂಗಳೂರು
ಭೈರಪ್ಪ ಹಾಗೂ ಅನಂತಮೂರ್ತಿಯವರ ಗಲಾಟೆಯನ್ನು ನೋಡಿ ನಿಮಗೇನನ್ನಿಸುತ್ತದೆ?
◆ ಭೈರಪ್ಪನಿಗೆ ಬಾರಿಸಿದಷ್ಟೂ ಸಂತೋಷವಾಗುತ್ತೆ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಜಯಲಕ್ಷ್ಮಿ ಕಳೆದುಕೊಂಡಿದ್ದೇನು? ರಾಧಿಕಾ ಉಳಿಸಿಕೊಂಡಿದ್ದೇನು?
◆ ಮಾನ. ಸ್ನಾನ ಎಂದರೆ ಸಾಕಲ್ಲವೇ?

ಓಮಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ
ಇತ್ತೀಚೆಗೆ ರಾಧಿಕಾಳ ನಟನೆಯಲ್ಲಿ 'ಸತ್ವ' ಕಡಿಮೆಯಾಗಿದೆಯಲ್ಲ?
◆ 'ಸ್ವಂತ' ಹೆಚ್ಚಾಗಿರುವುದರಿಂದ ಇರಬಹುದೇ?

ಬಿ. ಚಂದ್ರೇಗೌಡ, ಬೆಂಗಳೂರು
ಮಹಿಳೆಯರಿಗೆ ರಾತ್ರಿ ಪಾಳಿ ನಿಷೇಧಿಸುವ ಬದಲು ಪುರುಷರಿಗೆ ನಿಷೇಧಿಸಿದರೆ?
◆ ಶ್ರೀ. ಈಗಾಗಲೇ ನಮ್ಮ ಜನಸಂಖ್ಯೆ ಇಷ್ಟೊಂದಿದೆಯಲ್ರೀ!

ಎಂ. ನಿಸರ್ಗ, ದಾವಣಗೆರೆ
ರಾಜಕೀಯಕ್ಕಿಳಿಯಬೇಕಾದರೆ 'ಕ್ರಿಮಿನಲ್' ಹಿನ್ನೆಲೆ ಇರುವುದು ಅಗತ್ಯವೆ?
◆ ಇಲ್ಲ. ಕ್ರಿಮಿನಲ್‌ಗಳು ನಿಮ್ಮ ಬೆನ್ನಿಗಿದ್ದರೆ ಸಾಕು ಎನ್ನುವವರೇ ಕೋ-ಜಾ ಸರ್ಕಾರದಲ್ಲಿದ್ದಾರೆ.

ಅಳ್ಳಿಮಾರನಹಳ್ಳಿ ಹರೀಶ, ಕನಕಪುರ
ಕುಮಾರಣ್ಣ ಚಾಮರಾಜನಗರಕ್ಕೆ ಹೋಗಿರೋದು ಅಧಿಕಾರ ಕಳೆದುಕೊಳ್ಳಲಿಕ್ಕಾ, ಅಥವಾ?
◆ ಚಾಮರಾಜನಗರದ ವಾಸ್ತುವೂ. ಅವರ ತಲೆಯಲ್ಲಿರುವ ವಸ್ತುವಿಗೂ ಸರಿ ಹೋಗುತ್ತೆ ಅಂತ ಯಾವನೋ ಜ್ಯೋತಿಷಿ ಹೇಳಿದ್ದಕ್ಕೆ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಕಟ್ಟಿಕೊಂಡರೆ ಹೆಂಡ್ತಿ ಅಂತಾರೆ, ಇಟ್ಕೊಂಡರೆ... ಳೆ ಅಂತಾರಲ್ಲ ಯಾಕೆ?
◆ ಗಂಡ. ......ದ ಅಂತಾರಲ್ಲ ಹಾಗೇನೇ ಇದು.

ಎ.ಕೆ. ಪಟ್ಟಾಭಿ, ಬೆಂಗಳೂರು
ಶ್ರೀಮಂತರ ಮನೆಗಳಲ್ಲೇ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿರುತ್ತಾಳಂತೆ; ಬಡವರ ಮನೆಯಲ್ಲಿ?
◆ ಮುರಿದ ಆಕೆಯ ಕಾಲಿನ ನೋವು ಆರ್ಭಟಿಸುತ್ತಿರುತ್ತದೆ.

ಉಪೇಂದ್ರ ಬೇನಾಳ್, ಬಿಜಾಪುರ
ಕುಮಾರಸ್ವಾಮಿ ಪಿಎಂ, ರೇವಣ್ಣ ಸಿಎಂ, ದೇವೇಗೌಡ ರಾಷ್ಟ್ರಪತಿ ಆದ್ರೆ?
◆ ಎಲ್ಲೆಡೆ ಮಲಗೋದು. ತಿನ್ನೋದು. ಅಳೋದು ನಡೆಯುತ್ತೆ!

ಮಂಚಾಲಿ ಗುರುರಾಜಾಚಾರು, ಬಳ್ಳಾರಿ
ನರಿ ಬಾಲ ತುಳಿದರೆ ಅದೃಷ್ಟ; ನಾಯಿ ಬಾಲ ತುಳಿದರೆ?
◆ ಸಾವು ಖಚಿತ.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಜಯಲಕ್ಷ್ಮಿ 'ನರಸಮ್ಮ'ಳೋ 'ಸರಸಮ್ಮ'ಳೋ?
◆ ಸದ್ಯಕ್ಕಂತೂ ರೇಣುಕಾಚಾರ್ಯನಿಗೆ ಸರಿಯಾದ ಟ್ರೀಟ್‌ಮೆಂಟ್ ಕೊಡುತ್ತಿರುವ ಅಮ್ಮನ್ನಿ!

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಪ್ರೇಮ ಕಾಮದೆಡೆಗೆ, ತ್ಯಾಗ ಸ್ವಾರ್ಥದೆಡೆಗೆ, ಧರ್ಮ ವಂಚನೆದೆಡೆಗೆ ಸಾಗಿದರೆ ಲೋಕದ ಗತಿಯೇನು?
◆ ಎಸ್.ಎಲ್. ಭೈರಪ್ಪನ ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರಿ ಚಂದ್ರಿಕಾರವರೇ?

ಬಹುಮಾನಿತ ಪ್ರಶ್ನೆ

ಎಸ್.ಸಿ. ರಮೇಶ್, ಮೈಸೂರು
ರೆಡ್ಡಿ 'ಸಿಡಿ'ಗೂ, ಜಯಲಕ್ಷ್ಮಿ ಸಿಡಿಗೂ ವ್ಯತ್ಯಾಸವೇನು?
◆ ಅದು ಲಂಚ. ಇದು ಮಂಚ!

ಎಸ್. ಶಶಿಧರ, ದಾವಣಗೆರೆ
ಉತ್ತರ ಪ್ರದೇಶದಲ್ಲಿ ಸೈಕಲ್, ಕಮಲ, ಕೈ ದಿಢೀರನೇ ಮಾಯವಾದಂತೆ ಕರ್ನಾಟಕದಲ್ಲಿ?
◆ ಸೈಕಲ್‌ಗೆ ಸವಾರನಿಲ್ಲ. ಕಮಲಕ್ಕೆ ಸುಗಂಧವಿಲ್ಲ. ಕೈಗೆ ಬಲವಿಲ್ಲ.

ಎಸ್.ಕೆ. ಗಜೇಂದ್ರಸ್ವಾಮಿ, ಅರಹತೊಳಲು
ರೇಣುಕಾಚಾರ್ಯ ಏನು ಕಮ್ಮಿ ಮಾಡ್ದಾ ಅಂತಾ ಜಯಾ ಹಿಂಗಾಡ್ತಾಳೆ?
◆ ಕಮ್ಮಿ ಅಲ್ಲ. ತುಂಬಾ ಜಾಸ್ತಿ ಆಯ್ತು ಎಂಬ ಕಾರಣಕ್ಕೆ.

ಆ.ರಾ. ಮಂಜುನಾಥ್, ಗೆದರೆ
ದೇವೇಗೌಡ್ರಿಗೂ, ಫಿಲಂ ಡೈರೆಕ್ಟರಿಗೂ ವ್ಯತ್ಯಾಸವೇನು?
◆ ಡೈರೆಕ್ಟರ್ ಮೂರು ಗಂಟೆಗಳಲ್ಲಿ ಕ್ಲೈಮಾಕ್ಸ್ ನೀಡಬೇಕಿರುವ ದರ್ದು ಇರುತ್ತದೆ. ಗೌಡರಿಗೆ ಅದಿಲ್ಲ.

ವಾರದ ಪ್ರಶ್ನೆ:
ಅತ್ಯಧಿಕ ಮಾರಾಟವಾಗಿರುವ 'ಆವರಣ'ಕ್ಕೂ ನೂರು ದಿನ ಓಡಿರುವ '16 ಟು 60' ಚಿತ್ರಕ್ಕೂ ಏನು ಸಂಬಂಧ?

ಮೇ 30ರ ಸಂಚಿಕೆಯ ನಮ್ಮ ಪ್ರಶ್ನೆ: ಬಿಎಸ್‌ಪಿ ಆನೆಯ ಮೇಲೆ ಯಾರ ಅಂಬಾರಿ?
ನಿಮ್ಮ ಉತ್ತರ: ದಿವಂಗತ ಕಾನ್ಶೀರಾಮ್‌ರವರನ್ನಂತೂ ಇಳಿಸಲಾಗಿದೆ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ನಿರಂಜನ್, ಹುಣಸನಹಳ್ಳಿ

ಸೌಂದರ್ಯಲಹರಿ ಬಿಟ್ಟು ಶಂಕರನ ಕೃತ್ಯಗಳ ಬಗ್ಗೆ ತಿಳಿಯರಿ

ತೆಗಳಿಕೆ ಹೊಗಳಿಕೆ

ಈ ವಾರದ 'ಕಂಡಹಾಗೆ' ವಿಮರ್ಶಾತ್ಮಕ ಹಾಗೂ ವಿಚಾರಾತ್ಮಕವಾಗಿತ್ತು. ಇತ್ತೀಚಿನ ದಿನಗಳಲ್ಲಿ ಹಿಂದೂ ದೇವತೆಗಳನ್ನು ತುಚ್ಛವಾಗಿ ಚಿತ್ರಿಸುತ್ತಿರುವ ಸಂದರ್ಭಗಳಲ್ಲಿ 'ಸೌಂದರ್ಯ ಲಹರಿ'ಯಲ್ಲಿನ ಆಪದ್ಧಗಳು ಹಾಗೂ ಸಾಲುಗಳು ನಿಜಕ್ಕೂ ಮಹಿಳೆಯರ ಕಣ್ತೆರೆಸುವಂತೆ ಹಾಗೂ ಸಮಾಜ ಬಾಂಧವರು ಎಚ್ಚರದಿಂದಿರುವಂತೆ ಕರೆ ನೀಡಿರುವ ತಮ್ಮ ಲೇಖನ ನಿಜಕ್ಕೂ ಅಭಿನಂದನೀಯ.

-ಯು. ನಾಗೇಶ್ (ರಾಜು). ಕನ್ನಡ ಸಾಹಿತ್ಯ ಪರಿಷತ್ತು, ಕೂಡ್ಲಿಗಿ



ಈ ವಾರದ "ಕಂಡಹಾಗೆ" ಬರಹ ತುಂಬಾ ಚೆನ್ನಾಗಿತ್ತು, ಧನ್ಯವಾದಗಳು. ಇದೊಂದು ಪ್ರಸ್ತುತ ವಿಷಯವಾಗಿದ್ದು ಇಂದಿನ ಸಂದರ್ಭದಲ್ಲಿ ಬಹಳ ಪ್ರಾಮುಖ್ಯತೆಯನ್ನೂ ಪಡೆಯುತ್ತದೆ.

ಹೋದ ವಾರದ "ಕಂಡಹಾಗೆ"ಯಲ್ಲಿ ರಾವಣನ ಸೀತಾ ವರ್ಣನೆಯನ್ನು ಓದಿದ ಕೂಡಲೆ ನನಗೆ ನೆನಪಾದದ್ದು "ಸೌಂದರ್ಯ ಲಹರಿ" ಯಲ್ಲಿ ನಾನು ಕಂಡ ವರ್ಣನೆ. ಇದನ್ನು ನಿಮಗೆ ಹೇಳಬೇಕು, ಈ ಬಗ್ಗೆ ಏನಾದರೂ ಬರೆಯಿರಿ ಅಂತಲೂ ಕೇಳಿಕೊಳ್ಳಬೇಕೆಂದು ಯೋಚಿಸುತ್ತಿದ್ದೆ, ಕಾರಣಾಂತರಗಳಿಂದ ಅದನ್ನು ಮರೆತು ಬಿಟ್ಟೆ. ಅಂದು "ಸೌಂದರ್ಯ ಲಹರಿಯ" "ಕ್ಲಾಸು"ಗಳು ಕರಾವಳಿ ಜಿಲ್ಲೆಗಳಲ್ಲಿ ಪ್ರಾರಂಭವಾದ ಸಮಯ. ಕುತೂಹಲದಿಂದ "ಸೌಂದರ್ಯ ಲಹರಿ" ಯ ಒಂದೆರಡು ಶ್ಲೋಕಗಳ ಕನ್ನಡ ಅನುವಾದವನ್ನು ಓದಿ ಆಶ್ಚರ್ಯ ಚಕಿತನಾಗಿದ್ದೆ, ಶಂಕರಾಚಾರ್ಯನಂತಹ ಸನ್ಯಾಸಿ ದೇವಿಯೊಬ್ಬಳನ್ನು ಸ್ತುತಿಸುವಾಗ ಈ ರೀತಿಯಾಗಿ ಅವಳ ಅಂಗಾಂಗಗಳ, ಉಬ್ಬುತಗ್ಗುಗಳ ವರ್ಣನೆ ಮಾಡುವುದೇ? ಇದು ಶೃಂಗಾರ ರಸಭರಿತ ಸಂಸ್ಕೃತದ ನಾಟಕವ್ವೋ, ಕಥೆಯೋ? ಇಂತಹ ಸಾಹಿತ್ಯವನ್ನು ಪೂಜಾ ಮಂತ್ರವೆಂದು ಭ್ರಮಿಸಿ ಅದನ್ನು ಭಾರೀ ಶ್ರದ್ಧೆ ಹಾಗೂ ಭಕ್ತಿಯಿಂದ ಪಠಿಸಲು ಕಲಿಯುವುದರಲ್ಲಿ ತಮ್ಮ ಅಮೂಲ್ಯವಾದ ಸಮಯವನ್ನು ಕಳೆಯುತ್ತಿದ್ದ ಮಹಿಳೆಯರನ್ನು ನೋಡಿ ಕನಿಕರ ಉಂಟಾಗಿತ್ತು. ಇವರೆಲ್ಲ ಹೀಗೆ ಇಂತಹ ಉನ್ಮಾದದ ವಾತಾವರಣದಲ್ಲಿ ಸಮೂಹ ಸನ್ನಿಗೆ ಒಳಗಾದವರಂತೆ ವರ್ತಿಸುವಾಗ ಮಾರ್ಕ್ಸ್‌ನ "ಜನರಿಗೆ ಧರ್ಮ ಎಂಬುದು ಅಫೀಮು ಇದ್ದಂತೆ" ಎಂಬ ವಾಕ್ಯ ನೆನಪಾಗುತ್ತಿತ್ತು.

ಈ "ಸೌಂದರ್ಯ ಲಹರಿಯ" "ಕ್ಲಾಸು"ಗಳು ಕರಾವಳಿ ಜಿಲ್ಲೆಗಳಲ್ಲಿ ಪ್ರಾರಂಭವಾದದ್ದು ಕಳೆದ ಒಂದೆರಡು ವರ್ಷಗಳ ಹಿಂದೆ. ಒಂದೆಡೆ ಒಟ್ಟಾಗಿಸೇರಿ ಭಜನೆ ಮತ್ತು ಹಾಡುಗಳ ಕಲಿಯುವಿಕೆ ಮತ್ತು ಹಾಡುವಿಕೆಯ ಕಾರ್ಯಕ್ರಮಗಳು, ಪುರುಷಪ್ರಧಾನ ಬ್ರಾಹ್ಮಣ ಕುಟುಂಬಗಳೊಳಗೆ ತಮ್ಮದೇ ಆದ ಅಸ್ತಿತ್ವವೆಂಬುದೇ ಇಲ್ಲದಿರುವ ಹೆಚ್ಚಿನ ಹೆಂಗಳೆಯರಿಗೆ ಒಂದು ವ್ಯಕ್ತಿತ್ವವನ್ನು ಒದಗಿಸುವ ನಿಟ್ಟಿನಲ್ಲಿ ಮಾತ್ರ ಸಹಕಾರಿಯಾದವೆಂದು ಹೇಳಬಹುದು. ಆದರೆ ಈ ಕಾಲಹರಣ ಮಾಡುವ ಭಜನೆ, ಹಾಡುಗಳ ಬದಲಾಗಿ ಸಾಮಾಜಿಕ ಕಳಕಳಿಯ, ಸಮಾಜ ಸೇವೆಯ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರೆ ನಿಜಕ್ಕೂ ಸಾರ್ಥಕವಾಗುತ್ತಿತ್ತು. ಇದರ ಹಿಂದೆ ಆರ್.ಎಸ್.ಎಸ್‌ನ "ಹಿಡನ್ ಅಜೆಂಡಾ" ಖಂಡಿತಾ ಇದೆಯೆಂಬ ಬಲವಾದ ಅನುಮಾನ ಇದೆ. ಹಿಂದೂತ್ವದ ಅಂಧಶಕ್ತಿಗಳ ಹುನ್ನಾರದ ಭಾಗವಾದ ಭಾರತೀಯ ಪರಂಪರೆಯ ಅತಿವೈಭವೀಕರಣ, ಹಿಂದೂ ಧರ್ಮ "ಉಳಿಸುವ" ಅಭಿಯಾನ ಇವೇ ಮುಂತಾದ ಕಾರ್ಯಕ್ರಮಗಳ ಭಾಗವಾಗಿ ಇದು ನಡೆಯುತ್ತಿದೆ ಎಂಬುದು ನನ್ನ ಅಭಿಪ್ರಾಯ.

ದಿಕ್ಕು ತಪ್ಪಿರುವ ಮಹಿಳೆಯರು ಇನ್ನಾದರೂ ಎಚ್ಚತ್ತುಕೊಂಡು ತಾವು ಮಾಡುತ್ತಿರುವ ಅಸಂಬದ್ಧ ಕೆಲಸವನ್ನು ನಿಲ್ಲಿಸಲಿ. ಸಾಮಾಜಿಕವಾಗಿ ಉಪಯುಕ್ತವಾದ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿ. ಶಂಕರಾಚಾರ್ಯ ನಿಜಕ್ಕೂ ಏನು ಮಾಡಿದ, ಹೇಗೆ ಬೌದ್ಧ ಧರ್ಮದ ವಿಹಾರಗಳನ್ನು ನಾಶಪಡಿಸಿದ, ಹೇಗೆ ಬೌದ್ಧ ಧರ್ಮವನ್ನು ದೇಶದಿಂದ ಒದ್ದೋಡಿಸುವುದರಲ್ಲಿ ಮುಖ್ಯಪಾತ್ರ ವಹಿಸಿದ್ದ ಎಂಬ ಸತ್ಯವನ್ನು ಇನ್ನಾದರೂ ತಿಳಿದುಕೊಳ್ಳಲಿ.

-ಸುರೇಶ ಭಟ್, ಬಾಕ್ರಬೈಲು

ಡಾ. ಬಂಜಗೆರೆ ಜಯಪ್ರಕಾಶರವರು ಬರೆದ 'ಆನುದೇವಾ ಹೊರಗಣವನು' ಪುಸ್ತಕದ ಬಗ್ಗೆ, ಸತ್ಯಾಸತ್ಯತೆಯ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಬಹಿರಂಗ ಚರ್ಚೆಯಾಗಲಿ. ಇತಿಹಾಸ ಪುರಾಣ ಬೇರೆ ನಿಜಸ್ಥಿತಿ ಜನರಿಗೆ ತಿಳಿಯಲಿ. ವಿಶ್ವಮಾನವನ ಬಗ್ಗೆ ತಪ್ಪು ತಿಳಿವಳಿಕೆ ಹೋಗಲಾಡಿಸಲು ಐತಿಹಾಸಿಕ ಪುರಾವೆ ಬೇಕು ಪುರಾಣ ಬೇಡ. ಸರ್ಕಾರ ದಯವಿಟ್ಟು ಪುಸ್ತಕವನ್ನು ಮುಟ್ಟುಗೋಲು ಹಾಕುವುದು ಬೇಡ.

-ತೂರಗಲ್ಲ ಉಮೇಶ, ರಾಮದುರ್ಗ

ಭಾರತ ಸರ್ಕಾರದ ಸೇತು ಸಮುದ್ರ ಯೋಜನೆಗೆ ನಾಲ್ಕು ಪೀಠದ ಶಂಕರಾಚಾರ್ಯರು ವಿರೋಧಿಸಿದ್ದಾರೆ. ಅದು ತ್ರೇತಾಯುಗದಲ್ಲಿ ರಾಮಕಟ್ಟಿದ ಸೇತುವೆಗೆ ಧಕ್ಕೆಯಾಗುತ್ತದೆ ಎಂಬ ಕಾರಣ ನೀಡಿದ್ದಾರೆ.

ಈಗ ಸೇತುಬಂಧ (ರಾಮಸೇತುವೆ) ಮನುಷ್ಯ ನಿರ್ಮಿತವೇ ಅಥವಾ ನಿಸರ್ಗ ನಿರ್ಮಿತವೇ ಎಂಬ ಬಗ್ಗೆ ದೇಶದಾದ್ಯಂತ ಚರ್ಚೆ ನಡೆಯುತ್ತಿದೆ. ಆದರ ಬಗ್ಗೆ ತೀರ್ಮಾನಿಸಲು ವಿದೇಶಿ ತಜ್ಞರು ಭಾರತಕ್ಕೆ ಬರುತ್ತಾರೆಂಬ ಸುದ್ದಿ ಇದೆ. ಒಂದು ಪ್ರಶ್ನೆಗೆ ಉತ್ತರ ಕಂಡುಕೊಂಡರೆ ಈ ವಿವಾದಕ್ಕೆ ಒಂದು ನ್ಯಾಯವಾದ ತೀರ್ಪು ಸಿಗುತ್ತದೆ. ಆ ಪ್ರಶ್ನೆ ಹೀಗಿದೆ:

ಸೇತುವೆ ನೀರಿನ ಮೇಲೆ ತೇಲುತ್ತಿದೆಯಾ? ಅಥವಾ ನೆಲದ ಮೇಲೆ ನಿಂತಿದೆಯಾ? ಅದು ನೀರಿನ ಮೇಲೆ ತೇಲುತ್ತಿದ್ದರೆ ರಾಮಸೇತುವೆ. ನೆಲದ ಮೇಲೆ ನಿಂತಿದ್ದರೆ ನಿಸರ್ಗ ಸೇತುವೆ, ವಾಲ್ಮೀಕಿ ರಾಮಾಯಣದಲ್ಲಿ ನಳನೆಂಬ ಶಿಲ್ಪ ವಿದ್ಯಾಪಾರಂಗತನಾದ ವಾನರ ಮಗನಾದ ವಿಶ್ವಕರ್ಮ ತನ್ನ ದಿವ್ಯಶಕ್ತಿಯಿಂದ ಕಲ್ಲನ್ನು ಮಂತ್ರಿಸಿ ಅದು ನೀರಿನಲ್ಲಿ ಮುಳುಗದಂತೆ ಮಾಡಿ ಸೇತುವೆ ನಿರ್ಮಿಸಿದ್ದ ಎಂದು ಬರೆದಿದ್ದ. ಆದುದರಿಂದ ಅದು ರಾಮಸೇತು; ಆದರೆ ಅದು ನೀರಿನ ಮೇಲೆ ದೋಣಿಯಂತೆ ತೇಲುತ್ತಿರುತ್ತದೆ. ಅಂದಹಾಗೆ, ರಾಮಾಯಣ ಒಪ್ಪಿದರೆ ಶ್ರೀಲಂಕಾದಲ್ಲಿ ವಾಸಿಸುತ್ತಿರುವ ಪ್ರಜೆಗಳೆಲ್ಲಾ ರಾಕ್ಷಸರೆಂದು ಒಪ್ಪಬೇಕಾಗುತ್ತದೆ. ಇದು ಎಷ್ಟು ಸರಿ?!

-ಶಿವ,
ಬೆಂಗಳೂರು ಸೆಂಟ್ರಲ್ ಜೈಲ್

ಈ ರಾಮಾಯಣ 9 ವರ್ಷಗಳಿಂದ ನಡೆಯುತ್ತಿದೆ!

ತಮ್ಮ ಪತ್ರಿಕೆಯಲ್ಲಿ ಜೂನ್ 6, 2007 ರಂದು 13 ನೇ ಪುಟದಲ್ಲಿ ಪ್ರಕಟವಾದ 'ಕುವೆಂಪು ವಿ.ವಿ: ಜಾತಿ ರಾಜಕಾರಣವೂ, ಸದಾನಂದನ ಬಂಧನವೂ.....' ವರದಿಯನ್ನು ನೋಡಿ ದಿಗ್ಭ್ರಮೆಯಾಯಿತು. ಸತ್ಯಕ್ಕೆ ದೂರವಾದ ವರದಿಯನ್ನು ಮಾಡುವ ಮೂಲಕ ಯಾರೋ ತಮ್ಮ ಗೌರವಕ್ಕೂ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಂತಿದೆ. ಈ ವರದಿಯಲ್ಲಿ ನನಗೆ ಸಂಬಂಧಿಸಿದಂತೆ ಸ್ಪಷ್ಟೀಕರಿಸುವುದಾದರೆ, ನಾನು ಡಾ. ಅನುರಾಧಾ ಪಟೇಲ್ ಅವರ ಮೇಲೆ ಹೈಕೋರ್ಟಿನಲ್ಲಿ ದಾಖಲಿಸಿದ ಮೊಕದ್ದಮೆ ತಮ್ಮ ಪತ್ರಿಕೆಯಲ್ಲಿ ವಿವರಿಸಿದ ರೀತಿ ಇರಲಿಲ್ಲ. ಅದಕ್ಕೆ ಬೇರೆಯದೇ ಸ್ವರೂಪವಿತ್ತು. ಅದಕ್ಕೂ ಸದಾನಂದ ಅವರಿಗೂ ಯಾವುದೇ ಸಂಬಂಧವಿಲ್ಲ. ಹಾಗೂ 2006 ಸೆಪ್ಟೆಂಬರ್‌ನಲ್ಲಿ ನನ್ನದೇ ಕೆಲ ವೈಯಕ್ತಿಕ ಕಾರಣಗಳಿಗಾಗಿ ನಾನು ಡಾ. ಅನುರಾಧಾ ಪಟೇಲ್ ಅವರ ಜೊತೆ ರಾಜಿ ಮಾಡಿಕೊಂಡೆ. ಸದಾನಂದ ಅವರು ನನ್ನನ್ನು ಈ ಸಂಬಂಧಿಸಿ ಪುಸಲಾಯಿಸಿಯೂ ಇಲ್ಲ. ಮೈಸೂರಿನಲ್ಲಿ ಇರುವುದು ಅಂಕಪಟ್ಟಿಗೆ ಸಂಬಂಧಿಸಿದ ಕೇಸಲ್ಲ. ಅದು ಅನುರಾಧಾ ಪಟೇಲ್ ಅವರು ಎಂ.ಎ. ಪಾಸಾದ ವರ್ಷಕ್ಕೆ ಸಂಬಂಧಿಸಿದ ಅವರ ಪ್ರಮಾಣಪತ್ರದಲ್ಲಿನ ಒಂದು ಬೆರಳಚ್ಚು ದೋಷಕ್ಕೆ ಸಂಬಂಧಿಸಿದೆ. ಸದಾನಂದ ಅವರು ನನಗೆ ನೈತಿಕ ಬೆಂಬಲ ನೀಡುತ್ತಿದ್ದಾರೆ ಎಂಬ ಕಾರಣಕ್ಕೇ ಈ ಕೇಸಿನಲ್ಲಿ ಅವರನ್ನು ಎಳೆದು ತರಲಾಗಿದೆ. ನ್ಯಾಯಾಲಯವು ನಮ್ಮ ಮೇಲೆ ಇನ್ನೂ ಆಪಾದನೆಯನ್ನು ಹೊರಿಸಿಲ್ಲ. ಇದೆಲ್ಲ ರಾಮಾಯಣಗಳು ಕಳೆದ ಒಂಭತ್ತು ವರ್ಷಗಳಿಂದಲೂ ನಡೆಯುತ್ತಿದ್ದರೂ ತಮ್ಮ ವರದಿಗಾರರ ಗಮನಕ್ಕೂ ಬಂದಿಲ್ಲ! ಈಗ ಏಕಾಏಕಿ ಈ ರೂಪದಲ್ಲಿ ಅವರಿಗೆ ಜ್ಞಾನೋದಯವಾದುದನ್ನು ನೋಡಿ ಆಘಾತವಾಯಿತು.

ಸದಾನಂದ ಅವರು ಅಸ್ಪೃಶ್ಯತೆ ಇಲ್ಲ, ಜಾತಿ ತಾರತಮ್ಯ ಇಲ್ಲ ಎಂಬುದಾಗಿ ಹೇಳುತ್ತಿದ್ದಾರೆ ಎಂಬುದು ದುರುದ್ದೇಶಪೂರಿತ ಮಾಹಿತಿ ಹಾಗೂ ಓದುಗರಿಗೆ ತಪ್ಪು ತಿಳಿವಳಿಕೆ ನೀಡುತ್ತವೆ. ಸದಾನಂದ ಅವರು ಹಾಗೆ ಎಲ್ಲೂ ಹೇಳಿಲ್ಲ, ಹೇಳಲಿಕ್ಕೆ ಸಾಧ್ಯವೂ ಇಲ್ಲ. ಬೇಕಾದರೆ ಅವರನ್ನು ಬಲ್ಲ ವಿದ್ವಾಂಸರೊಂದಿಗೆ ಚರ್ಚಿಸಿ ಅಥವಾ ಅವರ ಜೊತೆಗೇ ಚರ್ಚಿಸಿ ನಂತರ ಹಾಗೇ ಅನಿಸಿದರೆ ಪ್ರಕಟಿಸಿ. ಸದಾನಂದ ಅವರು ಕರ್ನಾಟಕದ ಬುದ್ಧಿಜೀವಿ ವಲಯದಲ್ಲಿ ಬಹುತೇಕ ಜನರಿಗೆ ಗೊತ್ತಿರುವವರೇ ಆಗಿದ್ದಾರೆ. ತಮ್ಮ ಪತ್ರಿಕೆಯ ಕುರಿತು ಆದರಾಭಿಮಾನವನ್ನು ಹೊಂದಿದ್ದ ಅವರಿಗೆಲ್ಲ ತಮ್ಮ ಪತ್ರಿಕೆಯ ಕುರಿತೇ ತಪ್ಪು ಅಭಿಪ್ರಾಯ ಮೂಡುವ ಸಂಭವವಿದೆ.

-ರಾಜಾರಾಮ ಹೆಗಡೆ, ಕುವೆಂಪು ವಿಶ್ವವಿದ್ಯಾನಿಲಯ



ಅಪ್ಪಾಜಿಯ ಕೊನೆಯ ಯಾತ್ರೆ...

ಅಪ್ಪಾಜಿ ತಮ್ಮ ಇಡೀ ಜೀವನದಲ್ಲಿ ಶಾಂತಿ ಮತ್ತು ಮೌನವನ್ನೇ ಹೆಚ್ಚು ಬಯಸಿದವರು. ಆದರೆ ಅವರ ಅಂತಿಮ ಯಾತ್ರೆಯಲ್ಲಿ ದಾರಿಯುದ್ದಕ್ಕೂ ಸ್ಮೋಕ್ ಬಾಂಬ್ ಮತ್ತು ಪೊಲೀಸ್ ಫಯರಿಂಗ್, ಗಲಭೆ, ಕಲ್ಲು ತೂರಾಟ ಮುಂತಾದ ಹಿಂಸಾತ್ಮಕ ಕೃತ್ಯಗಳೇ ಸ್ವಾಗತಿಸುವಂತಾಗಿದ್ದು ವಿಪರ್ಯಾಸ. ಶಾಂತಿಪ್ರಿಯನ ಅಂತಿಮ ಯಾತ್ರೆ ಅಶಾಂತಿಯ ಆಗರವಾಗಿದ್ದು ಮಾತ್ರ ದುಃಖದ ಸಂಗತಿ.

ಸಾಧಾರಣವಾಗಿ ನಾನು ಬೇರೆ ಊರಿಗೆ ...ಟಿಂಗ್‌ಗೆ ಹೊರಡುವಾಗ ಅಪ್ಪಾಜಿಯ ಮನೆಗೆ ...ೋಗಿ ಅಪ್ಪ-ಅಮ್ಮನ ಕಾಲಿಗೆ ನಮಸ್ಕರಿಸಿ ಹೊರಡು...ದು ನನ್ನ ರೂಢಿ. ಅಂದು ಏಪ್ರಿಲ್ ಏಳರಂದು ...ಮಾರರಾಮ' ಚಿತ್ರದ ಕೊನೆಯ ಹಂತದ ಶೂಟಿಂಗ್ ...ಗಿ ನಾನು ಹಂಪಿಗೆ ಹೊರಟು ನಿಂತಿದ್ದೆ. ಆದರೆ ...ದು ಹೆಚ್ಚು ಮಾತನಾಡಲು ಸಮಯವಿಲ್ಲದ್ದರಿಂದ ...ವರಿಬ್ಬರ ಆಶೀರ್ವಾದ ಪಡೆದು ಹಂಪಿಯತ್ತ ಪ್ರಯಾಣ ...ಳೆಸಿದೆ.

ಅದು ಕೊನೆಯ ಹಂತದ ಚಿತ್ರೀಕರಣವಾಗಿದ್ದರಿಂದ ...ನ್ನ ಪತ್ನಿ ಮತ್ತು ಮಕ್ಕಳು ಕೂಡಾ ನನ್ನ ಜೊತೆಗೆ ...ಂಪಿಗೆ ಹೊರಟುನಿಂತಿದ್ದರು. ಆಗ ಶಾಲೆಗೆ ರಜಾ ...ಮಯವಾಗಿದ್ದರಿಂದ ರಾಘು ಪತ್ನಿ ಮತ್ತು ...ಕ್ಕಳು ಕೂಡಾ ನಮ್ಮೊಂದಿಗೆ ಬಂದಿದ್ದರು. ...ಜ ಹೇಳಬೇಕೆಂದರೆ ನಾವು ಸುಮಾರು ಇಪ್ಪತ್ತು ...ನ ಕುಟುಂಬದ ಸದಸ್ಯರು ಪಿಕ್‌ನಿಕ್ ಥರ ...ೊರಟಿದ್ದೆವು.

ಏಪ್ರಿಲ್ ಹತ್ತರಂದು ನಾನು ಫೋನ್ ...ುಖಾಂತರ ಅಪ್ಪಾಜಿ ಜೊತೆ ಮಾತನಾಡಿದ್ದೆ. ...ಧಾರಣವಾಗಿ ಹೀಗೆ ದಿನಕ್ಕೊಮ್ಮೆ ಕಾಲ್ ...ಾಡುವುದು ನಮ್ಮ ಮನೆಯವರೆಲ್ಲರ ಅಭ್ಯಾಸ. ...ಪ್ಪಾಜಿಯೊಂದಿಗೆ ಮಾತ್ರವಲ್ಲ, ನಾವು — ...ಂದರೆ ನಾನು, ರಾಘು, ಪುನೀತ್ — ಕೂಡ ...ರಸ್ಪರ ದಿನಕ್ಕೊಮ್ಮೆ ಫೋನ್‌ನಲ್ಲಿ ಮಾತನಾಡು...ವೆ. ಅದೇಕೋ ಮರುದಿನ ಅಪ್ಪಾಜಿ ಜೊತೆ ...ಾತನಾಡಬೇಕೆಂಬ ತುಡಿತ ನನ್ನಲ್ಲಿ ತುಂಬಾ ...ಾಸ್ತಿಯಾಗಿತ್ತು. ಆದ್ದರಿಂದ ಅವತ್ತು ಹಲವಾರು ...ಾರಿ ಅಪ್ಪಾಜಿಗೋಸ್ಕರ ಟ್ರೈ ಮಾಡಿದೆ. ಆದರೆ ...ನ್ನ ದುರದೃಷ್ಟ, ಇಡೀ ದಿನ ನನಗೆ ಫೋನ್ ...ೈನ್ ಸಿಗಲೇ ಇಲ್ಲ. ಯಾಕೆಂದರೆ ನಾವು ...ಟಿಂಗ್ ಮಾಡುತ್ತಿದ್ದ ಸ್ಥಳದಲ್ಲಿ ಸರಿಯಾಗಿ ...ಗ್ನಲ್ ಸಿಗುತ್ತಿರಲಿಲ್ಲ.

ಏಪ್ರಿಲ್ ಹನ್ನೆರಡನೇ ತಾರೀಖು ...ಂಗಳೂರಿನಿಂದ ಸಿನಿಮಾ ಪತ್ರಕರ್ತರು ಸೆಟ್‌ಗೆ ...ಂದರು. ಅವರೊಂದಿನ ಮಧ್ಯಾಹ್ನದ ಊಟ ...ಾಡುತ್ತಾ ಹರಟೆ ಹೊಡೆಯುತ್ತಿದ್ದೆ. ಆಗ ಅದ್ಯಾವುದೋ ...ರಣಕ್ಕೆ ಕೆಳಗಡೆ ಹೋಗಿದ್ದ ನಿರ್ಮಾಪಕ ಪಟ್ಟಾಭಿರಾಮ್ ...ವರ ಫೋನ್ ರಿಂಗಾಯಿತು. ಅಲ್ಲಿ ಕೆಳಗಡೆ ಒಂದು ...ಳದಲ್ಲಿ ಮಾತ್ರ ಮೊಬೈಲ್ ಸಿಗ್ನಲ್ ಸಿಗುತ್ತಿತ್ತು. ಆಗ ...ೋನ್‌ನಲ್ಲಿ ಮಾತನಾಡಿದ ಪಟ್ಟಾಭಿರಾಮ್ ದಂಗಾಗಿ ...ಡೋಡಿ ಬಂದು ಅಪ್ಪಾಜಿಯ ನಿಧನದ ಸುದ್ದಿಯನ್ನು ...ೇಳಿದರು. ಅದನ್ನು ಕೇಳಿದಾಕ್ಷಣ ನಾನು ಸ್ತಂಭೀಭೂತ ...ಾದೆ. ನನ್ನ ಜೀವನದಲ್ಲೇ ಅತಿ ಕೆಟ್ಟದ್ದಾದ ಸುದ್ದಿ ...ದಾಗಿತ್ತು. ನಾನು ಕೂಡಲೇ ಕೈತೊಳೆದು ಬೆಂಗಳೂರಿಗೆ ...ೊರಟು ನಿಂತೆ. ನನ್ನೊಂದಿಗಿದ್ದ ಪತ್ರಕರ್ತರೂ ಹೊರ...ರು.

ಆದರೆ ಅದಾಗಲೇ ನನ್ನ ಪತ್ನಿ ಮತ್ತು ಮಕ್ಕಳು ...ೊಳೋ ಎಂದು ಅಳುತ್ತಿದ್ದರು. ಅವರೊಂದಿಗೆ ...ಘಣ್ಣನ ಪತ್ನಿ ಮತ್ತು ಮಕ್ಕಳು ಕೂಡ ಬಿಕ್ಕಿಬಿಕ್ಕಿ ...ಳಲಾರಂಭಿಸಿದ್ದರು. ನಾನೂ ಕೂಡ ಅಳುತ್ತಲೇ ಇದ್ದೆ. ...ನ್ನ ಡ್ರೈವರ್ ಗೋವಿಂದು, ಸಹಾಯಕ ರವಿ, ...ುಮಾರರಾಮ' ಸೆಟ್‌ನ ಹುಡುಗರೆಲ್ಲಾ ಬಿಕ್ಕಿಬಿಕ್ಕಿ ...ಳುತ್ತಿದ್ದರು. ಆಗ ನನ್ನ ಮನೆಯವರೂ ಸೇರಿದಂತೆ ...ನ್ನಿಂದ ಯಾರನ್ನೂ ಸಮಾಧಾನಪಡಿಸಲು ಸಾಧ್ಯವಾಗ...ಲ್ಲ. ಅದನ್ನು ಹೇಗೆ ಮಾಡಬೇಕೆಂಬ ಅರಿವು ಮತ್ತು ...ಕ್ತಿ ಕೂಡ ನನ್ನಲ್ಲಿರಲಿಲ್ಲ. ಯಾಕೆಂದರೆ ಸ್ವತಃ ನಾನೇ ...ಶಕ್ತಿಯಿಂದ ಶೂನ್ಯನಾಗಿಬಿಟ್ಟಿದ್ದೆ.


ಕೂಡಲೇ ರೂಮಿಗೆ ಹೋಗಿ ಕೈಗೆ ಸಿಕ್ಕ ಬಟ್ಟೆಯನ್ನೆಲ್ಲ ...್ಯಾಗಿಗೆ ತುರುಕಿಕೊಂಡು ಬೆಂಗಳೂರಿಗೆ ಹೊರಡಲು ...ಯಾರಾದೆವು. ನಾವು ಸುಮಾರು ಇಪ್ಪತ್ತು ಜನ ...ದ್ದಿದ್ದರಿಂದ ನನ್ನ ಕಾರನ್ನು ನಾನೇ ಡ್ರೈವ್ ಮಾಡಿಕೊಂಡು ...ರುತ್ತೇನೆ ಎಂದು ಹೇಳಿದೆ. ಆದರೆ ಎಂದೂ ನನಗೆ ...ೈವರ್ ಸೀಟನ್ನು ನೀಡದ ನನ್ನ ಚಾಲಕ ಗೋವಿಂದು ...ೇಡಣ್ಣಾ... ನೀವು ಕುಳಿತ್ಕೊಳ್ಳಿ, ನಾನೇ ಡ್ರೈವ್ ...ಾಡ್ತೀನಿ' ಎಂದ. ಆದರೆ ನನ್ನ ಮನಸ್ಸು ಸುಮ್ಮನೇ ...ಳಿತುಕೊಳ್ಳಲು ತಯಾರಿರಲಿಲ್ಲ. 'ಮಕ್ಕಳನ್ನೆಲ್ಲಾ ನೀನು ಕಾರಲ್ಲಿ ಕೂರಿಸಿಕೊಂಡು ಬಾ..' ಎಂದು ಹೇಳಿ ...ನು ಕಾರಿನಲ್ಲಿ ಕುಳಿತುಕೊಂಡೆ. ಅಷ್ಟೊತ್ತಿಗೆ ಅಲ್ಲಿಯ ...ೊಲೀಸರಿಗೆ ಸುದ್ದಿ ಗೊತ್ತಾಗಿ ಅವರು ನಮಗೆ ...ಂಗಳೂರಿನ ತನಕ ಹೋಗಲು ಎರಡು ಎಸ್ಕಾರ್ಟ್ ...ೊಲೀಸ್ ವ್ಯಾನನ್ನು ಕಳುಹಿಸಿಕೊಟ್ಟರು.

ಕಾರು ಹಂಪಿ ಬಿಟ್ಟ ತಕ್ಷಣ ನನ್ನ ಮನಸ್ಸಿನಲ್ಲಿ ...ರಾರು ಯೋಚನೆಗಳು ಬಂದುಹೋದವು. ಎಲ್ಲವೂ ...ರ್ಥಾಬರ್ಥ. ಯಾವುದನ್ನೂ ನಾನು ನೆನೆಸಿಕೊಂಡು ...ಮಗೆ ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ಒಂದು ಮಾತಂತೂ ಸತ್ಯ. ನಮ್ಮ ಕಾರಲ್ಲಿ ಹಂಪಿಯಲ್ಲಿ ಆರಂಭವಾದ ಅಳು ಬೆಂಗಳೂರು ತನಕ ನಿಲ್ಲಲೇ ಇಲ್ಲ. ಯಾರು ಯಾರನ್ನು ಸಮಾಧಾನಪಡಿಸಬೇಕು ಎಂಬುದು ಗೊತ್ತಾಗಲೇ ಇರಲಿಲ್ಲ. ಎಲ್ಲರಿಗೂ ಅಳುವುದಷ್ಟೇ ಗೊತ್ತಿತ್ತೇ ವಿನಃ ಅಲ್ಲಿ ಮಾತು ಮತ್ತು ಮೌನಕ್ಕೆ ಜಾಗವೇ ಇರಲಿಲ್ಲ. ನಾನು ಮಾತ್ರ ಮನೆಯವರ ಅಳು ಮತ್ತು ಆಕ್ರಂದನ ಕೇಳಿಯೂ ಒಂಥರಾ ನಿರ್ಲಿಪ್ತವಾಗಿ ಗಾಡಿಯನ್ನು ಶರವೇಗದಲ್ಲಿ ಓಡಿಸುತ್ತಿದ್ದೆ. ಆದಷ್ಟು ಬೇಗ ನಾನೊಮ್ಮೆ ಅಪ್ಪಾಜಿಯ ಮುಖವನ್ನು ನೋಡಬೇಕು, ಅವರಿಗೆ ಮುತ್ತಿಡಬೇಕೆಂಬುದಷ್ಟೇ ನನ್ನ ಯೋಚನೆ ಆಗಿತ್ತು.

ಹೀಗೆ ಕಾರು ಓಡಿಸುತ್ತಾ ಪೆಟ್ರೋಲ್ ಖಾಲಿಯಾಗುತ್ತಿರುವುದನ್ನು ಗಮನಿಸಿ ಪೆಟ್ರೋಲ್ ಬಂಕ್ ಕಡೆಗೆ ತಿರುಗಿಸಿದೆ. ನಾನಲ್ಲಿ ಪೆಟ್ರೋಲ್ ಹಾಕಿಸುತ್ತಿದ್ದುದನ್ನು ನೋಡಿದ ಒಂದು ಹುಡುಗಿ ಓಡಿ ಬಂದು, ನನಗೆ ಶೇಕ್ ಹ್ಯಾಂಡ್ ನೀಡಿ 'ಅಪ್ಪಾಜಿ ಹೇಗಿದ್ದಾರೆ ಅಣ್ಣಾ?' ಎಂದು ಕೇಳಿದಳು. ಹಳ್ಳಿಯ ಆ ಹುಡುಗಿಯ ಮುಗ್ಧತೆ ಮತ್ತು ಅಭಿಮಾನ ನೋಡಿ ಅಪ್ಪಾಜಿ ನಿಧನ ಹೊಂದಿದ ಸುದ್ದಿಯನ್ನು ಆಕೆಗೆ ಹೇಳಲು ನನ್ನ ಮನಸ್ಸು ಒಪ್ಪಲಿಲ್ಲ. 'ಅಪ್ಪಾಜಿ ಚೆನ್ನಾಗಿದ್ದಾರೆ ಮರಿ...' ಎಂದು ಹೇಳಿ ಮತ್ತೆ ಕಾರನ್ನೇರಿ ಬೆಂಗಳೂರು ಕಡೆಗೆ ಹೊರಟೆ.

ಅಪ್ಪಾಜಿ ನಿಧನ ಹೊಂದಿದ ಸುದ್ದಿ ಆ ಹುಡುಗಿಗೆ ಒಂದೆರಡು ಗಂಟೆಗಳ ನಂತರ ಗೊತ್ತಾಗಿರಬೇಕು. ಆದರೂ ಆಕೆಗೆ ನಾನು ಸುಳ್ಳು ಹೇಳಿದ್ದೆ ಎಂದು ಆಕೆ ನನ್ನನ್ನು ಶಪಿಸಲೂಬಹುದು. ಅವತ್ತು ನನ್ನಿಂದ ಸತ್ಯವನ್ನು ಹೇಳಲಿಕ್ಕಾಗದೆ ಆವಳಿಗೆ ಸುಳ್ಳು ಹೇಳಿದ ಕಾರಣಕ್ಕಾಗಿ ಈ ಲೇಖನದ ಮುಖಾಂತರ ಆ ಹುಡುಗಿಯ ಕ್ಷಮೆ ಯಾಚಿಸುತ್ತೇನೆ.

ನಿರೂಪಣೆ: ಸದಾಶಿವ ಶೆಣೈ



55

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನಾವು ತುಮಕೂರನ್ನು ತಲುಪಿದ ನಂತರ ಬೆಂಗಳೂರಿಗೆ ಬರಲು ಬಹಳ ಕಷ್ಟವಾಯಿತು. ದಾರಿಯುದ್ದಕ್ಕೂ ಆಗಲೇ ಗಲಾಟೆ ಆರಂಭವಾಗಿತ್ತು, ಒಂದು ಹಂತದಲ್ಲಂತೂ ನಾವು ಬೆಂಗಳೂರು ತಲುಪುತ್ತೇವೋ? ಇಲ್ಲವೋ? ಎಂಬ ಸಂಶಯ ಕಾಡಲಾರಂಭಿಸಿತು. ಆಗ ನಮ್ಮ ಜೊತೆ ಇದ್ದ ಎರಡು ಪೊಲೀಸ್ ಎಸ್ಕಾರ್ಟ್ ವ್ಯಾನುಗಳು ದಾರಿಯುದ್ದಕ್ಕೂ ಇದ್ದ ಗುಂಪುಗಳನ್ನು ಚದುರಿಸಿ ನಮ್ಮ ಕಾರು ಸರಾಗವಾಗಿ ಹೋಗಲು ಅನುವು ಮಾಡಿಕೊಟ್ಟರು. ಅಷ್ಟೇ ಅಲ್ಲದೆ "ದಯವಿಟ್ಟು ಯಾವುದೇ ಕಾರಣಕ್ಕೂ ನಿಮ್ಮ ತಲೆಯನ್ನು ಹೊರಗೆ ಹಾಕಬೇಡಿ; ಕಾರಲ್ಲಿ ನೀವಿದ್ದೀರಿ ಎಂದು ಜನರಿಗೆ ಗೊತ್ತಾಗಬಾರದು" ಎಂದು ಪೊಲೀಸರು ಸೂಚಿಸಿದರು. ಹೀಗೆ ಕಷ್ಟ ಪಡುತ್ತಲೇ ನಮ್ಮನ್ನು ನೆಲಮಂಗಲದ ತನಕ ತಂದರು.

ಆದರೆ ನೆಲಮಂಗಲ ದಾಟಿದ ಮೇಲೆ ಬೆಂಗಳೂರನ್ನು ಪ್ರವೇಶಿಸುವುದು ಇನ್ನೂ ಕಷ್ಟಕರವಾಯಿತು. ಆ ಯಾತನೆಯಿಂದಾಗಿ ನನ್ನ ತಲೆ ಚಿಟ್ಟು ಹಿಡಿದು ಹೋಗುವುದೊಂದು ಬಾಕಿ. ಆದರೆ ಎಲ್ಲವನ್ನೂ ಮೌನವಾಗಿ ಸಹಿಸಿಕೊಳ್ಳಲೇಬೇಕಾದ ಸಂದರ್ಭ ಅದಾಗಿತ್ತು. ಆಗ ದಾರಿಯುದ್ದಕ್ಕೂ ರಾಘು ಮತ್ತು ಪುನೀತ್ ಬೆಂಗಳೂರಿನಲ್ಲಿ ಏನೇನಾಗುತ್ತಿದೆ ಎಂಬುದರ ಬಗ್ಗೆ ಫೋನಿನಲ್ಲೇ ನನಗೆ ತಿಳಿಸುತ್ತಲೇ ಇದ್ದರು. ಬೆಂಗಳೂರಿನಲ್ಲಿ ಗಲಾಟೆ ಆರಂಭವಾಗಿದೆ, ಅಪ್ಪಾಜಿಯವರ ಪಾರ್ಥಿವ ಶರೀರವಿರುವ ವಾಹನವನ್ನು ಅಭಿಮಾನಿಗಳೇ ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗುತ್ತಿದ್ದಾರೆ ಇತ್ಯಾದಿ, ಇತ್ಯಾದಿ ಸುದ್ದಿಗಳನ್ನು ಕೇಳಿ ಇದೆಲ್ಲ ಎಲ್ಲಿಗೆ ಹೋಗಿ ತಲುಪುತ್ತದೆಯೋ ಎಂಬ ಚಿಂತೆ ನನ್ನನ್ನು ಕಾಡಲು ಶುರುಮಾಡಿತು.

ನೆಲಮಂಗಲದಿಂದಾಚೆ ಪರಿಸ್ಥಿತಿ ತುಂಬಾ ಗಂಭೀರವಾಗುತ್ತಿದ್ದುದ್ದನ್ನು ಕಂಡು ಇನ್ನೆರಡು ಪೊಲೀಸ್ ವ್ಯಾನುಗಳು ನಮ್ಮನ್ನು ಸೇರಿದವು. ಆದರೆ ಆ ಸಂದರ್ಭದಲ್ಲಿ ಎಷ್ಟೇ ಪೊಲೀಸರು ಬಂದರೂ ಏನೂ ಸಹಾಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೆ. ಆದರೆ ಪೊಲೀಸರು ಹರಸಾಹಸ ಮಾಡಿ ರಸ್ತೆಯುದ್ದಕ್ಕೂ ನಮಗೆ ರಕ್ಷಣೆ ಕೊಟ್ಟಿದ್ದು ಮಾತ್ರವಲ್ಲ, ಸರಾಗವಾಗಿ ದಾರಿ ಮಾಡಿಕೊಟ್ಟ ಅವರ ಶ್ರಮವನ್ನು ನಾನು ಮೆಚ್ಚುತ್ತೇನೆ, ಅಭಿನಂದಿಸುತ್ತೇನೆ.

ಕೊನೆಗೂ ಅದ್ಹೇಗೋ ನಾವು ಬೆಂಗಳೂರನ್ನು ತಲುಪಿದೆವು. ಆದರೆ 'ನಾವು ಹೇಳುವ ತನಕ ನೀವು ನಿಮ್ಮ ಮನೆಗೆ ಹೋಗುವಂತಿಲ್ಲ, ಅಲ್ಲಿ ಗಲಾಟೆ ನಡೆಯುತ್ತಿದೆ ' ಎಂದು ಪೊಲೀಸರು ನಮಗೆ ಕಟ್ಟೆಚ್ಚರ ನೀಡಿದರು. ನನಗೆ ನಿರಾಶೆಯಾದರೂ ಪೊಲೀಸರ ಆದೇಶವನ್ನು ಪಾಲಿಸದೇ ನಮಗೆ ಬೇರೆ ವಿಧಿ ಇರಲಿಲ್ಲ. ಹಾಗೆಂದೇ ನಮ್ಮ ಮನೆಯವರಿಗೆಲ್ಲ ಸಮಾಧಾನಪಡಿಸಿದೆ. ಕೊನೆಗೆ ನಮ್ಮನ್ನೆಲ್ಲಾ ಯಶವಂತಪುರದ ಬಳಿ ಪೊಲೀಸರ ದೊಡ್ಡ ವ್ಯಾನಿನೊಳಗೆ ಕೂರಿಸಿ ಗೋವಿಂದು ಮಾಮನ ಮನೆಗೆ ತಂದರು. ಆದರೆ ಆ ಜನರ ದಟ್ಟಣೆಯಲ್ಲಿ ನಾವು ಅಪ್ಪಾಜಿಯ ಮನೆಗೆ ಹೋಗಲಾಗಲಿಲ್ಲವಾದ್ದರಿಂದ ನಮ್ಮನ್ನು ನೇರವಾಗಿ ಕಂಠೀರವ ಕ್ರೀಡಾಂಗಣಕ್ಕೆ ಕರೆದೊಯ್ಯಲಾಗುವುದು ಎಂದು ಹೇಳಿದರು.

ಅವತ್ತಿನ ಸಂದರ್ಭವೇ ಹಾಗಿತ್ತು, ನಾವು ಮನೆಗೂ ಹೋಗುವಂತಿರಲಿಲ್ಲ, ಅಪ್ಪಾಜಿಯ ಪಾರ್ಥಿವ ಶರೀರವನ್ನು ನೋಡಲು ಸ್ಟೇಡಿಯಂ ಕಡೆಗೂ ಹೋಗಲು ಸಾಧ್ಯವಿರಲಿಲ್ಲ. ಇಡೀ ಬೆಂಗಳೂರು ಮಾತ್ರವಲ್ಲ, ಕರ್ನಾಟಕದ ಉದ್ದಗಲಕ್ಕೂ ಗಲಭೆಗಳು ವ್ಯಾಪಿಸಿವೆ ಎಂಬ ಪೊಲೀಸರು ಹೇಳಿದಾಗ ನಾನು ಇನ್ನಷ್ಟು ಘಾಸಿಗೊಂಡೆ.

ಕೊನೆಗೆ ಪೊಲೀಸರು ಧೈರ್ಯ ಮಾಡಿ ನಮ್ಮನ್ನು ಕಂಠೀರವ ಕ್ರೀಡಾಂಗಣಕ್ಕೆ ಕರೆದೊಯ್ಯಲು ನಿರ್ಧರಿಸಿದರು. ಆಗ ನಮ್ಮ ಜೊತೆ ಇದ್ದ ಚಿಕ್ಕ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಕೇ? ಅಥವಾ ಅವರನ್ನು ಮನೆಗೆ ಕಳಿಸಬೇಕೇ ಎಂಬ ಗೊಂದಲ ಉಂಟಾಯಿತು. ಅವರನ್ನು ಮನೆಗೆ ಕಳಿಸಲು ಸಾಧ್ಯವಿಲ್ಲವೆಂದ ಮೇಲೆ ಇನ್ನೆಲ್ಲಿಗೆ ಕಳಿಸೋಣ? ಎಂದು ಆಲೋಚಿಸುತ್ತಿದ್ದೆ. ಆಗ ಪೊಲೀಸರು ಜನರ ನೂಕುನುಗ್ಗಲಿನಿಂದ ನನ್ನನ್ನು ಪಾರು ಮಾಡಿ ವ್ಯಾನಿನೊಳಗೆ ಮತ್ತೆ ಕೂರಿಸಿದ್ದರು. ಆದರಲ್ಲಿ ನನ್ನ ಸಹಾಯಕರು, ಚಾಲಕ ಇದ್ದರು. ಮನೆಯವರೆಲ್ಲಾ ಇನ್ನೊಂದು ವ್ಯಾನಿನಲ್ಲಿ ಕುಳಿತರು. ಅವರನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೀರಿ ಎಂದು ನಾನು ಪೊಲೀಸರನ್ನು ಕೇಳಲೇ ಇಲ್ಲ.

ಕಂಠೀರವ ಕ್ರೀಡಾಂಗಣಕ್ಕೆ ಬಂದಾಗ ಮತ್ತೊಮ್ಮೆ ಸಮಸ್ಯೆ ಎದುರಾಯಿತು. ಜನಸಾಗರದ ನಡುವೆ ನಮ್ಮ ಪೊಲೀಸ್ ವ್ಯಾನಿಗೆ ಮುಂದೆ ಹೋಗಲು ಅವಕಾಶವೇ ಇರಲಿಲ್ಲ. ನಾನು ಆ ವ್ಯಾನಿನಲ್ಲಿ ಇದ್ದೇನೆ ಎಂದು ಅನೌನ್ಸ್ ಮಾಡಲೂ ಪೊಲೀಸರಿಗೆ ಆಗುತ್ತಿರಲಿಲ್ಲ. ಹಾಗೇನಾದರೂ ಪೊಲೀಸರು ಅನೌನ್ಸ್ ಮಾಡಿದ್ದೇ ಆದಲ್ಲಿ ಆ ಜನ, ಆ ಅಭಿಮಾನಿಗಳು ನನ್ನನ್ನೇ ಸುತ್ತುವರಿದು ಅವರ ಆಕ್ರಂದನ ಮತ್ತು ನೋವನ್ನು ತೋರ್ಪಡಿಸುತ್ತಿದ್ದುದು ಗ್ಯಾರೆಂಟಿ. ಇಂಥ ಸಂದರ್ಭದಲ್ಲಿ ಪೊಲೀಸ್ ವ್ಯಾನಿನಲ್ಲಿ ಕದ್ದು ಮುಚ್ಚಿ ಮೂಲೆಯಲ್ಲಿ ಕುಳಿತುಕೊಂಡ ನಾನು ದಾರಿಯುದ್ದಕ್ಕೂ ಅಭಿಮಾನಿಗಳ ರೋಷ, ನೋವು, ಗಲಾಟೆಯನ್ನು ಮೌನವಾಗಿ ನೋಡುತ್ತಿದ್ದೆ. ಕೊನೆಗೂ ಕ್ರೀಡಾಂಗಣ ತಲುಪಿದ ನಂತರ ಇಡೀ ರಾತ್ರಿ ರಾಘು ಮತ್ತು ಪುನೀತ್ ಜೊತೆ ಅಲ್ಲೇ ಅಭಿಮಾನಿಗಳನ್ನು ಕಂಟ್ರೋಲ್ ಮಾಡುತ್ತಿದ್ದೆ. ಹಾಗೆ ಜನರನ್ನು ನಿಯಂತ್ರಿಸುತ್ತಿರುವಾಗಲೇ ನಾವು ಮೂವರೂ ಮುಂದಿನ ಕೆಲಸ ಕಾರ್ಯಗಳ ಬಗ್ಗೆ ಚರ್ಚಿಸುತ್ತಿದ್ದೆವು. ಅದನ್ನು ಒಂದು ಹತ್ತು ನಿಮಿಷ ಕೂಡಾ ಖಾಸಗಿಯಾಗಿ ಕುಳಿತು ಆಲೋಚಿಸಲು ನಮಗೆ ಸಮಯವೇ ಸಿಗಲಿಲ್ಲ. ಇನ್ನೊಂದೆಡೆ ಅಮ್ಮನೊಂದಿಗೆ ಈ ಬಗ್ಗೆ ಚರ್ಚಿಸಬೇಕೆಂದು ಅನ್ನಿಸಿದರೂ ಅದಕ್ಕೂ ಅವಕಾಶವೇ ಇರಲಿಲ್ಲ. ಬೆಳಗ್ಗಿನ ಜಾವದ ತನಕ ಕ್ರೀಡಾಂಗಣಕ್ಕೆ ಜನಸಾಗರ ಹರಿದು ಬರುತ್ತಿದ್ದರಿಂದ ನಾವು ಹೊರಗೆ ಹೋಗಲು ಸಾಧ್ಯವೇ ಇರಲಿಲ್ಲ. ರಾತ್ರಿ ಮೂರು ಗಂಟೆಗೆ ಜನಸಾಗರ ಸ್ವಲ್ಪ ಕಡಿಮೆಯಾಗಿದ್ದರಿಂದ ನಮ್ಮ ಮನೆಯವರೆಲ್ಲಾ ಬಂದು ಅಪ್ಪಾಜಿಗೆ ಅಂತಿಮ ನಮನ ಸಲ್ಲಿಸಲಿ ಎಂದು ಸೂಚಿಸಿದೆ. ಆ ಕೂಡಲೇ ನಾಲ್ಕು ಪೊಲೀಸ್ ವ್ಯಾನುಗಳಲ್ಲಿ ನಮ್ಮ ಮನೆಯ ಎಲ್ಲ ಸದಸ್ಯರೂ ಅತ್ತೆ, ಅಮ್ಮ, ಮಕ್ಕಳು, ಅಜ್ಜಿ, ಭಾವ-ತಂಗಿ.... ಹೀಗೆ ಎಲ್ಲರೂ ಸ್ಟೇಡಿಯಂಗೆ ಬಂದರು. ಅವರಿಗೆಲ್ಲಾ ಅಲ್ಲಿಯವರೆಗೂ ಅಪ್ಪಾಜಿಗೆ ನಮನ ಸಲ್ಲಿಸಲು ಸಾಧ್ಯವೇ ಆಗಿರಲಿಲ್ಲ.

ಮರುದಿನ ಬೆಳಿಗ್ಗೆ ಕಂಠೀರವ ಸ್ಟುಡಿಯೋದತ್ತ ಮೆರವಣಿಗೆ ಹೊರಟಿತು. ಆದರೆ ಅಪ್ಪಾಜಿಯ ಅಂತಿಮ ಯಾತ್ರೆಯನ್ನು ದಾರಿಯುದ್ದಕ್ಕೂ ಸ್ಮೋಕ್ ಬಾಂಬ್ ಮತ್ತು ಪೊಲೀಸ್ ಫಯರಿಂಗ್, ಗಲಭೆ, ಕಲ್ಲು ತೂರಾಟ ಮುಂತಾದ ಹಿಂಸಾತ್ಮಕ ಕೃತ್ಯಗಳೇ ಸ್ವಾಗತಿಸುವಂತಾಗಿದ್ದು ವಿಪರ್ಯಾಸ. ಶಾಂತಿಪ್ರಿಯನಿಗೆ ಅಶಾಂತಿಯ ಸಿಂಪಡಿಕೆ..... ಎಂತಹಾ ವೈರುಧ್ಯ!!

(ಮುಂದುವರೆಯುತ್ತದೆ)

P. LANKESH, Kannada Weekly Price Rs. 10/- 13-6-2007 RNI No. KARKAN2005/14648 Regd.No.KA/BG(S)/2036/2005-07

ಸಂಗೀತಗಾರರ ಅಪಸ್ವರ

ಕನ್ನಡ ಚಿತ್ರರಂಗದಲ್ಲಿ ಈಗ ಸಂಗೀತಗಾರರ ನಡುವೆ ಅಪಸ್ವರ ಪ್ರಾರಂಭವಾಗಿದೆ. ಅದಕ್ಕೆ ಮುನ್ನುಡಿ ಬರೆದದ್ದು ಹಂಸಲೇಖಾ ಮತ್ತು ನಾಗೇಂದ್ರ ಪ್ರಸಾದ್ ಎಂಬ ಇಬ್ಬರು ಸಂಗೀತ ನಿರ್ದೇಶಕರು. ಟಿ.ವಿ. 9 ಚಾನೆಲ್‌ನವರ ಗುಪ್ತ ಕ್ಯಾಮರಾಕ್ಕೆ ಮೊನ್ನೆ ಬಲಿಯಾದ ನಾಗೇಂದ್ರ ಪ್ರಸಾದ್ "ಹಂಸಲೇಖಾ



ಅವರು 'ಒಬ್ಬನೇ ಒಬ್ಬನೇ ಮಂಜುನಾಥ ನೊಬ್ಬನೇ' ಹಾಡನ್ನು ನನ್ನಿಂದ ಬರೆಸಿದರೂ ನನಗೆ ಕ್ರೆಡಿಟ್ ಕೊಡಲಿಲ್ಲ" ಎಂದು ಆಪಾದಿಸಿದ್ದರು. ಆ ಆಪಾದನೆಗೆ ಹಂಸಲೇಖಾ ಪ್ರತ್ಯುತ್ತರ ನೀಡಿ "ಆತ ಆ ಹಾಡನ್ನು ಬರೆದಿಲ್ಲ. ಅದು ತೆಲುಗಿನಲ್ಲಿ ಭಾರವಿ ಬರೆದ ಹಾಡಿನ ಅನುವಾದ ಅಷ್ಟೇ" ಎಂದು ಸ್ಪಷ್ಟೀಕರಿಸಿದ್ದಾರೆ. ಇದೇ ರೀತಿ "ಮುತ್ತಿನ ಹಾರ ಚಿತ್ರದಲ್ಲಿ 'ದೇವರು ಬರೆದ ಪ್ರೇಮದ ಧಾರೆ' ಹಾಡನ್ನು ಬಾಲಮುರಳಿಕೃಷ್ಣ ಹಾಡಲಿಲ್ಲ. ಬದಲಾಗಿ ಅದನ್ನು ಹಾಡಿದ್ದು ನಾನು" ಎಂದು ಅವರ ಶಿಷ್ಯ ವೆಂಕಟರಾಘವನ್ ಆರೋಪಿಸಿದ್ದಾರೆ. "ಇದಕ್ಕೆ ಬಾಲಮುರಳೀಕೃಷ್ಣ ಅವರನ್ನೇ ಕೇಳಿ" ಎಂದು ಹಂಸ್ ಎದಿರೇಟು ಹಾಕಿದ್ದಾರೆ.

ಅಂತೂ ಸಂಗೀತ ಲೋಕದಲ್ಲಿ ಗುರುಶಿಷ್ಯರ ನಡುವೆ ಅಪಸ್ವರ ಕೇಳಿಬರುತ್ತಿದೆ.



'ರೋಮಾಂಚನ' ತಂದ ಅವಾಂತರ

ತಮ್ಮ ಹೊಸ ಚಿತ್ರಕ್ಕೆ 'ರಮ್ಯಾ ರಕ್ಷಿತಾ' ಎಂಬ ಹೆಸರಿಟ್ಟು ಅಪಾರ ಪ್ರಚಾರ ಗಿಟ್ಟಿಸಿದ್ದ ಕವಿರಾಜೇಶ್ ಎಂಬ ನಿರ್ದೇಶಕ ಮೊನ್ನೆ ಬೇರೆ ಕಾರಣಕ್ಕೆ ಭಾರೀ ಸುದ್ದಿ ಮಾಡಿದರು.

ಅವರ ನಿರ್ದೇಶನದ 'ರೋಮಾಂಚನ' ನಡೆಯುತ್ತಿದ್ದ ಅಪರ್ಣಾ ಚಿತ್ರಮಂದಿರಕ್ಕೆ ಉಪ್ಪಾರಪೇಟೆ ಪೊಲೀಸರು ಮತ್ತು ಸೆನ್ಸಾರ್ ಸಮಿತಿಯ ಸದಸ್ಯರು ಜಂಟಿಯಾಗಿ ದಾಳಿ ನಡೆಸಿ ಚಿತ್ರದ ರೀಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕವಿರಾಜೇಶ್ ಹಿಂದೆ ಮಾಡಿದ್ದ ಎರಡೂ ಚಿತ್ರಗಳು ಕೂಡಾ ಬ್ಲೂ ಫಿಲಂ ಮಾದರಿಯಲ್ಲೇ ಇದ್ದವು. ಈಗ ಸಮಸ್ಯೆ ಏನಪ್ಪಾ ಅಂದರೆ 'ರಮ್ಯಾ ರಕ್ಷಿತಾ' ಚಿತ್ರದಲ್ಲಿ ಈ ಮನುಷ್ಯ ಏನೇನು ತೂರಿಸಬಹುದು ಎಂಬುದು.

ಈ ಮಧ್ಯೆ 'ರೋಮಾಂಚನ' ಚಿತ್ರವನ್ನು ಪೊಲೀಸರು ವಶಪಡಿಸಿಕೊಂಡ ನಂತರ ಈಗ ಬಿಡುಗಡೆಗೆ ಕಾದಿರುವ ಇನ್ನಿತರ 'ದೇವರ ಚಿತ್ರ'ಗಳೂ ಸಮಸ್ಯೆ ಎದುರಿಸುತ್ತಿವೆ. ಮೊನ್ನೆ ಮೊನ್ನೆ ಶಕೀಲಾ ಎಂಬ ಹಾಟ್ ನಟಿ ನಟಿಸಿರುವ '16 ಟು 60' ಎಂಬ ಚಿತ್ರ ನೂರು ದಿನ ಪೂರೈಸಿದ್ದರಿಂದ ಕಾತುರವಾಗಿ ಕಾದಿದ್ದ ಇತರೆ ದೇವರ ಚಿತ್ರಗಳ—ಒಂದು ಅಂದಾಜಿನ ಪ್ರಕಾರ ಸುಮಾರು 25—ನಿರ್ಮಾಪಕರಿಗೆ ಈಗ ತಲೆನೋವಾಗಿದೆ. ಛೇ! ದೇವರ ಚಿತ್ರಗಳಿಗೇ ಇವತ್ತು ಗಾಂಧಿನಗರದಲ್ಲಿ ರಕ್ಷಣೆಯಿಲ್ಲ....!!

'ಬಂಗಾರದ ಮನುಷ್ಯ' ನಿರ್ಮಾಪಕರ ಸಂಕಷ್ಟ

'ಬಂಗಾರದ ಮನುಷ್ಯ' ಚಿತ್ರದ ನಿರ್ಮಾಪಕರಲ್ಲೊಬ್ಬರಾದ ಆರ್. ಲಕ್ಷ್ಮಣ್ ಕಳೆದ ಮೂರು ತಿಂಗಳುಗಳಿಂದ ತೀವ್ರವಾದ ಅನಾರೋಗ್ಯದಿಂದ ಜೀವನ್ಮರಣದ ಹೋರಾಟ ನಡೆಸುತ್ತಿದ್ದಾರೆ. ಇವರು ಬರೀ ನಿರ್ಮಾಪಕರು ಮಾತ್ರವಲ್ಲ, ಚಿತ್ರರಂಗದ ಥಿಂಕ್ ಟ್ಯಾಂಕ್ ಸದಸ್ಯರುಗಳಲ್ಲಿ ಒಬ್ಬರಾಗಿದ್ದವರು. ಚಿತ್ರರಂಗದ ಬಗ್ಗೆ ಅಪಾರ ಜ್ಞಾನ ಮತ್ತು ಒಳ ಮಜಲುಗಳನ್ನು ಬಲ್ಲವರು. ಇಂಥವರು ಅನಾರೋಗ್ಯಕ್ಕೊಳಗಾಗಿ ಮಲಗಿರುವಾಗ ಉದ್ಯಮದ ಯಾರೊಬ್ಬರೂ ಅವರನ್ನು ವಿಚಾರಿಸಲು ಹೋಗಿಲ್ಲ.

ವಿಪರ್ಯಾಸದ ಸಂಗತಿ ಯಾವುದೆಂದರೆ, ಅವರು ದಿಢೀರನೆ ಅನಾರೋಗ್ಯ ಪೀಡಿತರಾಗಲು ಮುಖ್ಯ ಕಾರಣ ಒಂದಾನೊಂದು



ಕಾಲದಲ್ಲಿ ಸೂಪರ್ ಡೂಪರ್ ಹಿಟ್ ಆಗಿದ್ದ 'ಬಂಗಾರದ ಮನುಷ್ಯ' ಚಿತ್ರದ ನೆಗೆಟಿವ್ ಹಕ್ಕನ್ನು ಅವರಿಗೆ ಗೊತ್ತಾಗದಂತೆ ಅವರ ಅಳಿಯ ಮಾರಾಟ ಮಾಡಿದ್ದು. ಇದರ ಬಗ್ಗೆ ಲಕ್ಷ್ಮಣ್‌ರವರ ಮಗ ನಾಗಣ್ಣನಿಗೆ ಗೊತ್ತಾಗುತ್ತಿದ್ದಂತೆ ಹಣ ಕೊಟ್ಟು ಅದರ ಹಕ್ಕನ್ನು ಮತ್ತೆ ಖರೀದಿಸಿದ್ದಾರೆ. ಆದರೆ ಲಕ್ಷ್ಮಣ್ ಅವರ ಕಳೆದು ಹೋದ ಆರೋಗ್ಯ ಮತ್ತೆ ಸುಧಾರಿಸುತ್ತದಾ? ಎಂಬುದು ಮಾತ್ರ ಪ್ರಶ್ನಾರ್ಥಕವಾಗಿಯೇ ಉಳಿದಿದೆ.



ತಾರಾಳ ಪ್ರಚಾರದ ಹುಚ್ಚು

ತಾರಾ ಎಂಬ ನಟಿ ತಾನು ಕಲಾತ್ಮಕ ಚಿತ್ರಗಳಲ್ಲಿ ನಟಿಸಿರುವುದರಿಂದ ತಾನೊರ್ವ ಬುದ್ಧಿಜೀವಿ ಎಂದು ಭ್ರಮಿಸಿರುವಂತಿದೆ. ಆದರೆ ಆಕೆಗೆ ಬುದ್ಧಿ ಎಂಬುದು ಸ್ವಲ್ಪ ಕಡಿಮೆ ಎಂದು ಈಗಾಗಲೇ ಸಾಬೀತಾಗಿದೆ. ಏಕೆಂದರೆ, ಖುಷ್ಬೂ ಎಂಬ ತಮಿಳು ನಟಿ ಮದುವೆ ಮುನ್ನ ಲೈಂಗಿಕ ಸಂಬಂಧಗಳ ಬಗ್ಗೆ ನೀಡಿದ ಹೇಳಿಕೆಯನ್ನು ವಿರೋಧಿಸಿದ್ದ ತಾರಾ "ಮಹಿಳೆಗೆ ಚಿಕ್ಕವಳಿದ್ದಾಗ ತಂದೆಯ ಆಶ್ರಯ. ಆನಂತರ ಗಂಡನ ಆಶ್ರಯ ಮತ್ತು ಮುಪ್ಪಿನಲ್ಲಿ ಮಗನ ಆಶ್ರಯ ಅಗತ್ಯ" ಎಂಬ ಮನು ಸಿದ್ಧಾಂತವನ್ನು ಪುನರುಚ್ಚರಿಸಿ ಮಹಿಳಾವಾದಿಗಳ ಕೆಂಗಣ್ಣಿಗೆ ತುತ್ತಾಗಿದ್ದಳು. ಹಾಗೆಯೇ ಮೊನ್ನೆ ಮೊನ್ನೆ ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ನಿಷೇಧಿಸಬೇಕು ಎಂದು ಹೇಳಿ ಮತ್ತೊಮ್ಮೆ ತನ್ನ ಬೌದ್ಧಿಕ ಬೆಳವಣಿಗೆ ಎಷ್ಟು ಎಂಬುದನ್ನು ತೋರಿಸಿದ್ದಳು ತಾರಾ.

ಈಗ ಇಂತಹದ್ದೇ ಮತ್ತೊಂದು ಹೇಳಿಕೆ ನೀಡಿದ್ದಾಳೆ ತಾರಮ್ಮ. ಅದೇನೆಂದರೆ, "ಮುಖ್ಯಮಂತ್ರಿಯವರ ಕಾರ್ಯವೈಖರಿಯನ್ನು ಮೆಚ್ಚಿ ನಾನು ಅವರ ಪಕ್ಷದ ಕ್ಯಾಂಡಿಡೇಟ್ ಪರವಾಗಿ ಪ್ರಚಾರ ಮಾಡಲು ಉಳ್ಳಾಲಿಗೆ ಬಂದಿದ್ದೇನೆ" ಎಂಬುದು. ಕಂಡವರ ಮನೆಯಲ್ಲಿ ಕುಮಾರಸ್ವಾಮಿ ಮಲಗುವುದು ಅದ್ಯಾವಾಗ ತಾರಮ್ಮನಿಗೆ ಮೆಚ್ಚುಗೆಯಾಯಿತು?

ಅದೇನೆ ಇರಲಿ, ಹಿಂದೊಮ್ಮೆ ಕಾಂಗ್ರೆಸ್ ಪಕ್ಷದ ಕ್ಯಾಂಡಿಡೇಟ್‌ನ ಚುನಾವಣಾ ಪ್ರಚಾರದಲ್ಲೂ ಹೀಗೆ ತೊಡಗಿದ್ದ ತಾರಾ ಅಂದು ಆತನಿಗೆ ಪ್ರಚಾರ ಪಡೆಯುವುದರ ಬದಲು ತಾನೇ ಹೆಚ್ಚು ಪ್ರಚಾರ ಗಿಟ್ಟಿಸಿದ್ದು ನಿಜ. ಈ ಬಾರಿಯೂ ತಾರಮ್ಮ ಹಾಗೆಯೇ ಮಾಡಿರಬಹುದೇ? ಯಾಕೆಂದರೆ, ಆಕೆಯನ್ನು ನೋಡಲು ಬಂದಿದ್ದ ಜನರ ಸಂಖ್ಯೆಗಿಂತಲೂ ಹೆಚ್ಚು ಸೆಕೆಂಡುಗಳ ಕಾಲ ತಾರಾ ಟೀವಿಗಳಲ್ಲಿ ಮಿಂಚಿದ್ದೇ ಜಾಸ್ತಿ!

ಹೇಗಿದೆ ತಾರಾಮಣಿ ತಾರಾಳ ತರ್ಕ?



ರಾಣಿ ಚೆನ್ನಮ್ಮ ಸರೋಜಾದೇವಿಗೆ ಸವಾಲು?

ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಲು ಸರೋಜಾದೇವಿಯವರು ನಟಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಪಾತ್ರವೊಂದೇ ಸಾಕು. ಇವತ್ತಿಗೂ ಅವರು ಘರ್ಜಿಸಿದ್ದ "ಯಾಕೆ ಕೊಡಬೇಕು ಕಪ್ಪ..?" ಎಂಬ ಡೈಲಾಗ್ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

ಆದರೆ ಈಗ ಅವರ ಈ ಸಾರ್ವಭೌಮತ್ವಕ್ಕೆ ಸವಾಲೊಂದು ಎದುರಾಗಿದೆ. ಅದೇನೆಂದರೆ, ಸದ್ಯದಲ್ಲೇ ನಾಗಣ್ಣ ನಿರ್ದೇಶನದಲ್ಲಿ 'ಸಂಗೊಳ್ಳಿ ರಾಯಣ್ಣ' ಎಂಬ ಚಿತ್ರ ಸೆಟ್ಟೇರಲಿದ್ದು, ಅದರಲ್ಲಿರುವ ರಾಣಿ ಚೆನ್ನಮ್ಮನ ಪಾತ್ರವನ್ನು ಜಯಪ್ರದಾ ನಿರ್ವಹಿಸಲಿದ್ದಾರಂತೆ. ಜಯಪ್ರದಾ ಕೂಡ ಸಾಮಾನ್ಯ ನಟಿಯೇನಲ್ಲ. ಆದ್ದರಿಂದ ಇನ್ನು ಮುಂದೆ ರಾಣಿ ಚೆನ್ನಮ್ಮನನ್ನು ತೆರೆಯ ಮೇಲೆ ಜೀವಂತವಾಗಿಸಿದ್ದಕ್ಕೆ ಸರೋಜಾದೇವಿಯವರಂತೆಯೇ ಜಯಪ್ರದಾ ಕೂಡ ಜನರಿಗೆ ನೆನಪಾಗಬಹುದೇ ಎಂಬ ಪ್ರಶ್ನೆ ಈಗ ಉದ್ಭವಿಸಿದೆ.

ಹುಟ್ಟುಹಬ್ಬದಂದು ಸ್ವಾತಂತ್ರದ ಸಂಭ್ರಮ




ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಕನ್ನಡ ಚಿತ್ರರಂಗದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಲಿದೆ. ಕಾರಣವಿಷ್ಟೇ: ಅಂದು ಅಂದಾಜು ಎಂಟು ಕೋಟಿ ರೂಪಾಯಿ ವೆಚ್ಚದ 'ಸಂಗೊಳ್ಳಿ ರಾಯಣ್ಣ' ಎಂಬ ಐತಿಹಾಸಿಕ ಚಿತ್ರ ಸೆಟ್ಟೇರಲಿದೆ. ಈ ಚಿತ್ರದಲ್ಲಿ ಸಂಗೊಳ್ಳಿ ರಾಯಣ್ಣನಾಗಿ ಅರ್ಜುನ್ ಸರ್ಜಾ ಅಬ್ಬರಿಸಲಿದ್ದಾರೆ.

ವಿಶೇಷವೆಂದರೆ ಆಗಸ್ಟ್ ಹದಿನೈದು ಅರ್ಜುನ್ ಸರ್ಜಾ ಹುಟ್ಟಿದ ದಿನ. ಅಷ್ಟೇ ಅಲ್ಲ, ಅದೇ ತಾರೀಖು ಹುಟ್ಟಿದ ನಟಿ ಭಾರತಿ ವಿಷ್ಣುವರ್ಧನ್ ಈ ಚಿತ್ರಕ್ಕೆ ಕ್ಲಾಪ್ ನೀಡಲಿದ್ದಾರೆ. ಅಂದಹಾಗೆ ಸ್ವತಂತ್ರ ದಿನಾಚರಣೆಯಂದೇ ಹುಟ್ಟಿದ ತಾರೆಗಳ ಪಟ್ಟಿಯಲ್ಲಿ ರಾಘವೇಂದ್ರ ರಾಜಕುಮಾರ್ ಮತ್ತು ಸುಧಾರಾಣಿ ಕೂಡ ಇದ್ದಾರೆ.



ಗೆದ್ದರೂ ಸೋತ 'ಕ್ಷಣ ಕ್ಷಣ'

ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ 'ಕ್ಷಣ ಕ್ಷಣ' ಈ ವಾರ ತೆರೆಕಂಡಿದೆ. ಈ ಚಿತ್ರದ ಬಗ್ಗೆ ತುಂಬಾ ಕುತೂಹಲವಿದ್ದದ್ದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು 'ತರ್ಕ', 'ನಿಷ್ಕರ್ಷ', 'ಉತ್ಕರ್ಷ'ದಂತಹ ಸಸ್ಪೆನ್ಸ್ ಚಿತ್ರಗಳಿಂದ ಸುನಿಲ್ ಕುಮಾರ್ ದೇಸಾಯಿ ಕನ್ನಡ ಚಿತ್ರರಂಗದಲ್ಲಿ ಸ್ಟಾರ್ ನಿರ್ದೇಶಕನಾಗಿ ಉದಯಿಸಿದ್ದರು. ಜೊತೆಗೆ ಕನ್ನಡ ಚಿತ್ರರಂಗಕ್ಕೆ ಹೊಸತನದ ಜೀವ ತುಂಬಿದ್ದರು. ಆದರೆ ಇತ್ತೀಚೆಗೆ ಅವರ ನಿರ್ದೇಶನದ ಹಲವಾರು ಚಿತ್ರಗಳು ಬಾಕ್ಸಾಫೀಸಿನಲ್ಲಿ ಇನ್ನಿಲ್ಲದಂತೆ ಮುಗ್ಗರಿಸಿದ್ದವು. ಈ ಕಾರಣಗಳಿಂದಾಗಿಯೇ 'ಕ್ಷಣ ಕ್ಷಣ' ದೇಸಾಯಿ ಪಾಲಿಗೆ 'ಮಾಡು ಇಲ್ಲವೇ ಮಡಿ' ಎಂಬಂತಾಗಿತ್ತು.



ಆದರೆ 'ಕ್ಷಣ ಕ್ಷಣ' ನಿರೀಕ್ಷಿಸಿದ್ದಷ್ಟು ಥ್ರಿಲ್ ಕೊಡುತ್ತಿಲ್ಲ. ಈ ಚಿತ್ರದಲ್ಲಿ ದೇಸಾಯಿಯವರ ಶ್ರಮ ಮತ್ತು ಪ್ರತಿಭೆ ಪ್ರತಿ ಫ್ರೇಮಿನಲ್ಲೂ ಎದ್ದುಕಾಣುತ್ತದೆ. ತಾಂತ್ರಿಕವಾಗಿಯೂ ಈ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ಹಿಂದಿ ಚಿತ್ರಗಳಷ್ಟೇ ಶ್ರೀಮಂತಿಕೆಯನ್ನು ಹೊಂದಿದೆ. ಆದರೆ ಇಷ್ಟೆಲ್ಲಾ ಇದ್ದರೂ ಕತೆ ಸೊರಗಿರುವುದರಿಂದ ಚಿತ್ರ ಮಜಾ ನೀಡುವುದಿಲ್ಲ. ಹೀಗಾಗಿ ದೇಸಾಯಿ ಮಗದೊಮ್ಮೆ ನಿರಾಶೆಗೊಳಿಸಿದ್ದಾರೆ.

ವಿಷ್ಣು ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ಬರೀ ಡಿಶುಂ ಡಿಶುಂ ಚಿತ್ರಗಳಲ್ಲಿ ಲಾಂಗು ಮಚ್ಚುಗಳನ್ನಿಡಿದು ಬೇಸರಪಡಿಸಿದ್ದ ಆದಿತ್ಯ ಈ ಚಿತ್ರದ ಮುಖಾಂತರ ತಮ್ಮ ಪ್ರತಿಭೆಯನ್ನು ಹೊರಚೆಲ್ಲಿದ್ದಾರೆ. ಇನ್ನು ಪ್ರೇಮಾ ಮತ್ತು ಕಿರಣ್ ರಾಥೋಡ್ ಇಬ್ಬರು ನಾಯಕಿಯರೂ ಫಿಫ್ಟಿ ಫಿಫ್ಟಿ



ಎನ್ನಬಹುದು. ಆದರೆ ಆರ್.ಪಿ ಪಟ್ನಾಯಕ್‌ರ ಅಬ್ಬರದ ಸಂಗೀತ ತಲೆ ಚಿಟ್ಟು ಹಿಡಿಸುತ್ತದೆ. ಪಾತ್ರಗಳ ಪೋಷಣೆ ಮತ್ತು ಜಾಳುಜಾಳಾದ ಚಿತ್ರಕತೆಯಿಂದಾಗಿ 'ಕ್ಷಣ ಕ್ಷಣ' ಅಷ್ಟೊಂದು ಖುಷಿ ಕೊಡುವುದಿಲ್ಲ. ಒಟ್ಟಾರೆಯಾಗಿ ಒಂದು ಚಿತ್ರವನ್ನು ಕುತೂಹಲಕಾರಿಯಾಗಿ ಪ್ರೇಕ್ಷಕರಿಗೆ ತಲುಪಿಸುವಲ್ಲಿ ದೇಸಾಯಿ ವಿಫಲಗೊಂಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44